## SCHEDULE

*Stamp Duty on Instruments*

| *Article No.* | *Description of instrument* | *proper Stamp duty* |
|---|---|---|
| 1 | 2 | 3 |
| xxx | xxx | xxx |
| 40 | Pastnership.— | |
| A. | Instrument of.— | |
| | (a) where the capital of the partnership does not exceed Rs. 500. | Twenty Rupees |
| | (b) in any other case | Eighty Rupees |
| B. | Dissolution of W | Forty Rupees |
| | Pawn or Pledge—See Agreement relating to Deposit of title deeds Pawn or Pledge (No.6). | |
| xxx | xxx | xxx |

### ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).—ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಈ ರಾಷ್ಟ್ರದ ಯೋಜನಾ ಬಗ್ಗೆ, ಕಾರ್ಯಕ್ರಮಗಳಲ್ಲಿ ನಾವು ಸಾಕಷ್ಟು ಸಫಲತೆಯನ್ನು ಕಾಣದೆ ಇರುವುದಕ್ಕೆ ಇರುವಂಥ ಕಾರಣಗಳನ್ನು ಗುರುತಿಸಲಿಕ್ಕೆ ಪ್ರಯತ್ನ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಮೂರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅತಿ ಹೆಚ್ಚಿನ ರೀತಿಯಲ್ಲಿ ಅಳವಡಿಸಿಕೊಂಡು ಕಾರ್ಯರೂಪಕ್ಕೆ ತಂದರೆ ಕೆಲವಾರು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ಪ್ರಸ್ತಾಪ ಮಾಡಿ, ಮೊದಲನೆಯದಾಗಿ ವಿದ್ಯಾಭ್ಯಾಸ, ಎರಡನೆಯದಾಗಿ ಅಭಿವೃದ್ಧಿ, ಕೆಲಸಗಳಿಂದ ದೊರೆಯುವಂಥ ಫಲವನ್ನು ನುಂಗಿ ಹಾಕುತ್ತಿರುವ ಜನಸಂಖ್ಯೆಯ ಹೆಚ್ಚಳವನ್ನು ಕಡಿಮೆ ಮಾಡುವುದಕ್ಕೆ ಕುಟುಂಬ ಕಲ್ಯಾಣ ಕಾರ್ಯಕ್ರಮ, ಮೂರನೆಯದಾಗಿ ಕೃಷಿ ಪ್ರಧಾನವಾದ ರಾಷ್ಟ್ರದಲ್ಲಿ ಬೇಕಾಗಿರುವಂಥ ನೀರಿಗಾಗಿ ಹೆಚ್ಚಿನ ಮಳೆಯನ್ನು ತಂದು ಕೊಡುವುದಕ್ಕೆ, ಕಲುಷಿತ ಪರಿಸರವನ್ನು ಸ್ವಚ್ಛ ಮಾಡಲಿಕ್ಕೆ ಯಥೇಚ್ಛವಾಗಿ ವಿಫಲವಾದ ಅರಣ್ಯವನ್ನು ಬೆಳೆಸಬೇಕೆಂಬ ಮಾತನ್ನು ಹೇಳುತ್ತಿದ್ದೆ. ಅರಣ್ಯವನ್ನು ಬೆಳೆಸುವಂಥ ದಿಸೆಯಲ್ಲಿ ನಮ್ಮ ಸರ್ಕಾರ ಮಾಡಿದಂಥ ಕೆಲಸ ಮುಂದೆ ನಿರೀಕ್ಷಿಸಿರುವ ಯೋಜನೆಗಳ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದ 2ನೇ ಪುಟದಲ್ಲಿ ಸಾಕಷ್ಟು ಅಂಕಿ ಅಂಶಗಳನ್ನು ಒದಗಿಸಿಕೊಟ್ಟಿದ್ದಾರೆ. ಸರ್ಕಾರದ ಕೆಲವು ಯೋಜನೆಗಳನ್ನು ಕುರಿತು ಅದರಲ್ಲಿಯೂ ಹೆಣ್ಣುಮಕ್ಕಳಿಗೆ ನಾವು ರೂಪಿಸಿರುವಂಥ ಯೋಜನೆಗಳನ್ನು ಕುರಿತು ಮಾತನಾಡುವಾಗ ಈ ಸದನದ ವಿರೋಧ ಪಕ್ಷದ ನಾಯಕಿಯವರ ಕಣ್ಣಲ್ಲಿ ನೀರನ್ನು ಕಂಡೆ. ನಾನು ವಾಪಸ್ಸು ಹೋದ ಮೇಲೆ ಅನ್ನಿಸಿತು, ನಾನು ಮಾತನಾಡುವಾಗ ಅವರ ಮನಸ್ಸು ನೋಯುವಂತೆ ಏನಾದರೂ ಮಾತನಾಡಿದನೆ ಅಥವಾ ನನ್ನ ಮಾತಿನಲ್ಲಿ ಮನಸ್ಸು ನೋಯುವಂಥದು ಏನಿತ್ತು ಎಂದು. ಸಾಮಾನ್ಯವಾಗಿ ಮಾತನಾಡುವಾಗ 2-3 ರೀತಿ ಇರುತ್ತದೆ. ಮಾತು ಮಾಣಿಕ್ಯದಂತೆ ಇರಬೇಕು. ಮಾತು ಮುತ್ತಿನಂತೆ ಇರಬೇಕು. ಮಾತು ಮೆಚ್ಚುವಂತೆ ಇರಬೇಕೆಂಬ ಪದ್ಯದ ಜ್ಞಾಪಕ ಬಂದು ಮಾತನಾಡುವಾಗ ಕೇಳುವಂಥರನ್ನು ಮೆಚ್ಚಿಸುವಂತೆ ಮಾತನಾಡಬೇಕೇ ಅನ್ನಿಸುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದೇನು ಅರ್ಥವಾಗಲಿಲ್ಲ,

ಶ್ರೀ ವೈ. ಕೆ. ರಾಮಯ್ಯ.—ಹೆಣ್ಣು ಮಕ್ಕಳ ಸಲುವಾಗಿ ಹಾಕಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಾತನಾಡುವಾಗ ತಾವು ನೊಂದುಕೊಂಡ ರೀತಿಯಲ್ಲಿತ್ತು. ಏಕೆಂದರೆ ಹೆಣ್ಣು ಮಕ್ಕಳ ಬಗ್ಗೆ ಅಪಾರ ಕಳಕಳಿ ಇರುವ ತಾವು ಉದ್ವೇಗದಿಂದ, ಅವರ ಸಮಸ್ಯೆಗಳ ಬಗ್ಗೆ ಕಳಕಳಿಯಿಂದ ಕಣ್ಣೀರು ಹಾಕಿದ್ದು ಕಂಡೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನ ಕಣ್ಣಿನಲ್ಲಿ ತೊಂದರೆ ಇರುವುದರಿಂದ ಆಗಾಗ್ಗೆ ಕಣ್ಣೀರು ಬರುತ್ತಾ ಇರುತ್ತದೆ.

ಶ್ರೀ ವೈ. ಕೆ. ರಾಮಯ್ಯ.—ಮನಸ್ಸು ನೋಯಿಸಿದೆನೇ ಎಂಬ ಭಯದಿಂದ ಹೇಳಿದೆ. ಮಾತನಾಡುವಾಗ ಕೇಳುವಂಥವರು ಮೆಚ್ಚುವಂತೆ ಮಾತನಾಡಬೇಕೇ ಅಥವಾ ಮನಸ್ಸಿನಲ್ಲಿ ಏನಿದೆ ಅದನ್ನು ಮಾತನಾಡಬೇಕೇ ಅಥವಾ ಪೇಪರ್‌ನಲ್ಲಿ ಹೆಡ್‌ಲೈನ್ ಬರುವಂತೆ ಮಾತನಾಡಬೇಕೇ—ಈ ರೀತಿ ೩-೪ ತರಹ ಮಾತುಗಳಿವೆ. ಆದರೆ ನಾನು ಎರಡನೇ ತರಹದಲ್ಲಿ ಮಾತನಾಡುವುದಕ್ಕೆ ಇಷ್ಟ ಪಡುತ್ತೇನೆ. ಅಂದರೆ ನನ್ನ ಮನಸ್ಸಿನಲ್ಲಿ ಏನಿದೆಯೋ ಅದನ್ನು ಮಾತನಾಡುತ್ತೇನೆ. ಇದರಿಂದ ಯಾರಿಗೆ ನೋವಾಗುತ್ತದೋ ಖುಷಿಯಾಗುತ್ತದೋ ಗೊತ್ತಿಲ್ಲ. ಈ ಮೂರು ರಾಷ್ಟ್ರೀಯ ಕಾರ್ಯಕ್ರಮಗಳಾದ ಮೇಲೆ ಅನಾದಿ ಕಾಲದಿಂದ ಆಳುವಂಥವರಿಗೆ ಇರುವಂಥ ಗುರುತರವಾದ ಜವಾಬ್ದಾರಿಯಲ್ಲಿ ಮೊದಲನೆಯದು ಈ ರಾಜ್ಯದ ಅಥವಾ ರಾಷ್ಟ್ರದ ಪ್ರಜೆಗೆ ಅನ್ನ, ಬಟ್ಟೆ ಒದಗಿಸಿಕೊಡುವುದರ ಜೊತೆಗೆ ಸುವ್ಯವಸ್ಥಿತವಾದ ಶಾಂತಿಯುತವಾದ ಬಾಳ್ವೆ ನಡೆಸುವುದಕ್ಕೆ ಬೇಕಾದಂಥ ಒಂದು ಪರಿಸ್ಥಿತಿಯನ್ನು, ಪರಿಸರವನ್ನು ಸೃಷ್ಟಿ ಮಾಡಬೇಕಾದುದು. ಇದು ಆಳುವವರ ಮುಖ್ಯ ಕರ್ತವ್ಯ. ೧೯೪೭ರಿಂದ ಈ ರಾಜ್ಯದಲ್ಲಿ ಗುಂಡು ಹಾರಿಸಲಿಲ್ಲ ಎಂದು ನಾನು ಹೇಳುವುದಿಲ್ಲ. ಮೊನ್ನೆಯಂತೂ ಗುಂಡು ಗುಂಡು ಎಂದು ಹೇಳುತ್ತಿದ್ದರು. ಅದು ಯಾವ ಗುಂಡಿನ ಬಗ್ಗೆ ಚರ್ಚೆಯೋ ಗೊತ್ತಿಲ್ಲ. ಹಿರಿಯ ಸದಸ್ಯರು ಹೇಳಿದರು, ಗುಂಡು ಹಾರಿಸದೇ ಇರುವ ರೀತಿಯ ಲಾಠಿಚಾರ್ಜ್ ಮಾಡದೇ ಇರುವ ರೀತಿಯ ಶಿಕ್ಷೆ ಕೊಡದೆ ರೀತಿಯ perhaps it may be possible in utopia not on earth ಈ ತರಹದ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಿ ರಾಜ್ಯ ಆಳಲಿಕ್ಕೆ ನಮಗೆ ಸಾಧ್ಯವಾಗಿಲ್ಲ. ಆದರೂ ಕೂಡ ಬೇರೆ ಕಡೆ ಹೋಗಿ ನೋಡಿದಾಗ ಈ ರಾಷ್ಟ್ರದ ಯಾವುದೇ ಭಾಗಕ್ಕಿಂತ ಉತ್ತಮವಾದ ಶಾಂತಿ ಸುವ್ಯವಸ್ಥೆ ನೆಲೆಯೂರುವುದಕ್ಕೆ ಅವಕಾಶವನ್ನು ಮಾಡಿಕೊಟ್ಟು ಈ ಸರ್ಕಾರ ಕೆಲಸ ಮಾಡಿದೆ. ಪಕ್ಷಭೇದವನ್ನು ಮರೆತು ಒಂದು ಗಳಿಗೆ ವಿಚಾರ ಮಾಡುವುದಾದರೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಾ ಇರತಕ್ಕ ನರಮೇಧ, ಪಂಜಾಬಿನಲ್ಲಿ ನಡೆಯುತ್ತಿರತಕ್ಕ ರಾಕ್ಷಸೀಕೃತ್ಯ, ತಾಂಡವ ನೃತ್ಯ ನೋಡಿದರೆ I wonder whether we have accepted this system today ಪಾಕೀಸ್ತಾನ ಆಗಿರಲಿ, ಅರಬ್ ದೇಶದಲ್ಲಿ ಆಗಿರಲಿ, ಪಂಜಾಬಿನಲ್ಲಿ ಆಗಿರಲಿ, ಕರ್ನಾಟಕದಲ್ಲಿ ಆಗಿರಲಿ ಪ್ರತಿನಿತ್ಯ ಯಾವುದೇ ಪತ್ರಿಕೆ ತೆಗೆದರೂ ೧೦ ಜನ, ೨೦ ಜನ ಗುಂಡು ಹೊಡೆದು ಸತ್ತರು ಎಂದು ಕಾಣುತ್ತದೆ. ಸಿಂಹಳದಲ್ಲಿ ಕೆಲವು ಘಟನೆಗಳು ಆಗುತ್ತಿವೆ. ಆದರೆ ಪಂಜಾಬಿನಲ್ಲಿ ನಡೆಯುತ್ತಿರತಕ್ಕ ರಾಕ್ಷಸೀಕೃತ್ಯವನ್ನು ತೆಗೆಯುವುದಕ್ಕೆ ಸಂಬಂಧಪಟ್ಟವರು ಅದಷ್ಟು ಜಾಗ್ರತೆ ಪ್ರಯತ್ನ ಮಾಡದೇ ಇದ್ದರೆ, ಕ್ರಮ ಕೈಗೊಳ್ಳದೇ ಇದ್ದರೆ ಬಹುಶಃ ನಾವೆಲ್ಲರೂ ಆಡಳಿತ ಮಾಡುವಂಥ ಪ್ರತಿಯೊಬ್ಬರೂ ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಶಾಂತಿ ನೆಲೆಯೂರಿದೆ, ಇಲ್ಲಿ ಮನುಷ್ಯನ ಜೀವಕ್ಕೆ ಅಪಾಯ ಇಲ್ಲ ಎಂಬ ಮಾತನ್ನು ಹೇಳುವಾಗ ಅದಕ್ಕೆ ಸಾಕ್ಷಿಯಾಗಿ ಇತ್ತೀಚೆಗೆ ನಡೆದಂಥ ಅಂತರ ರಾಷ್ಟ್ರೀಯ ಕಾರ್ಯಕ್ರಮವನ್ನು ಗಮನಿಸಬೇಕು. ಸಾರ್ಕ್ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಮಾಡಬೇಕೆಂಬ ತೀರ್ಮಾನವನ್ನು ರಾಷ್ಟ್ರೀಯ ನಾಯಕರು ತೆಗೆದುಕೊಂಡ ಮೂಲ ಕಾರಣ ಈ ರಾಜ್ಯದಲ್ಲಿ ಶಾಂತಿ ಇದೆ, ಯಾರ ಜೀವಕ್ಕೂ ಅಪಾಯ ಈ ರಾಜ್ಯದಲ್ಲಿಲ್ಲ ಎಂಬ ಒಂದೇ ದೃಷ್ಟಿ. ನಾನು ಆಗಲೇ ಹೇಳಿದ ಹಾಗೆ ವೈಯುಕ್ತಿಕ ಕಾರಣಗಳಿಗೆ ಆಸ್ತಿ ಇರಬಹುದು, ಹಣದ ವಿಷಯ ಇರಬಹುದು ಅಥವಾ ಹೆಣ್ಣಿನ ವಿಷಯಕ್ಕೆ ಇರಬಹುದು ನಡೆದಿರುವಂಥ ಸಣ್ಣ ಪುಟ್ಟ ಅಪರಾಧಗಳ ಹೊರತಾಗಿ ಪ್ರಾಮುಖ್ಯವಾಗಿ ಪಂಜಾಬಿನಲ್ಲಿ ವೆಸ್ಟ್ ಬೆಂಗಾಲದಲ್ಲಿ ನಡೆಯುತ್ತಿರತಕ್ಕ ರೀತಿಯಲ್ಲಿ ರಾಜಕೀಯ ಕಾರಣಗಳಿಗೆ ಹಿಂಸೆ ನಮ್ಮ ರಾಜ್ಯದಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ನಡೆದಿಲ್ಲ. ವೈಯುಕ್ತಿಕ ಕಾರಣಗಳಿಗೆ ಆಗಿರಬಹುದು. ಶ್ರೀನಿವಾಸ್ ಅವರು ತುಮಕೂರಿನಲ್ಲಿ ಆಗಿರುವ ವಿಚಾರವನ್ನು ಪ್ರಸ್ತಾಪ ಮಾಡಿದರು. ರಾಜಕೀಯ ಕಾರಣಗಳಿಂದಾಗಿ ಆ ಪರಿಸ್ಥಿತಿ ಉಂಟಾಗಿಲ್ಲ. ೧೯೭೦-೮೦ರ ದಶಕದಲ್ಲಿ ನಡೆದಂಥ ಪರಿಸ್ಥಿತಿ ನೋಡಿದಾಗ ಕೈಗಾರಿಕೆಗಳಲ್ಲಿ ಕೂಡ ಒಂದು ಶಾಂತಿಯುತವಾದ ಕೆಲಸ ನಡೆಯುತ್ತಿದೆ. ಅಲ್ಲಿ ಕೂಡ ಮುಷ್ಕರ ನಡೆಯುತ್ತಿಲ್ಲ. ನಮ್ಮ ಆರ್ಥಿಕ

ಸ್ಥಿತಿಯ ಬಗ್ಗೆ ಹೇಳುವುದಾದರೆ ಸನ್ಮಾನ್ಯ ಅಧ್ಯಕ್ಷರೆ ಮತ್ತೊಂದು ಪ್ರಾಮುಖ್ಯವಾದ ವಿಷಯವನ್ನು ನಾನು ಇಲ್ಲಿ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸ್ನೇಹಿತರಾದಂಥ ಪ್ರಕಾಶ್ ಅವರು ಈಗಾಗಲೇ ಮಾತನಾಡಿದ್ದಾರೆ. ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂತು ಎಂದು ಕುವೆಂಪು ಅವರಿಗೆ ತಿಳಿಸಿದಾಗ ಅವರು ಈ ರೀತಿ ಎರಡು ಸಾಲನ್ನು ಬರೆದಿಟ್ಟಿದ್ದಾರೆ. ''ಮುಗಿಯಿತು ಇಂದಿಗೆ ಗರ್ವರ ಕಾಲ—ಇದು ಸರ್ವರ ಕಾಲ'' ಪ್ರಜಾಪ್ರಭುತ್ವದಲ್ಲಿ ಶಕ್ತಿಯ ಮೂಲವನ್ನು ಹುಡುಕಿ ಕೊಂಡು ಹೋಗಬೇಕಾಗುತ್ತದೆ. ಯಾರು ಶಕ್ತಿಯ ಮೂಲವಾಗಿರುತ್ತಾನೋ what is the source of a power? A source of power in a democracy is the common man.

SRI B. BASAVALINGAPPA.—Not common man. Common people.

SRI Y.K. RAMAIAH.—All right, I will correct it myself. ಈ ಮೂಲವನ್ನು ಹುಡುಕಿಕೊಂಡು ಹೊರಟಾಗ ಈ ರಾಷ್ಟ್ರದಲ್ಲಿ ಎಷ್ಟರಮಟ್ಟಿಗೆ ಮತದಾರರ ಶಕ್ತಿಯನ್ನು, ಅವನ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ರಾಜ್ಯವನ್ನು ಆಳುತ್ತಿದ್ದೇವೆ ಎಂಬುದನ್ನು ನಾವು ನೋಡಿದ್ದೇವೆ. ಇದನ್ನು ಅರ್ಥಮಾಡಿಕೊಂಡು, ಗರ್ವರ ಒಂದು ಕಾಲದಲ್ಲಿ ಪಟೇಲರು ಊರಿನ ಯಜಮಾನಿಕೆಯನ್ನು ಮಾಡುತ್ತಿದ್ದರು. ಶ್ಯಾನುಭೋಗರು ಅವರಿಗೆ ಸಹಾಯ ಮಾಡುತ್ತಿದ್ದರು. ಅವರ ನಂತರ ಪಾಳ್ಯಗಾರರು ಇದ್ದರು. ನಂತರ ನಾಡಗೌಡರು ಅಂತ ಇದ್ದರು. ಇವರೆಲ್ಲಾರನ್ನು ಕಿತ್ತುಹಾಕಿ ಒಬ್ಬ ಸಾಮಾನ್ಯ ಮನುಷ್ಯನ ಆಡಳಿತದ ಶಕ್ತಿಯನ್ನು ನಾವು ನೋಡಬೇಕು ಎನ್ನುವ ಉದ್ದೇಶದಿಂದ ಜಿಲ್ಲಾಪರಿಷತ್ತು ಹಾಗೂ ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮಾಡಿದ್ದೇವೆ. ಈ ಸದನದಲ್ಲಿ ಒಂದು ಮಾತನ್ನು ತಮ್ಮ ಮೂಲಕ ಹೇಳಬೇಕು ಅಂದರೆ, ೧೯೮೩ರ ಹಿಂದೆ ಇದ್ದಂತಹ ವ್ಯವಸ್ಥೆಯಲ್ಲಿ ಸರ್ಕಾರ ಎನ್ನುವ ಮಾತನ್ನು ನಾನು ಉಪಯೋಗಿಸುವುದಿಲ್ಲ, ಹಿಂದಿನ ಹತ್ತಾರು ವರ್ಷಗಳ ಕಾಲ ಈ ರೀತಿಯ ಸಂಸ್ಥೆಗಳಿಗೆ ಪುರಸಭೆಗಳಿಗೆ ಚುನಾವಣೆಯನ್ನೇ ನಡೆಸಿರಲಿಲ್ಲ. ೧೯೮೩ರಿಂದೀಚೆಗೆ ಚುನಾವಣೆಯನ್ನು ಗೆಲ್ಲುತ್ತೇವೆ, ಅಥವಾ ಸೋಲುತ್ತೇವೆ ಎನ್ನುವ ರಿಸ್ಕ್‌ನ್ನು ತೆಗೆದುಕೊಂಡು ಮಂಡಲ್ ಪಂಚಾಯಿತಿ ಅಷ್ಟೇ ಅಲ್ಲ, ವಿಧಾನ ಸಭೆ ಅಷ್ಟೇ ಅಲ್ಲ, ಲೋಕಸಭೆ ಅಷ್ಟೇ ಅಲ್ಲ, ಕಾರ್ಪೊರೇಷನ್‌ಗಳಿಗೂ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೭೦ರಿಂದೀಚೆಗೆ ತಾಲ್ಲೂಕು ಬೋರ್ಡ್ ಹಾಗೂ ಪುರಸಭೆ ಗಳಿಗೆ ಚುನಾವಣೆಯೇ ನಡೆದಿಲ್ಲ.

ಶ್ರೀ ವೈ.ಕೆ. ರಾಮಯ್ಯ.—ಕಾರ್ಪೊರೇಷನ್‌ಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಗಳನ್ನು ನಡೆಸುವುದರ ಮೂಲಕ ಶಕ್ತಿಯ ಮೂಲವಾಗಿರತಕ್ಕ ಜನಸಾಮಾನ್ಯರಿಗೆ ನಾವು ಅಧಿಕಾರವನ್ನು ಕೊಡುವುದರಲ್ಲಿ ಯಶಸ್ವಿಯಾಗಿದ್ದೇವೆ. ಎಷ್ಟು ಕೊಳವೆ ಬಾವಿಗಳನ್ನು ಹಾಕಿದ್ದೇವೆ, ಎಷ್ಟು ರಸ್ತೆ ಗಳನ್ನು ಮಾಡಿದ್ದೇವೆ, ಎಷ್ಟು ಶಾಲೆಗಳನ್ನು ಕಟ್ಟಿದ್ದೇವೆ ಎನ್ನುವುದಕ್ಕಿಂತ ಹೆಚ್ಚಾಗಿ ನನ್ನ ವೈಯಕ್ತಿಕ ದೃಷ್ಟಿಯಲ್ಲಿ ಈ ಪಕ್ಷದ ಹಾಗೂ ಸರ್ಕಾರದ ಪ್ರಪ್ರಥಮವಾಗಿರತಕ್ಕ ಸಾಧನೆ ಯಾವುದಾದರೂ ಇದ್ದರೆ, ಅದು ಪಕ್ಷಾಂತರದ ತೊಂದರೆಯನ್ನು ತಡೆಯುವುದಕ್ಕಾಗಿ ತಂದಂತಹ ಪಕ್ಷಾಂತರ ನಿಷೇಧ ಕಾಯಿದೆ, ಅನೇಕ ಸಂದರ್ಭಗಳಲ್ಲಿ ಈ ಕಾಯಿದೆಯನ್ನು ತರುವಂತಹ ಅವಶ್ಯಕತೆ ಏನಿತ್ತು? ಎಂಬುದಾಗಿ ಕೆಲವರು ಕೇಳಬಹುದು. ಇದರ ಅವಶ್ಯಕತೆ ಏನಿತ್ತು ಎಂಬುದನ್ನು ನೋಡುವುದಾದರೆ, ೧೯೭೦-೮೦ರ ದಶಕದಲ್ಲಿ ಈ ರಾಷ್ಟ್ರದಲ್ಲಿ ಈ ರಾಜ್ಯದಲ್ಲಿ ನಡೆದುಹೋದ ಸಾರ್ವಜನಿಕ ಜೀವನದ ಗತಿಯನ್ನು ನೋಡಿದಾಗ ಈ ಕಾಯಿದೆಯ ಅವಶ್ಯಕತೆ ಬಂತು. ಭಾರತದಲ್ಲಿ ಪ್ರಜಾಪ್ರಭುತ್ವದ ಸಾಧನೆಗಳ ಪಟ್ಟಿಯನ್ನು ಮಾಡುವಾಗ ನನ್ನ ಸ್ನೇಹಿತರು ಒಬ್ಬರು ಹೇಳಿದರು, ಒಂದು ಜನಾಂಗವನ್ನು ಈ ರಾಷ್ಟ್ರದಲ್ಲಿ ಸೃಷ್ಟಿ ಮಾಡಿದ್ದೇವೆ ಅಂತ ಹೇಳಿದರು. ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಭಾರತ ದೇಶದಲ್ಲಿ ಒಂದು ಹೊಸ ಜನಾಂಗವನ್ನು ಸೃಷ್ಟಿ ಮಾಡಿದ್ದೇವೆ ಎನ್ನುವ ಮಾತನ್ನು ಅವರು ಹೇಳಿದರು. ಅವರು ಯಾರು? ಅವರ ಚರ್ಯೆ ಏನು? ಅವರ ಹೆಸರು ಏನು? ಅವರ ಕೆಲಸ ಏನು? ಎಂಬುದಾಗಿ ಕೇಳಿದಾಗ, ಅವರು ಹೇಳಿದರು ಅವರ ಹೆಸರು ಪುಡಾರಿಗಳು ಅಂತ, ಅವರ ಚರ್ಯೆ ಏನು ಅಂತ ಕೇಳಿದ್ದಕ್ಕೆ—ಜುಬ್ಬ, ಪಂಚೆ, ಹೆಗಲ ಮೇಲೊಂದು ಶಾಲು ಕೈಯ್ಯಲ್ಲೊಂದು ಡೈರಿ ಅಂತ ಹೇಳಿದರು. ಅವರ ಕೆಲಸವೇನು ಎಂಬುದಾಗಿ ಕೇಳಿದ್ದಕ್ಕೆ, ಬೆಳಗ್ಗೆಯಿಂದ ಸಂಜೆಯವರೆಗೆ ಸಾರ್ವಜನಿಕರು ಯಾರಾದರೂ ಅವರ ಕೆಲಸಕಾರ್ಯಗಳಿಗೆ ಬಂದಾಗ ಅವರ ತಲೆಯಮೇಲೆ ಕೈ ಇಟ್ಟು ಹೊಟ್ಟೆಪಾಡಿಗಾಗಿ, ಅವರನ್ನು ಸುಲಿದು ತಿನ್ನುವುದು ಅವರ ಕೆಲಸ ಅಂತ ಹೇಳಿದರು. ಆ ನನ್ನ ಸ್ನೇಹಿತರಿಗೆ ಈ ಸದನದ ಮುಖಾಂತರ ಒಂದು ಬಿನ್ನಹ ಮಾಡುವುದಕ್ಕೆ ಇಷ್ಟಪಡುತ್ತೇನೆ. ಬೇರೆ

ಸರ್ಕಾರಗಳಿಗಿಂತ ನಮ್ಮ ಸರ್ಕಾರ ಯಾವ ದೃಷ್ಟಿಯಿಂದ ಕೆಲಸ ಮಾಡುತ್ತಿವೆ? ಯಾವ ದೃಷ್ಟಿಯಿಂದ ಕಾರ್ಯಯೋಜನೆಗಳನ್ನು ನಿರೂಪಿಸಲಾಗುತ್ತಿದೆ ಎನ್ನುವ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ನಮಗೆ ಗುರಿ ಎಷ್ಟು ಮುಖ್ಯವೋ ಮಾರ್ಗ ಕೂಡ ಅಷ್ಟೇ ಮುಖ್ಯ. ೧೯೭೦ರ ದಶಕದಲ್ಲಿ ಈ ರಾಜ್ಯದಲ್ಲಿ ಒಂದು ನಡೆಯುದೇ ಇರತಕ್ಕಂತಹ ವಿಚಾರ ನಡೆದು ಹೋಯಿತು. ಅದು ಯಾವ ವಿಷಯ ಎಂದರೆ, ನಮ್ಮ ಸಂವಿಧಾನದಲ್ಲಿರುವಂತಹ directive principles of the State policies. ನಿರಸನ ತತ್ವಗಳಲ್ಲಿ ಈ ರಾಷ್ಟ್ರದ ಸಾಮಾನ್ಯ

೧-೦೦ ಪಿ.ಎಂ.

ಪ್ರಜೆಗೆ ಅನ್ನ, ಬಟ್ಟೆ ಒದಗಿಸಬೇಕಾದ ಒಂದು ಕರ್ತವ್ಯ ದೇಶವನ್ನು ಆಳುವವರಲ್ಲಿ ಇರುವುದಾದರೆ ಮೂಲಭೂತ ಹಕ್ಕುಗಳ ಅಧ್ಯಾಯನದಲ್ಲಿ ಅದೇ ಮೂಲಭೂತ ಹಕ್ಕುಗಳನ್ನು ಕೊಡಬೇಕೆಂದು ಇದೆ. ಈ ರೀತಿಯ ಒಂದು ಚಿಂತನೆ ೭೦ರ ದಶಕದಲ್ಲಿ ಬಂತು. ಬಹುಶಃ ಈ ದೇಶದಲ್ಲಿ ವಿರೋಧ ಪಕ್ಷದವರು Directive Principles of State policies implement ಮಾಡುವುದಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಈ ಒಂದು ಪ್ರಸ್ತಾಪ ಮನವರಿಕೆಯಾದುದು ಅಲ್ಲದೇ ಮುಖ್ಯಸ್ಥರ ಮನಸ್ಸಿನಲ್ಲಿ ಅದು ಬಂತು. ಇದು ಹೊಸದಾಗಿ ಬಂದ ಚಿಂತನೆಯಲ್ಲ. ನ್ಯೂರೋರವರೇ ಇದನ್ನು ಹೇಳಿದ್ದಾರೆ. ಈ ರಾಷ್ಟ್ರದಲ್ಲಿ ರಾಮರಾಜ್ಯ ತರಬೇಕು. Socialistic pattern of Society ತರಬೇಕು, Socialistic pattern of Democracy ತರಬೇಕು ಎನ್ನುವ ಸಂದರ್ಭದಲ್ಲಿ ಆ ನಿಕಟವಾದ ನಿಶ್ಚಲವಾದ ಬಯಕೆ ನನಗೆ ಇದ್ದರೂ ಕೂಡಾ ನಾನು ತರಬೇಕಾದ ರಾಮರಾಜ್ಯ ನಾನು ಕಟ್ಟಬೇಕಾದ Socialist democratic country is not on the graveyard of fundamental rights ಎಂದಿದ್ದಾರೆ. ವ್ಯಕ್ತಿ ಸ್ವಾತಂತ್ರ್ಯದ ಸಮಾಧಿ ಮೇಲೆ ರಾಮರಾಜ್ಯವನ್ನು ಕಟ್ಟುವುದಕ್ಕೆ ಭೂಗತ ಮಾಡಿ ಬೂದಿಯ ಮೇಲೆ ಸಾಮ್ರಾಜ್ಯ ಕಟ್ಟುವುದರ ಬದಲು ವ್ಯಕ್ತಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅಂತಹ ಒಂದು ವ್ಯವಸ್ಥೆಯಲ್ಲಿ ಅಂತಹ ಒಂದು ವ್ಯವಸ್ಥೆಯನ್ನು ತರಬೇಕೆಂದು ಇಟ್ಟುಕೊಂಡಿದ್ದೇವೆಂದು ಹೇಳಿದರು. ಅದನ್ನೇ ಆಧಾರದಲ್ಲಿ ಇಟ್ಟುಕೊಂಡು ಎಪ್ಪತ್ತರ ದಶಕದಲ್ಲಿ ನಿರಸನ ತತ್ವಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಬಡತನ ನಿರ್ಮೂಲನ ಮಾಡುವುದಕ್ಕೆ ಬೇರೆಯವರು ವಿರೋಧ ಮಾಡುತ್ತಿದ್ದಾರೆ ಎನ್ನುವ ಭಾವನೆಗೆ ನಾವು ವಿರೋಧ ನಡೆದುಕೊಂಡಿದ್ದೇವೆ. ಕರ್ನಾಟಕ ಸರ್ಕಾರದಲ್ಲಿ ಮಾಡುತ್ತಾ ಇರುವ ಪ್ರಯೋಗ ಅದು. ಈ ರಾಜ್ಯದಲ್ಲಿ ಕೆರೆ ಕಟ್ಟಬೇಕು, ಭಾವಿ ತೋಡಬೇಕು, ರಸ್ತೆ ಮಾಡಬೇಕು, ಅನ್ನ ಕೊಡಬೇಕು ಎನ್ನುವ ವಿಷಯವನ್ನು ಕಾರ್ಯರೂಪಕ್ಕೆ ತರುವ ದೃಷ್ಟಿಯಲ್ಲಿ ಈ ರಾಜ್ಯದಲ್ಲಿ ಸಂಪೂರ್ಣವಾಗಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ದಕ್ಕೆ ಬರಬಾರದು ಎಂದು ನಾವು ತಿಳಿದುಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಇವರು ಹೇಳತಕ್ಕ ಧಾಟಿ ನೋಡಿದರೆ ರಾಮರಾಜ್ಯ ತಂದಿದ್ದೇವೆಂದು ಹೇಳುತ್ತಿದ್ದಾರೆ. ರಾಮ ಮತ್ತು ಕೃಷ್ಣ ಎಂದರೆ, ರಾಮಕೃಷ್ಣ ರಾಜ್ಯ. ಬರೀ ರಾಮ ರಾಜ್ಯ ಅಲ್ಲ.

ಶ್ರೀ ವೈ.ಕೆ. ರಾಮಯ್ಯ.—ಅಧ್ಯಕ್ಷರೇ. ನಾವು ಈ ವಿಭಿನ್ನವಾದ ಒಂದು ಕಾರ್ಯಕ್ರಮವನ್ನು ಹಾಕುವ ಸಂದರ್ಭದಲ್ಲಿ ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಕಾರ್ಯಕ್ರಮಗಳನ್ನು ಹಾಕಿದ್ದೇವೆ.

ಇನ್ನು ಎರಡನೆಯದಾಗಿ, ಈ ಚುನಾವಣೆಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮೊನ್ನೆ ಒಂದು ಮಾತನ್ನು ಹೇಳುತ್ತಿದ್ದರು. ಅದು ಏನೆಂದರೆ, ಚುನಾವಣೆಗಳು ಸರಿಯಾದ ರೀತಿ ನಡೆಯುತ್ತಿಲ್ಲ, ಭ್ರಷ್ಟಾಚಾರ ಚುನಾವಣೆಗಳಲ್ಲಿ ಜಾಸ್ತಿಯಾಗಿದೆ ಎಂದು. ಅವರ ಭಾಷೆಯಲ್ಲಿಯೇ ಹೇಳುವುದಾದರೆ, ಚುನಾವಣೆಗಳಲ್ಲಿ ಹೆಂಡ ಕುಡಿಸಿದರು, ಮಾಂಸಖಂಡ ತಿನ್ನಿಸಿದರು, ಹಣವನ್ನು ಹಂಚಿದರು ಎಂದು, ಸನ್ಮಾನ್ಯ ಅಧ್ಯಕ್ಷರೇ, ಹೆಂಡ ಕುಡಿಸಿದ್ದು, ಖಂಡ ತಿನ್ನಿಸಿದ್ದು ಹಣವನ್ನು ಕೊಟ್ಟಿದ್ದು ವಿರೋಧ ಪಕ್ಷದ ನಾಯಕರಿಗೆ ಎಷ್ಟು ನೋವನ್ನು ತಂದಿದೆಯೋ ಅದಕ್ಕಿಂತ ಸಾವಿರ ಪಾಲು ನೋವು ನನಗಾಗಿದೆ. ನಾನು ನೋಡಿದ್ದೇನೆ. ಒಂದು ಕಡೆ ಹುರಿದ ಮಾಂಸದ ಮುಂಕ್ರಿ, ಹೆಂಡದ ಹಂಡೆ, ಹೆಗಲ ಮೇಲೆ ದುಡ್ಡಿನ ಚೀಲ ಇದು ಒಂದು ಪಕ್ಷಕ್ಕೆ, ಒಬ್ಬ ವ್ಯಕ್ತಿಗೆ ಅಥವಾ ಒಬ್ಬ ಶಾಸಕನಿಗ ಸೀಮಿತವಾದ ದುಸ್ಥಿತಿಯಲ್ಲ. ಮೂಲಭೂತ ಪ್ರಶ್ನೆ ಏನೆಂದರೆ, ಇದಕ್ಕೆ ಕಾರಣಕರ್ತರು ಯಾರು? ಈ ದುಸ್ಥಿತಿಗೆ ಈ ಸದನದಲ್ಲಿ ಕುಳಿತಿರುವ ನಾವು ಅಷ್ಟೇ ಕಾರಣರು ಅಲ್ಲ, ಅಥವಾ ಕೆಲವೇ ಪಕ್ಷಗಳು ಕಾರಣ ಅಲ್ಲ, ಅಥವಾ ಕೆಲವು ಪಕ್ಷಗಳ ನಾಯಕರು ಕಾರಣ ಅಲ್ಲ. ಈ ಒಂದು ದುಸ್ಥಿತಿಗೆ ಬಹುಶಃ ಇಡೀ ವ್ಯವಸ್ಥೆಯೇ ಕಾರಣ. ಏನಾದರೂ ಮಾಡಿ ಅಧಿಕಾರಕ್ಕೆ ಬರಬೇಕು ಎನ್ನುವ ಹುಚ್ಚು

ಅಧಿಕಾರಕ್ಕೆ ಬಂದಮೇಲೆ ಏನಾದರೂ ಮಾಡಿ ಅದನ್ನು ಉಳಿಸಿಕೊಳ್ಳಬೇಕೆನ್ನುವ ಹಂಬಲ, ಈ ಎರಡೂ ಚಟಗಳು ಬಹುಶಃ ರಾಜಕೀಯದಲ್ಲಿ, ಸಾರ್ವಜನಿಕ ಜೀವನದಲ್ಲಿ ಇರುವುದೇ ಕಲುಷಿತ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಕಾರಣವಾಯಿತು. ನಾನು ಮೊನ್ನೆ ತಾನೆ ಈ ಸಭೆಯಲ್ಲಿ ಒಂದು ಮಾತನ್ನು ಹೇಳಿದ್ದೇನೆ. ೭೦-೮೦ರ ದಶಕದಲ್ಲಿ ಭಾರತದ ಸಾರ್ವಜನಿಕ ಜೀವನದ ಬಗ್ಗೆ ವಿಶ್ಲೇಷಣೆ ಮಾಡಿದ ಒಬ್ಬರು ಒಂದು ಮಾತನ್ನು ಹೇಳಿದರು. ಅದು ಈ ರೀತಿ ಇದೆ. Public morality has been degenerated to the lowest denomination. It is not degraded. It is degenerated to the lowest denomination. ೭೦-೮೦ರ ದಶಕದಲ್ಲಿ ಭಾರತ ರಾಷ್ಟ್ರದ ಸಾರ್ವಜನಿಕ ಜೀವನ ಮೌಲ್ಯ ಅಥವಾ ನೀತಿ ಒಂದು ಪೈಸೆಯ ಕೆಳಗೆ ಇದೆ. ಅದರ ಫಲವಾಗಿ ಪಕ್ಷಾಂತರ ನಿಷೇಧ ಕಾಯಿದೆಯನ್ನು ತರಬೇಕಾಗಿದೆ. ನಾವು ನೋಡಿದ್ದೇವೆ ಆಯಾರಾಂ ಗಯಾರಾಂ ಒಂದು ಸಂಸ್ಕೃತಿ ಹುಟ್ಟಿತ್ತು. ಆಂಧ್ರಪ್ರದೇಶದ ನಮ್ಮ ಶಾಸಕ ಮಿತ್ರರು ನಂದಿಬೆಟ್ಟದಲ್ಲಿ ಉಳಿದುಕೊಳ್ಳಬೇಕಾಯಿತು. ಇದು ನಮ್ಮ ರಾಜ್ಯದಲ್ಲಿ ನಡೆದುಹೋಗಿದೆ, ನಡೆದಿದೆ. ಒಟ್ಟಾರೆ ೭೦-೮೦ರ ದಶಕದಲ್ಲಿ ರಾಷ್ಟ್ರದಲ್ಲಿ ಸಾರ್ವಜನಿಕ ಜೀವನದಲ್ಲಿ ನೀತಿ ಅಧಃಪತನಕ್ಕೆ ಹೋಗಿದೆ. ಭ್ರಷ್ಟಾಚಾರ, ಅಧಿಕಾರ ಲಾಲಸೆ, ಸ್ವಜನ ಪಕ್ಷಪಾತಗಳು ಏನು ತಾಂಡವವಾಡುತ್ತಿವೆ ಅವುಗಳಿಗೆ ಏನಾದರೂ ಕಡಿವಾಣ ಹಾಕಲಿಕ್ಕೆ ಸಾಧ್ಯವಾಗುತ್ತದೆಯೋ ಎನ್ನುವ ಮೂಲ ಉದ್ದೇಶವನ್ನು ಇಟ್ಟುಕೊಂಡು ಪಕ್ಷಾಂತರ ನಿಷೇಧ ಕಾಯಿದೆಯನ್ನು ಜನತಾ ಪಕ್ಷದ ಸರ್ಕಾರ ಮೊಟ್ಟಮೊದಲನೆಯದಾಗಿ ತಂದಿದೆ. ನನ್ನ ದೃಷ್ಟಿಯಲ್ಲಿ ಇದು ಮೊದಲು. ರಾಷ್ಟ್ರಮಟ್ಟದಲ್ಲಿ ತಂದಿದ್ದಾರೆ ನಾನು ಅಭಿನಂದಿಸುತ್ತೇನೆ. ಪಕ್ಷದ ಸಾಧನೆಯ ಬಗ್ಗೆ ಮಾತನಾಡುವಾಗ ನಾನು ಒಂದು ಮಾತನ್ನು ಹೇಳುತ್ತೇನೆ. It is only a difference in degree. ನಾಲ್ಕು ವರ್ಷಗಳಲ್ಲಿ ರಾಜ್ಯದ ಆದಾಯವನ್ನು ಕೋಟ್ಯಾಂತರ ರೂಪಾಯಿ ಜಾಸ್ತಿ ಮಾಡಿದ್ದೇವೆಂದು ಹೇಳುವ ಭ್ರಮೆ ನನಗಿಲ್ಲ. ಎಲ್ಲಾ ಮನೆಗಳಿಗೆ ಅನ್ನ ಕೊಟ್ಟಿದ್ದೇವೆಂದು ಹೇಳುವ ಹುಂಬತನ ನನಗಿಲ್ಲ. ನಮ್ಮ ವಿಫಲತೆಯ ಸಂಪೂರ್ಣ ಅರಿವು ನಮಗಿದೆ. ಭ್ರಷ್ಟಾಚಾರದ ಬಗ್ಗೆ ಮಾತನಾಡುವಾಗ ಭ್ರಷ್ಟಾಚಾರ ಭಾರತದಲ್ಲಿ ಇದೆಯೋ ಕರ್ನಾಟಕ ರಾಜ್ಯದಲ್ಲಿ ಇದೆಯೋ ಎನ್ನುವ ಮಾತು ಬಂದಾಗ It is an old phenomenon ನಾವು ಶುದ್ಧರಲ್ಲ. ಭ್ರಷ್ಟಾಚಾರ ಎಲ್ಲಾ ಕಡೆ ಇದೆ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವೆಂದು ಹೇಳುವಂತಹ ದಡ್ಡನಲ್ಲ. ಭ್ರಷ್ಟಾಚಾರಕ್ಕೆ ಲಗಾಮು ಹಾಕಿ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡಿದೆ. ಸಂಪೂರ್ಣವಾಗಿ ಭ್ರಷ್ಟಾಚಾರವನ್ನು ತೊಡೆದುಹಾಕುವುದಕ್ಕೆ ಪ್ರಯತ್ನ ಮಾಡಿಲ್ಲ, ನೀವು ಅದರಲ್ಲಿ ಸಫಲವಾಗಿಲ್ಲವೆಂದು ಸ್ನೇಹಿತರು ಕೇಳಬಹುದು. ಭ್ರಷ್ಟಾಚಾರವನ್ನು ತೊಡೆದು ಹಾಕುವಂತಹ ಕಾರ್ಯವನ್ನು ಈಗಿರುವಂತಹ ವ್ಯವಸ್ಥೆಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ೪೦ ವರ್ಷದ ಈ ಚರಿತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿ ಇಂತಹವರೇ ಸಾರ್ವಜನಿಕ ಹಣವನ್ನು ತಿಂದು ಹಾಕಿದ್ದಾರೆ ಎನ್ನುವ ನಿರ್ದಿಷ್ಟವಾದ ಪ್ರಕರಣಗಳು ನಮ್ಮ ಕೈಗೆ ಸಿಗುತ್ತವೆ. ಆದರೆ ಒಬ್ಬರಿಗೆ ಛಡಿ ಏಟು ಕೊಡಲಿಲ್ಲ. ಸಾರ್ವಜನಿಕ ಜೀವನದಲ್ಲಿರತಕ್ಕ ಮಂತ್ರಿಮಹೋದಯರಿಗೆ ನೇಣು ಹಾಕಲಿಲ್ಲ. ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಾರೆ. ಒಂದು ಪಕ್ಷದಿಂದ ಪಕ್ಷಾಂತರ ಮಾಡಿ ಮತ್ತೊಂದು ಪಕ್ಷದಿಂದ ಚುನಾವಣೆಯಲ್ಲಿ ಆರಿಸಿ ಬಂದರೆ ಅಂತಹವರಿಗೆ ಈ ದೇಶದಲ್ಲಿ ಶಿಕ್ಷೆಯಿಲ್ಲ. ನಮ್ಮ ಪಕ್ಷದಿಂದ ಹೊರಗೆ ಹೋದಂತಹ ಒಬ್ಬರು ಲೋಕಸಭಾ ಚುನಾವಣೆಯಲ್ಲಿ ೪ ಲಕ್ಷ ಅಂತರದಿಂದ ಗೆದ್ದು ಬಂದರು, ಇದು ಭ್ರಷ್ಟಾಚಾರ ಅಲ್ಲವೇನು? ಭ್ರಷ್ಟಾಚಾರ ಅಂದರೆ ಕೇವಲ ಹಣ ಕೊಡುವುದಲ್ಲ. ಪಕ್ಷ ಬದಲಾವಣೆ ಮಾಡುವುದು, ಸ್ಥಾನ ಬದಲಾವಣೆ ಮಾಡಿಕೊಳ್ಳುವುದು ಅದರಲ್ಲಿಯೂ ಕೂಡ ಭ್ರಷ್ಟಾಚಾರ ಇದೆ. ಈ ವಿಷಯದಲ್ಲಿ ಒಂದು ಮಾತನ್ನು ಹೇಳಿದರೆ ಕಟುವಾಗಬಹುದೆಂದು ಅನಿಸುತ್ತದೆ. ಈ ರಾಜ್ಯದಲ್ಲಿ ಕೆಲಸ ಮಾಡುವಂಥ ನಮ್ಮ ಕರ್ಮಚಾರಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ನಾವು ಒದಗಿಸಿರುವಂಥ ಸವಲತ್ತು ಯಾವುದೇ ರಾಜ್ಯದ ಸರ್ಕಾರಿ ನೌಕರರಿಗಿಂತ ಕಡೆ ಇಲ್ಲ. ಯಾವುದೇ ದೇಶದ ಸರ್ಕಾರಿ ನೌಕರರಿಗಿಂತ ಕಡಿಮೆ ಇಲ್ಲ. ಆದರೆ ಬಹಳ ನೋವಿನಿಂದ ಒಂದು ಮಾತನ್ನು ಹೇಳಬೇಕಾಗುತ್ತದೆ. ಆಡಳಿತ ಯಂತ್ರವನ್ನು ನಡೆಸುವಂಥ ನಮ್ಮ ನೌಕರರು ಈ ರಾಷ್ಟ್ರದಲ್ಲಿ ಆಡಳಿತ ವ್ಯವಸ್ಥೆ ಕೆಟ್ಟಿರತಕ್ಕಂಥ ಕಿರುಕುಳ ಏನಿದೆ, ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ ಅಷ್ಟು ಕೆಟ್ಟಿರುವುದಿಲ್ಲ. ಮೂರು ಸಾವಿರ ರೂಪಾಯಿ ಸಂಬಳ ತೆಗೆದುಕೊಂಡು ತಿಂಗಳ ೩೦ ದಿವಸಗಳಲ್ಲಿ ಒಂದು ದಿವಸವೂ ಕಛೇರಿಗೆ ಹೋಗದೇ ಇರತಕ್ಕಂಥ ಸರ್ಕಾರಿ ನೌಕರರೂ ಇದ್ದಾರೆ. ಇಲ್ಲಿ ಒಂದು ಮಾತನ್ನು ಹೇಳಿದರೆ ಸಪ್ಪಿಗಲಾರದು ಎಂದು ಭಾವಿಸುತ್ತೇನೆ. ಗೆದ್ದ ಮೇಲೆ ಐದು ವರ್ಷಗಳ ಕಾಲ ತಮ್ಮ ಕ್ಷೇತ್ರಕ್ಕೆ ಹೋಗದೇ ಇರುವಂಥ ಶಾಸಕರೂ ಇದ್ದಾರೆ. ಈ ಒಂದು ವ್ಯವಸ್ಥೆ ಮೂಲಭೂತವಾಗಿ ಹೇಗೆ ಬಂತು ಎಂದರೆ, ಹೇಗಾದರೂ ಮಾಡಿ, ಏನನ್ನಾದರೂ ಮಾಡಿ ಗೆದ್ದ ಮೇಲೆ ಪುನಃ ಆರಿಸಿ ಬಂದ ಕ್ಷೇತ್ರಕ್ಕೆ

ಹೋಗುವುದಿಲ್ಲ. ಸ್ನೇಹಿತರೊಬ್ಬರು ಹೇಳಿದಹಾಗೆ ಹೆಂಡ, ಹಣ ಮತ್ತಿತರ ಆಮಿಷಗಳನ್ನು ಒಡ್ಡಿ ಗೆದ್ದು ಬರುವಂಥ ಈ ಭ್ರಷ್ಟ ವ್ಯವಸ್ಥೆ ಏನಿದೆ, ಇದು ಬದಲಾವಣೆ ಆಗಬೇಕೆಂಬುದು ನಮ್ಮ ಇಚ್ಛೆ. ಇದು ಹೇಗೆ ಬದಲಾವಣೆ ಆಗಬೇಕು ? ಒಬ್ಬ ಭ್ರಷ್ಟ ಅಧಿಕಾರಿಯನ್ನು ಅಧಿಕಾರದಿಂದ ಕೆಲವು ದಿನ ತೆಗೆದುಹಾಕಿದರೆ ಶಾಸಕರು, ನಾನೂ ಕೂಡ ಸೇರಿ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಒತ್ತಾಯ ಮಾಡುತ್ತೇವೆ. ನಮ್ಮ ಕಡೆಯಿಂದ ಮುಖ್ಯಮಂತ್ರಿಯವರಿಗೆ ಹೋಗುವ ಕಾಗದಪತ್ರಗಳಲ್ಲಿ ಶೇಕಡ ಎಂಬತ್ತರಷ್ಟು ಇಂತಹ ವರ್ಗಾವಣೆ, ಅಥವಾ ರಿವೋಕೇಶನ್‌ಗೆ ಸಂಬಂಧಪಟ್ಟಿದ್ದು ಇರುತ್ತವೆ. ಐ.ಪಿ.ಸಿ. ಯಲ್ಲಿ ಬರುವ ಮೋಟಾರ್ ವೆಹಿಕಲ್ಸ್ ಆ್ಯಕ್ಟ್‌ನಲ್ಲಿ ನೆಗ್ಲಿಜೆನ್ಸಿ ಇನ್ ಡ್ರೈವಿಂಗ್–ಇದರಲ್ಲಿ ನಿರ್ಲಕ್ಷ್ಯತನದಿಂದ ಅತಿವೇಗವಾಗಿ ಕಾರನ್ನು ಓಡಿಸಿಕೊಂಡು ಹೋಗಿ ಅಪಘಾತಕ್ಕೆ ಈಡಾದರೆ ಕಾರಿನ ಚಾಲಕನಿಗೆ ಶಿಕ್ಷೆ ಕೊಡಬೇಕು. ಮುಂದೆ ಒಂದು ಪ್ರಶ್ನೆ ಬರುತ್ತದೆ. ಚಾಲಕ ಅತಿವೇಗವಾಗಿ ಕಾರನ್ನು ಓಡಿಸುವುದರ ಜೊತೆಗೆ ಅಡ್ಡ ಬರತಕ್ಕಂಥವರೂ ಕೂಡ ಕಾಂಟ್ರಿಬ್ಯೂಟ್ ಮಾಡಿರುತ್ತಾರೆ. ಅಂತಹ ಸಂದರ್ಭದಲ್ಲಿ ಕೇವಲ ಚಾಲಕನಿಗೆ ಅಷ್ಟೇ ಅಲ್ಲ ಓಡಿ ಬರತಕ್ಕವನದ್ದೂ ಕೂಡ ತಪ್ಪು ಇರುತ್ತದೆ. ಹಾಗೆಯೇ ಈ ಭ್ರಷ್ಟಾಚಾರ ವ್ಯವಸ್ಥೆಯಲ್ಲಿ ಆಳುವವರು ಅಷ್ಟೇ ಕಾರಣರಲ್ಲ, ವಿರೋಧಪಕ್ಷದವರೂ ಕೂಡ ಕಾಂಟ್ರಿಬ್ಯೂಟ್ ಮಾಡುತ್ತಿದ್ದಾರೆ. ಎಂದರೆ ತಪ್ಪಾಗಲಾರದು. ಇವರ ಜೊತೆಗೆ ಆಳುವವರು ಅಷ್ಟೇ ಅಲ್ಲ, ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ಜನಗಳು ಕೂಡ ಕಾಂಟ್ರಿಬ್ಯೂಟ್ ಮಾಡುತ್ತಿದ್ದಾರೆ. ಇದು ನಮಗೆ ಬಂದಿರುವ ಸಮಸ್ಯೆ. ಜನರು ನಮ್ಮ ಹತ್ತಿರ ಬರುತ್ತಾರೆ. ಏನೆಂದು ಕೇಳಿದರೆ "ಸ್ವಾಮಿ, ಕಂಡಕ್ಟರ್ ನಾಲ್ಕೈದು ಸೀಟುಗಳನ್ನು ಬಿಟ್ಟಿದ್ದಕ್ಕೆ ಆತನನ್ನು ಸಸ್ಪೆಂಡ್ ಮಾಡಿದ್ದಾರೆ. ವೀರಣ್ಣನವರಿಗೆ ಒಂದು ಮಾತನ್ನು ಹೇಳಬೇಕು" ಎಂದು ಹೇಳುತ್ತಾರೆ. ಅವರು ತೀರಾ ಬೇಕಾದಂಥ ವ್ಯಕ್ತಿ. ಚುನಾವಣೆ ಸಂದರ್ಭದಲ್ಲಿ ಹಗಲುರಾತ್ರಿ ದುಡಿದು ನನ್ನ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದಂಥ ವ್ಯಕ್ತಿ. ನಾಲ್ಕೈದು ಸೀಟುಗಳನ್ನು ಬಿಟ್ಟುಹಾಕಿದ್ದಾನೆ, ಆದ್ದರಿಂದ ಆ ಕಂಡಕ್ಟರ್‌ನನ್ನು ಸಸ್ಪೆಂಡ್ ಮಾಡಿದ್ದಾರೆ, ಅದನ್ನು ರಿವೋಕ್ ಮಾಡಿ ಎಂದು ಅವರ ಬೇಡಿಕೆ. ಹೀಗಿರುವಾಗ ಇದನ್ನು ಸಂಪೂರ್ಣವಾಗಿ ನಾವು ತೊಡೆದುಹಾಕುವುದಕ್ಕೆ ಸಾಧ್ಯವಾಗಿಲ್ಲ. ಮತ್ತೊಂದು ವಿಫಲತೆ ಬಗ್ಗೆ ನಮಗೆ ಅರಿವು ಇಲ್ಲ. ಆಳುವವರು ಮತ್ತು ಜನಸಾಮಾನ್ಯರ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವುದರಲ್ಲಿ ನಾವು ಯಶಸ್ವಿ ಆಗಿದ್ದೇವೆಯೆ ? ರಾಜಮಹಾರಾಜರ ಕಾಲದಲ್ಲಿ ಏನು ಪರಿಸ್ಥಿತಿ ಇತ್ತೋ, ಆ ಪರಿಸ್ಥಿತಿ ಪೂರ್ಣವಾಗಿ ಬದಲಾವಣೆ ಆಗಿದೆ ಎಂದು ಹೇಳಿದ್ದರೂ, ಸ್ವಲ್ಪ ಮಟ್ಟಿಗೆ ಆ ಪರಿಸ್ಥಿತಿ ಉಳಿದಿದೆ. ಆಳುವಂಥ ಜನ ಈ ಜನಸಾಮಾನ್ಯರ ಗುಲಾಮರು, ಕಂದಾಯ ಕೊಡುವವರು ಅವರು, ನಮಗೆ ಸಂಬಳ ಕೊಡುವವರು ಅವರು, ಜನಸಾಮಾನ್ಯರ ಉಪ್ಪು ತಿಂದು ಬದುಕುತ್ತಿದ್ದೇವೆ ಎನ್ನುವಂಥ ಪ್ರಜ್ಞೆಯನ್ನು ಆಳುವವರಲ್ಲಿ ಮೂಡಿಸುವುದರಲ್ಲಿ ಕೂಡ ವಿಫಲರಾಗಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಇನ್ನೂ ಕೆಲವು ವಿಫಲತೆಗಳ ಬಗ್ಗೆ ನಾನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತಂದರೆ ನನ್ನ ಮಿತ್ರರು ಇದನ್ನು ಸ್ವಲ್ಪ ಸೀರಿಯಸ್ ಆಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸಾವಿರಾರು ಜನರಿಗೆ ಉದ್ಯೋಗವನ್ನು ಒದಗಿಸಿಕೊಡಬಹುದಾದಂಥ ವಿಜಯನಗರ ಉಕ್ಕು ಕಾರ್ಖಾನೆಗೆ ಕೇಂದ್ರದಿಂದ ಅಪ್ಪಣೆ ಪಡೆಯುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಹತ್ತಾರು ವರ್ಷಗಳಿಂದ ಈ ಹೊರದೇಶಗಳಿಂದ ರೇಷ್ಮೆ ಆಮದು ಮಾಡುವುದನ್ನು ನಿಲ್ಲಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಿಕೊಂಡು ಬಂದಿದ್ದರೂ, ಈ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸುವಲ್ಲಿ ನಾವು ವಿಫಲರಾಗಿದ್ದೇವೆ. ತೆಲುಗು ಗಂಗಾ ಯೋಜನೆಯನ್ನು ಕೇಂದ್ರ ಸರ್ಕಾರದ ಅಪ್ಪಣೆ ಇಲ್ಲದೆ ಮಾಡುತ್ತಿದ್ದಾರೆ, ದಯಮಾಡಿ ನಿಲ್ಲಿಸಿ ಎಂದು ಸರ್ಕಾರವನ್ನು ಒತ್ತಾಯ ಮಾಡಿದರೂ ಕೂಡ, ತೆಲುಗು ಗಂಗಾ ಯೋಜನೆಯ ಕೆಲಸವನ್ನು ನಿಲ್ಲಿಸುವ ಕೆಲಸದಲ್ಲಿ ನಾವು ವಿಫಲರಾಗಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಪಾಲರು ಅನೇಕ ವಿಚಾರವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ರಾಜ್ಯದಲ್ಲಿ ಇವತ್ತು ಶಕ್ತಿಯ ಮೂಲವಾದಂಥ ವಿದ್ಯುಚ್ಛಕ್ತಿಗೆ ಅಪಾರವಾದ ಕೊರತೆ ಇದೆ. ಆ ಕೊರತೆಯನ್ನು ನೀಗುವುದಕ್ಕೆ ಕೇಂದ್ರ ಸರ್ಕಾರಕ್ಕೆ ನಾವು ಕಳುಹಿಸಿರುವಂತಹ ಪ್ರಸ್ತಾವನೆಗಳು ಇನ್ನೂ ಮಂಜೂರಾಗದೆ ಬಾಕಿ ಇವೆ. ಮಂಜೂರಾತಿ ಪಡೆಯುವುದರಲ್ಲಿ ವಿಫಲರಾಗಿದ್ದೇವೆ. ಇದರ ಜೊತೆಗೆ ಕಳೆದ ಮೂರು ವರ್ಷಗಳಿಂದ ಈ ರಾಜ್ಯದಲ್ಲಿ ತಲೆದೋರಿದ ಭೀಕರ ಬರಗಾಲವನ್ನು ಎದುರಿಸುವಂಥ ಸಂದರ್ಭದಲ್ಲಿ ನಾವು ಕೇಳಿದಷ್ಟು ಹಣ ಪಡೆಯುವುದರಲ್ಲಿ ವಿಫಲರಾಗಿದ್ದೇವೆ. ಮತ್ತೊಂದು ಇತ್ತೀಚಿನದು ಏನೆಂದರೆ, ನಮ್ಮ ರಾಷ್ಟ್ರದ ಪ್ರಧಾನಿಗಳು ನಮ್ಮ ವಯೋಮಿತಿಯುಳ್ಳವರು, ಅದಕ್ಕಾಗಿ ಅವರ ಮೇಲೆ ಹೆಚ್ಚಿನ ಪ್ರೀತಿ ಇದೆ. ಅವರು ಹೋದ ಕಡೆ ಎಲ್ಲಾ ರಾಜ್ಯಗಳಿಗೂ ಹಣ ಕೊಡುವಂಥ ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯಕ್ಕೆ ಅವರು ಬಂದಾಗ, ಅಂತಹ ಒಂದು ಭರವಸೆಯನ್ನು ಪಡೆಯುವುದರಲ್ಲಿ ನಾವು ವಿಫಲರಾಗಿದ್ದೇವೆ......

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಈಗ ಮಧ್ಯೆ ಮಾತನಾಡುವುದು ಬೇಡ...

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ಮಾನ್ ರಾಜೀವ್ ಗಾಂಧಿಯವರು ಬೇರೆ ಬೇರೆ ರಾಜ್ಯಗಳಿಗೆ ಹೋದಾಗ ಹಣ ಕೊಡುತ್ತೇವೆಂದು ಹೇಳಿದ್ದಾರೆ, ಆದರೆ ನಮ್ಮ ರಾಜ್ಯಕ್ಕೆ ಮಾತ್ರ ಕೊಡುತ್ತಾ ಇಲ್ಲವೆಂದು ಹೇಳಿದ್ದಾರೆ. ಅವರು ಇದರ ಬಗ್ಗೆ ವಿಶ್ಲೇಷಣೆ ಕೊಟ್ಟಿದ್ದಾರೆ. ಯಾವ ಯಾವ ರಾಜ್ಯಕ್ಕೆ ಪ್ರಧಾನಿಗಳು ಹೋಗಿದ್ದಾರೆ, ಆ ರಾಜ್ಯದಲ್ಲಿ ಇರತಕ್ಕ ಸಮಸ್ಯೆಗಳು, ಬಹಳ ವರ್ಷಗಳಿಂದ ಬಾಕಿ ಇದ್ದ ವಿಚಾರಗಳ ಬಗ್ಗೆ ಒಂದೇ ಸಾರಿ ತೀರ್ಮಾನ ಮಾಡಿದ್ದೇನೆಂದು ಹೇಳಿದ್ದಾರೆ. ಬೇರೆ ಬೇರೆ ರಾಜ್ಯಗಳವರು ಹಣಪಡೆಯುವುದರಲ್ಲಿ ಶಕ್ತರು, ಅದರಂತೆ ನೀವು ಶಕ್ತರಲ್ಲವೇ ಎಂದು ಹೇಳುತ್ತಿದ್ದೇನೆ. ಸರ್ಕಾರ ಏನಾದರೂ ಮಾಡಿದ್ದರೆ, ಅದು ಯೋಜನೆಯ ಹಿನ್ನೆಲೆಯಲ್ಲಿ, ಯೋಜನಾ ರಹಿತವಾದ ಹಿನ್ನೆಲೆಯಲ್ಲಿ ಯಾವ ಯಾವ ಸ್ಕೀಮುಗಳು, ಯಾವ ಯಾವ ಕಾರ್ಯಕ್ರಮಗಳು, ಎಷ್ಟೆಷ್ಟು ಹಣ ಕೇಳಿದ್ದಿರಿ ಎಂಬುದರ ಬಗ್ಗೆ ವಿಶ್ಲೇಷಣೆ ಕೊಡಬೇಕು. ಅವರು ಈ ವಿವರ ಕೊಡಲಿಲ್ಲ ಎಂದರೆ, ಆ ರೀತಿ ಹೇಳುವುದಕ್ಕೆ ಅಧಿಕಾರ ಬರುವುದಿಲ್ಲ. ಇಲ್ಲಿಯವರೆಗೆ ಏನೇನು ಮಾಡಿದ್ದೀರಿ ದಯಮಾಡಿ ಹೇಳಿ.

ಶ್ರೀ ಸಿ. ಬೈರೇಗೌಡ.—ಇದು ತಪ್ಪು ಕಲ್ಪನೆಯಾಗಿದೆ, ವಿವರವನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಪ್ರಧಾನಮಂತ್ರಿಗಳು ಕೊಡತಕ್ಕಂಥ ಹಣ ಎಲ್ಲವೂ ವಿಶೇಷವಾದ ಹಣ. ಮಾನ್ಯ ಬಸವಲಿಂಗಪ್ಪನವರು ಅರ್ಥಮಾಡಿಕೊಂಡು ಹೇಳಿದರೆ ಒಳ್ಳೆಯದು. ಸರ್ಕಾರದ ದಾಖಲೆಯಲ್ಲಿ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಏನೇನು ಸಮಸ್ಯೆಗಳು ಇವೆ ಅವುಗಳನ್ನು ಹೇಳಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ರಾಮಯ್ಯನವರೂ, ಮಾನ್ಯ ಬಸವಲಿಂಗಪ್ಪನವರೂ ಅರ್ಥ ಮಾಡಿಕೊಂಡರೆ ಒಳ್ಳೆಯದೆಂದು ನನಗನಿಸುತ್ತದೆ. ಪ್ರಧಾನಿಗಳು ವಿಶೇಷವಾದ ನೆರವು ಯಾವ ಯಾವ ರಾಜ್ಯಕ್ಕೆ ಕೊಟ್ಟರು ? ಮಾರ್ಚಿ ತಿಂಗಳಲ್ಲಿ ಯಾವ ಯಾವ ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತವೆ, ಅಲ್ಲೆಲ್ಲಾ ನೆರವು ಕೊಡುವ ಭರವಸೆ ಹೇಳಿದ್ದಾರೆ. ಅವರು ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಈ ಮಾತುಗಳನ್ನು ಹಾಡಿದ್ದಾರೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಚುನಾವಣೆಯ ಮುನ್ನ, ಎಲ್ಲಾ ಕಡೆ ಫೌಂಡೇಷನ್ ಸ್ಟೋನ್ ಹಾಕಲಿಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಬೈರೇಗೌಡರು ನಮಗೆ ತಿಳುವಳಿಕೆ ಇಲ್ಲ ನಾವು ಓದಿಲ್ಲ ನಾವು ಅರ್ಥ ಮಾಡಿಕೊಳ್ಳಲಿಲ್ಲ ಎಂಬ ಹಿನ್ನಲೆಯಲ್ಲಿ ಮಾತನಾಡಿದರು. ಸ್ವಾಮಿ ತಾವೂ ಮಂತ್ರಿಗಳಾಗಿದ್ದವರು. ಯೋಜನೆಗೆ ಸಂಬಂಧ ಪಟ್ಟಿರತಕ್ಕಂಥ ಕೆಲಸಗಳು ಏನಿದ್ದಾವೆ, ಅವುಗಳಿಗೆ ಸರಕಾರ ಹಣ ಕೊಡುತ್ತದೆ ಅದು ಸರಿ. ಆದರೆ ಯೋಜನಾರಹಿತವಾಗಿರತಕ್ಕ ಯಾವ ಯೋಜನೆಗಳನ್ನು ನೀವು ರೂಪಿಸಿಕೊಂಡಿದ್ದೀರಿ, ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಷ್ಟು ವರ್ಷದಿಂದ ನಿಮಗೆ ಕೇಂದ್ರದಿಂದ ಪ್ರತಿಫಲ ಸಿಕ್ಕಿಲ್ಲ. ಇದರ ಬಗ್ಗೆ ಏನು ಹೇಳುತ್ತೀರಿ ಎಂದು ನಾನು ಹೇಳಿದ್ದೇನೆ. ನನಗೆ ಬುದ್ಧಿವಾದ ಹೇಳುವುದಕ್ಕೆ ಬರುತ್ತೀರಾ ?

ಶ್ರೀ ಸಿ. ಬೈರೇಗೌಡ.—ನಮ್ಮ ಯೋಜನೆ ಬಿಟ್ಟು ಬಿಡಿ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು, ಚುನಾವಣೆಯ ಸಂದರ್ಭದಲ್ಲಿ ನೀವು ಅಡಿಪಾಯ ಹಾಕಿದ್ದೀರಿ ಎಂದು ಹೇಳಿದರು. ವಿಜಯನಗರ ಉಕ್ಕು ಕಾರ್ಖಾನೆಗೆ ನಾವು ಯಾರೂ ಕೂಡ ಅಡಿಗಲ್ಲು ಹಾಕಲಿಲ್ಲ, ನಮ್ಮ ಮಂತ್ರಿ ಮಂಡಲದಲ್ಲಿರತಕ್ಕಂಥ ಮಂತ್ರಿಗಳು ಯಾರೂ ಅಡಿಗಲ್ಲು ಹಾಕಲಿಲ್ಲ, ಅದಕ್ಕೆ ಅಡಿಗಲ್ಲು ಹಾಕಿರತಕ್ಕಂಥವರು ನಮ್ಮ ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು. ಈ ಕೆಲಸ ಇನ್ನೂ ಆಗಿಲ್ಲ. ನೀವು ಹಾಕಿರತಕ್ಕಂಥದ್ದೇ ಇನ್ನೂ ಹಾಗಿಲ್ಲ ನೀವು ರಾಜ್ಯದ ಜನತೆಗೆ ಕೊಟ್ಟಿರತಕ್ಕಂಥ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿಲ್ಲ.

ಶ್ರೀ ಡಿ. ಬಿ. ಚಿನ್ನಪ್ಪ.—ಶ್ರೀಮತಿ ಇಂದಿರಾಗಾಂಧಿಯವರು ಫೌಂಡೇಷನ್ ಸ್ಟೋನ್ ಹಾಕಿದ್ದು ಕರೆಕ್ಟ್, ಆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಕರೆಂಟ್ ಕೊಡಿ ಎಂದು ಕೇಂದ್ರ ಸರ್ಕಾರ ಕೇಳಿದರೆ ಅದನ್ನು ನೀವು ಕೊಡುವುದಕ್ಕೆ ಆಗಲಿಲ್ಲ. ಇದರಿಂದ ಅದು ನಿಧಾನವಾಗಿರುವುದು.

ಶ್ರೀ ಡಿ.ಟಿ. ಜಯಕುಮಾರ್.—ನಮಗಿಂತ ಮುಂಚಿತವಾಗಿ ತಮ್ಮದೇ ಸರ್ಕಾರ ಇತ್ತು. ಅಡಿಗಲ್ಲು ಹಾಕಿ ಸುಮಾರು ೧೮ ವರ್ಷ ಆಯಿತು. ಈ ಹದಿನೆಂಟು ವರ್ಷದಲ್ಲಿ ಹದಿನಾಲ್ಕು ವರ್ಷ ನಿಮ್ಮದೇ ಸರಕಾರ ಇತ್ತು, ಆಗ ನೀವು ಕರೆಂಟ್ ಏತಕ್ಕೆ ಕೊಡಲಿಲ್ಲ.

ಶ್ರೀ ಯು. ಭೂಪತಿ.—ಕಳೆದ ಹದಿನಾಲ್ಕು ವರ್ಷದಲ್ಲಿ ಜನತಾ ಪಕ್ಷದ ಸರಕಾರವು ಸಹ ಕೇಂದ್ರದಲ್ಲಿ ಒಂದು ಬಾರಿ ಅಧಿಕಾರದಲ್ಲಿತ್ತು ಎನ್ನುವುದನ್ನು ಭೈರೇಗೌಡರು ಮರೆಯಬಾರದು ಈ ಉಕ್ಕಿನ ಕಾರ್ಖಾನೆಯ ಬಗ್ಗೆ ತಾವು ಏನು ಮಾಡಿದ್ದೀರಿ ಎಂಬುದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ, ಭೂಪತಿಯವರೇ ದಯವಿಟ್ಟು ಕುಳಿತುಕೊಳ್ಳಿ, ಚಿನ್ನಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ, ಬಸವಲಿಂಗಪ್ಪನವರೇ ನೀವು ಎದ್ದು ಶಿವಪೂಜೆಯಲ್ಲಿ ಕರಡಿ ಬಿಟ್ಟ ಹಾಗೆ ಮಾಡಿಬಿಟ್ರಿ.

ಶ್ರೀ ವೈ.ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಧಾನಿಯವರು ಹಣ ಕೊಡುವ ವಿಚಾರ ಮಾತನಾಡುತ್ತಿದ್ದೆ. ನನಗೆ ಆರ್ಥಿಕ ಶಾಸ್ತ್ರದ ಹಿನ್ನೆಲೆ ಇದೆ, ನಾನು ಎಕನಾಮಿಕ್ಸ್ ಎಂ.ಎ. ಮಾಡಿರುತ್ತೇನೆ, ಯೋಜನಾಬದ್ಧವಾದ ಕಾರ್ಯಕ್ರಮಗಳಿಗೆ ಯೋಜನೆಯ ಚೌಕಟ್ಟಿನಲ್ಲಿ ರಾಜ್ಯದ ಅಭಿವೃದ್ಧಿಗೆ ಹಣ ಕೊಟ್ಟಿರುವುದಾದರೆ ಅದನ್ನು ನಾನು ಸ್ವಾಗತಿಸುತ್ತೇನೆ, ಅವರನ್ನು ಅಭಿನಂದಿಸುತ್ತೇನೆ ಅದು ಸ್ಪಷ್ಟವಾಗಿ ನನಗೆ ಗೊತ್ತಿಲ್ಲ. ಈ ರೀತಿ ಅವರು ಹಣ ಕೊಟ್ಟಿದ್ದಾರೋ ಅಥವಾ ನಮ್ಮ ಭೈರೇಗೌಡರು ಹೇಳಿದ ರೀತಿಯಲ್ಲಿ ಚುನಾವಣೆ ಇವೆ ಎಂದು ಕೊಟ್ಟಿದ್ದಾರೋ, ಇದನ್ನು ನಾನು ರಾಷ್ಟ್ರದ ಜನತೆಗೆ ವಿಚಾರ ಮಾಡುವುದಕ್ಕೆ ಬಿಟ್ಟು ಬಿಡುತ್ತೇನೆ. ಯೋಜನಾ ಬದ್ಧ ಕಾರ್ಯಕ್ರಮಗಳಿಗೆ ಯೋಜನೆಯ ಚೌಕಟ್ಟಿನಲ್ಲಿ ರಾಜ್ಯದ ಅಭಿವೃದ್ಧಿಗೆ ಹಣ ಕೊಟ್ಟಿದ್ದಾರೋ ಅಥವಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಕೊಟ್ಟಿದ್ದಾರೋ ಅದು ಗೊತ್ತಿಲ್ಲ, ಆ ರೀತಿ ನಮ್ಮ ರಾಜ್ಯಕ್ಕೆ ಮಾಡಿಲ್ಲ ಎಂದು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ ಇದೇ ರೀತಿ ಇನ್ನು ಆದ್ಯತೆಗಳ ಬಗ್ಗೆ ಸ್ವಲ್ಪ ಗಮನಿಸುವುದಾದರೆ ಯಾವುದೇ ಒಂದೇ ಆಡಳಿತ ನಡೆಸುವಂತ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆ. ಸರಕಾರ ಯಾವುದೇ ಇದ್ದರೂ ಬರುತ್ತದೆ, ಜನತಾ ಪಕ್ಷದ ಸರಕಾರ ಇದ್ದರೂ ಬರುತ್ತದೆ ವೆಸ್ಟ್ ಬೆಂಗಾಲ್‌ನಲ್ಲಿ ಕಮ್ಯುನಿಸ್ಟ್ ಸರಕಾರ ಇದ್ದರೂ ಬರುತ್ತದೆ, ಪಂಜಾಬ್‌ನಲ್ಲಿ ಅಕಾಲಿದಳದ ಸರಕಾರ ಇದ್ದರೂ ಬರುತ್ತದೆ. ಈ ಬೊಕ್ಕಸಕ್ಕೆ ಬರುವಂತಹ ಹಣವನ್ನು ವಿತರಣೆ ಮಾಡುವಂತಹ ಗುರುತರ ಜವಾಬ್ದಾರಿಯನ್ನು ಹೊರುವಂತಹ ಸಂದರ್ಭದಲ್ಲಿ ನಾವು ಸ್ವಲ್ಪ ಎಡವಿದ್ದೇವೆ. ನನಗೆ ಅನೇಕಸಾರಿ ಅನಿಸುತ್ತಿದೆ, ಪ್ರಜಾಪ್ರತಿನಿಧಿಯಾದಂಥವನಿಗೆ, ತನ್ನ ಕ್ಷೇತ್ರದಲ್ಲಿ, ತನ್ನ ಹಿಂದುಮುಂದಿರುವಂತಹ ಜನಗಳಿಗೆ ರಸ್ತೆ ಮಾಡಿಸುವುದು, ಸ್ಕೂಲ್ ಕಟ್ಟಿಸುವುದು, ಅಭಿವೃದಿ ಕೆಲಸಗಳನ್ನು ಮಾಡಿಸುವುದರ ಜೊತೆಗೆ ತನ್ನ ಕ್ಷೇತ್ರದ ಜನರನ್ನು ಉತ್ತಮವಾದ ದಾರಿಯಲ್ಲಿ ಕರೆದುಕೊಂಡು ಹೋಗಬೇಕಾದುದು ಕೂಡ ಪ್ರಾಮುಖ್ಯವಾದ ಕರ್ತವ್ಯ. ಇದರ ಜೊತೆಗೆ ಒಂದು ಕಡೆ ನಾನು ಎಲ್ಲೋ ಓದಿದ್ದೇನೆ, ಪೀಪಲ್ಸ್ ರೆಪ್ರೆಸೆಂಟೆಟೀವ್ಸ್ ಆರ್ ಟ್ರಸ್ಟೀಸ್ ಆಫ್ ಪಬ್ಲಿಕ್ ಫಂಡ್ ಎಂದು. ೭೦–೮೦ರ ದಶಕದಲ್ಲಿ ಏನು ಆಯಿತು ಎಂದು ತಮ್ಮ ಗಮನಕ್ಕೆ ಮತ್ತೆ ತರುವುದಕ್ಕೆ ಇಷ್ಟಪಡುತ್ತೇನೆ, ಯಾವ ಪ್ರಜಾಪ್ರತಿನಿಧಿಗಳು ಸರ್ಪದ ರೀತಿಯಲ್ಲಿ ಕಾವಲು ಕಾಯಬೇಕಾಗಿತ್ತೋ ನಮ್ಮ ಹಳ್ಳಿಯ ಕಡೆ ಒಂದು ನಂಬಿಕೆ ಇದೆ, ಎಲ್ಲಿ ಸಂಪತ್ತು ಇರುತ್ತದೋ, ಎಲ್ಲಿ ಒಡವೆ ಇರುತ್ತದೋ, ಎಲ್ಲಿ ವಜ್ರ ಇರುತ್ತದೋ, ಎಲ್ಲಿ ಸಂಪತ್ತು ಇರುತ್ತದೋ, ಅಲ್ಲಿ ನಾಗರಹಾವು ಹೆಡೆ ಎತ್ತಿಕೊಂಡು ಅದನ್ನು ರಕ್ಷಣೆ ಮಾಡುತ್ತದೆ ಎಂಬ ನಂಬಿಕೆ ಇದೆ. ಅದೇ ರೀತಿ ಪ್ರಜಾಪ್ರತಿನಿಧಿಗಳ ಆದ್ಯಕರ್ತವ್ಯ ಎಂದರೆ ಸಾರ್ವಜನಿಕ ಹಣವನ್ನು ಪಕ್ಷದಹಣವನ್ನು ಸರ್ಪದ ರೀತಿಯಲ್ಲಿ ಕಾಯಬೇಕಾದುದು ಕರ್ತವ್ಯ.

ಇತ್ತೀಚಿನ ದಶಕಗಳಲ್ಲಿ ನಮ್ಮ ರಾಷ್ಟ್ರದ ಸಾರ್ವಜನಿಕರ ಹಣವನ್ನು ಭಕ್ಷಿಸುವಂತಹ ರಾಕ್ಷಸರು ಹುಟ್ಟಿಕೊಂಡಿದ್ದಾರೆಂದು ದುರ್ದೈವಶಾತ್ ನಾನು ಈ ಮಾತನ್ನು ಹೇಳಬೇಕಾಗಿದೆ. ನಾನು ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ ನಾವು ನಮ್ಮ ಆದ್ಯತೆಗಳ ಬಗ್ಗೆ ಗುರುತು ಮಾಡಬೇಕಾಗಿದೆ. ಅದೇ ರೀತಿಯಲ್ಲಿ ನಮ್ಮ ಜನತಾ ಪಕ್ಷದ ಆದ್ಯತೆ ಏನು ? ನಮ್ಮ ಸರ್ಕಾರ, ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಅನೇಕ ನೀರಾವರಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದಕ್ಕೆ ಕಾರಣ ಇಷ್ಟೆ. ಇವತ್ತು ಯಾರು ಈ ರಾಷ್ಟ್ರದಲ್ಲಿ ಇರತಕ್ಕಂಥ ಜನಸಾಮಾನ್ಯನಾದ ರೈತನ ಜಮೀನಿಗೆ ನೀರನ್ನು ಕೊಡುತ್ತಾರೆಯೋ ಅದು ದೇವರ ಪೂಜೆ ಮಾಡುವುದಕ್ಕಿಂತ ಹೆಚ್ಚು ಆದ್ಯ ಕರ್ತವ್ಯವೆಂದು ನಾವು ಭಾವಿಸಿದ್ದೇವೆ. ಅದೇ ರೀತಿಯಲ್ಲಿ ಇದೂ ಕೂಡ ಒಂದು ಆದ್ಯ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಆ ದಿಸೆಯಲ್ಲಿ ನಾವು ಕೆಲಸ ಮಾಡಿದರೆ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ

ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ. ಆ ಕೆಲಸವನ್ನು ನಾವು ಮಾಡಿದ್ದೇವೆ. ಆ ಬಗ್ಗೆ ನಾನು ಹೆಚ್ಚು ಸವಿಸ್ತಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಉದಾಹರಣೆಗಾಗಿ ನಾನು ಒಂದೇ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಅದೇನೆಂದರೆ ೧೯೮೨-೮೩ನೇ ಸಾಲಿನಲ್ಲಿ ಹೇಮಾವತಿ ಯೋಜನೆಗೆ ಇಟ್ಟಿದ್ದ ಹಣ ಕೇವಲ ೧೮ ಕೋಟಿ ರೂಪಾಯಿಗಳು. ಆದರೆ ಈ ವರ್ಷ ನಾವು ಈ ಯೋಜನೆಗೆ ಇಟ್ಟಿದ್ದ ಹಣ ಸುಮಾರು ೩೬ ಕೋಟಿ ರೂಪಾಯಿಗಳು. ಮುಂದಿನ ವರ್ಷ ಈ ಯೋಜನೆಗೆ ಸುಮಾರು ೭೫ ಕೋಟಿ ರೂಪಾಯಿಗಳು ಇಡಬಹುದೆನ್ನುವ ನಂಬಿಕೆ ನನಗೆ ಇದೆ. ಮಾನ್ಯ ಸದಸ್ಯರು ಈ ಅಂಕಿಅಂಶಗಳನ್ನು ನೋಡಿದರೆ ಸಾಕು. ಈ ರಾಜ್ಯದಲ್ಲಿ ಜನತಾ ಪಕ್ಷದ ಸರ್ಕಾರ ನೀರಾವರಿಗೆ ಎಷ್ಟು ಆದ್ಯತೆಯನ್ನು ಕೊಟ್ಟಿದೆ ಎನ್ನುವುದು ಗೊತ್ತಾಗುತ್ತದೆ. ಇನ್ನು ಬೃಹತ್ ಯೋಜನೆಗಳಿಗೆ ಯೋಜನಬದ್ಧವಾದ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸಿದೆ. ಈ ಬಗ್ಗೆ ಹೇಳುವುದಾದರೆ ನಮ್ಮ ಮಾನ್ಯ ಲೋಕೋಪಯೋಗಿ ಸಚಿವರು ಗಂಗಾ ಕಲ್ಯಾಣ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಅನೇಕ ಕಡೆಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ವಿದ್ಯುತ್‌ಶಕ್ತಿಯ ಕೊರತೆ ಎಷ್ಟೇ ಇದ್ದರೂ ಸಹ ಈ ರಾಜ್ಯದ ರೈತನ ಬಾವಿಗಳಲ್ಲಿ ಮತ್ತು ಕೊಳವೆ ಬಾವಿಗಳಲ್ಲಿರತಕ್ಕಂಥ ಐ.ಪಿ. ಸೆಟ್ಟುಗಳಿಗೆ ಯಾವುದೇ ನಿರ್ಬಂಧವಿಲ್ಲದೆ ವಿದ್ಯುತ್‌ಶಕ್ತಿಯನ್ನು ಪೂರೈಸುತ್ತಿದ್ದೇವೆ. ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಕೈಗೊಂಡಿದೆ. ಒಟ್ಟಾರೆ ಹೇಳಬೇಕೆಂದರೆ ಹಳ್ಳಿಗಾಡಿನ ಪ್ರದೇಶದಲ್ಲಿರತಕ್ಕಂಥ ಜನರ ಕಲ್ಯಾಣ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಕಡು ಬಡವರಿಗೆ ಅನುಕೂಲವಾಗತಕ್ಕಂಥ ಹಸಿರು ಕಾರ್ಡ್ ಕೊಟ್ಟು ಅದರ ಮೂಲಕ ಅಕ್ಕಿ, ಬಟ್ಟೆ ಮುಂತಾದ ಸಾಮಗ್ರಿಗಳನ್ನು ಅವನಿಗೆ ಒದಗಿಸಿಕೊಡಲು ಪ್ರಯತ್ನ ನಡೆಸಿದ್ದೇವೆ. ಬೃಹತ್ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬಂದಿದ್ದಂತಹ ನೆರವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಅಭಿವೃದ್ಧಿಯನ್ನು ಸಾಧಿಸಿದ್ದೇವೆ. ಮಾನ್ಯ ಸದಸ್ಯರಾದಂಥ ಮಲ್ಲಿಕಾರ್ಜುನ ಖರ್ಗೆಯವರು ಈ ಸದನದಲ್ಲಿ ಕೃಷ್ಣಾ ಎರಡನೇ ಹಂತದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಂತಹ ಕಾಲದಲ್ಲಿ ಮಾನ್ಯ ಮಂತ್ರಿಗಳು ಕೊಟ್ಟ ಒಂದು ಸ್ಟೇಟ್‌ಮೆಂಟ್ ಪ್ರಕಾರ ನಮ್ಮ ಸರ್ಕಾರ ಬೃಹತ್ ನೀರಾವರಿ ಕಾಮಗಾರಿಗಳನ್ನು ಪ್ರಾಮಾಣಿಕವಾಗಿ ಪೂರೈಸುವುದಕ್ಕೆ ಪ್ರಯತ್ನಪಡುತ್ತಿದೆ. ಇನ್ನು ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ಬಗ್ಗೆ ನಮ್ಮ ಸರ್ಕಾರ ಒದಗಿಸಿಕೊಟ್ಟಿರುವ ಸೌಲಭ್ಯದ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಮ್ಮ ಸರ್ಕಾರದ ಸಾಧನೆಗಳ ಬಗ್ಗೆ, ನಮ್ಮ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಕಳೆದ ವರ್ಷ ನಾವು ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದೇವೆ...

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲಾ ರಾಜ್ಯ ಮಂತ್ರಿಗಳನ್ನು ಕೈಬಿಟ್ಟಿದ್ದು ಒಂದು ಸಾಧನೆ.

ಶ್ರೀ ವೈ.ಕೆ. ರಾಮಯ್ಯ.—ನಮ್ಮ ಸರ್ಕಾರದ ಸಾಧನೆಗಳಿಂದ ರಾಜ್ಯ ಮಂತ್ರಿಗಳನ್ನು ಕೈಬಿಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳುವ ವಾದವನ್ನು ನಾನು ಒಪ್ಪುವುದಿಲ್ಲ. ಅದು ಸಾಧನೆಯಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಸರ್ಕಾರದ ಸಾಧನೆಗಳ ಮುಂಚೂಣಿಯಲ್ಲಿ ನಾನು ಸಹ ಇದ್ದೆ. ಆ ಬಗ್ಗೆ ಮಾತನಾಡುವುದಕ್ಕೆ ನನಗೆ ಸ್ವಲ್ಪ ಹೆಮ್ಮೆ ಸಹ ಆಗುತ್ತದೆ. ಅದೇನೆಂದರೆ ಇಡೀ ವಿಶ್ವದಲ್ಲಿಯೇ ರೇಷ್ಮೆ ಉದ್ದಿಮೆ ಅಭಿವೃದ್ಧಿ ಪ್ರಥಮಸ್ಥಾನದಲ್ಲಿದ್ದುದು ಚೈನಾದೇಶ. ಎರಡನೇ ಸ್ಥಾನದಲ್ಲಿ ನಮ್ಮ ಭಾರತ ದೇಶ ಇದೆ. ಇದರಲ್ಲಿ ನಮ್ಮ ಕರ್ನಾಟಕ ರಾಜ್ಯದ ಪಾತ್ರ ಸಹ ಇದೆ. ಹಿಂದೆ ನಮ್ಮ ಭಾರತ ದೇಶ ನಾಲ್ಕನೇ ಸ್ಥಾನದಲ್ಲಿತ್ತು. ಈಗ ಎರಡನೇ ಸ್ಥಾನದಲ್ಲಿದ್ದೇವೆ. ಈ ಕಾರಣಕ್ಕಾಗಿಯೇ ನನ್ನನ್ನು ಮಂತ್ರಿ ಸ್ಥಾನದಿಂದ ಕೈಬಿಟ್ಟರೆಂದು ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಸವಲಿಂಗಪ್ಪನವರು ತಿಳಿದುಕೊಳ್ಳುವುದಾದರೆ ಅವರಿಗೆ ನಾನು ಒಂದೇ ಒಂದು ವಿಚಾರವನ್ನು ತಿಳಿಯಬಯಸುತ್ತೇನೆ ಅದೇನೆಂದರೆ ನನ್ನ ತಂದೆತಾಯಿ ನನ್ನನ್ನು ಹೆತ್ತಾಗ ಈ ರಾಜ್ಯದ ಮಂತ್ರಿಯಾಗಲಿ ಎಂದು ಹೆರಲಿಲ್ಲ. ನಮ್ಮ ಮನೆಯಲ್ಲಿ ದನ ಕಾಯಲು ಒಬ್ಬ ಹುಡುಗ ಬಂದನಲ್ಲ ಸಾಕು ಎಂದು ಹೆತ್ತರು. ಆದರೆ ಅದೃಷ್ಟವಶಾತ್ ನಿಮ್ಮಂತಹವರ ಆಶೀರ್ವಾದದಿಂದಲೋ ಅಥವಾ ದೇವರ ಕೃಪೆಯಿಂದಲೋ ಅಥವಾ ನನ್ನ ಹಿರಿಯರ ಆಶೀರ್ವಾದದಿಂದಲೋ ಇಲ್ಲಿ ಇದ್ದೇನೆ. ಆದರೆ ರಾಜಕೀಯದಲ್ಲಿ ಮಂತ್ರಿಯಾಗಬೇಕೆನ್ನುವ ಆಸೆ ನನಗೆ ಇಲ್ಲ. ಮಂತ್ರಿಯಾಗುವುದಕ್ಕೆ ನಾನು ರಾಜಕೀಯ ಮಾಡಬೇಕಿಲ್ಲ...

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಅವರೇನು ಹೇಳುತ್ತಾರೋ ಅದನ್ನು ತಾವು ನೋಟ್ ಮಾಡಿಟ್ಟುಕೊಂಡು ನೀವು ಮಾತನಾಡುವಾಗ ಹೇಳಿ. ಈಗ ಬೇಡ.

೧-೩೦ ಪಿ. ಎಂ.

ಸನ್ಮಾನ್ಯ ಅಧ್ಯಕ್ಷರೇ, ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅನ್ನ, ಬಟ್ಟೆ ಒದಗಿಸಿಕೊಡುವ ಕಾರ್ಯಕ್ರಮ ಹಾಗು ಆರ್ಥಿಕ ರೀತಿ ನೀತಿಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಮತ್ತೊಂದು ವ್ಯತ್ಯಾಸವನ್ನು ಇಲ್ಲಿ ಕಾಣಬಹುದಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ನಿಮ್ಮ ಕಾರ್ಯಕ್ರಮಗಳು ಚೆನ್ನಾಗಿವೆ, ಆದರೆ ಜನಗಳಿಗೆ ಸರಿಯಾಗಿ ತಲುಪುತ್ತಿಲ್ಲವೆಂದು ಹೇಳಿದರು. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಇಂಥ ಚರ್ಚೆಯನ್ನು, ಅಂದರೆ ಸರ್ಕಾರದ ನೀತಿಯ ಬಗ್ಗೆ, ಆ ನೀತಿಯನ್ನು ಯಾವ ರೀತಿ ಕಾರ್ಯರೂಪಕ್ಕೆ ತರುತ್ತಿದ್ದಾರೆ ಎಂಬ ಬಗ್ಗೆ ಚರ್ಚೆ ಮಾಡಬೇಕಾದುದು ಬಜೆಟ್ ಮೇಲೆ ವಿಷಯ ಬಂದಾಗ ಮಾತ್ರ. ಈಗ ಪಾಲಿಸಿ ವಿಷಯದ ಮೇಲೆ ಮಾತ್ರ ಚರ್ಚೆ ಮಾಡಬೇಕು. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ, ಸರ್ಕಾರದ ತತ್ವ, ನೀತಿ, ಸಿದ್ಧಾಂತದ ಬಗ್ಗೆ ಚರ್ಚೆ ಮಾಡಬೇಕು. ನಾನು ಆಗಲೇ ಆಡಳಿತ ಸುಧಾರಣೆ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಈ ರಾಜ್ಯದಲ್ಲಿ ಕಂದಾಯ ಕೊಡುವಂಥಾ ಜನಕ್ಕೆ, ಊಟ ಕೊಡುವಂಥಾ ಜನಕ್ಕೆ ಎಷ್ಟರಮಟ್ಟಿಗೆ ನೌಕರ ವರ್ಗ ಅಥವಾ ಅಧಿಕಾರ ಶಾಹಿ ವರ್ಗ ಸ್ಪಂದಿಸಬೇಕಾಗಿತ್ತೋ ಅಷ್ಟರಮಟ್ಟಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ಏನು, ಹಿಂದೆ ಒಂದು ಪುರೋಹಿತ ಶಾಹಿ ವರ್ಗ ಇತ್ತೋ, ಪುರೋಹಿತರು ಎಂದರೆ ಯಾರು ತಪ್ಪಾಗಿ ತಿಳಿಯಬಾರದು. ಕ್ರಿಶ್ಚಿಯನ್‌ನಲ್ಲೂ ಪುರೋಹಿತರಿದ್ದಾರೆ, ಮುಹಮ್ಮದೀಯರಲ್ಲೂ ಪುರೋಹಿತರಿದ್ದಾರೆ. ಈ ಪುರೋಹಿತ ಶಾಹಿ ವರ್ಗ ಇದೆಯಲ್ಲಾ, ಈ ವರ್ಗವನ್ನು ಮೊದಲೇ ನಿಯಂತ್ರಿಸಬೇಕಾಗಿತ್ತು. ಅಂಥದ್ದೇ ಈ ಅಧಿಕಾರ ಶಾಹಿ ವರ್ಗವೂ ಕೂಡ. ಈ ವರ್ಗವನ್ನು ಅಂದರೆ ಈ ನೌಕರ ವರ್ಗವನ್ನು ಸಂಪೂರ್ಣವಾಗಿ ಒಳ್ಳೆಯ ದಾರಿಯಲ್ಲಿ ಬರುವಂತೆ, ಜನರ ದುಃಖ ದುಮ್ಮಾನಗಳಿಗೆ, ಕಷ್ಟಕಾರ್ಪಣ್ಯಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸುವಂತೆ, ಅವರನ್ನು ದಾರಿಗೆ ತರುವುದಕ್ಕೆ ಸಾಧ್ಯವಾಗಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಇದರಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಕಾಣಬಹುದಷ್ಟೇ. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಒಂದು ಪವಾಡವೇ ಮಾಡಿದ್ದಾರೆ. ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ಈಗ ಹೋಗುವುದಿಲ್ಲ. ದೇವರ ದಯೆಯಿಂದ ಎಲ್ಲಾ ಜಿಲ್ಲಾ ಕಛೇರಿಗಳಲ್ಲೂ ಚಿಕ್ಕಮಗಳೂರು ಜಿಲ್ಲಾ ಕಛೇರಿಯ ತರಹವೇ ಆದರೆ ಸಂತೋಷಪಡುತ್ತೇನೆ. ನಾನು ವಕೀಲಿ ವೃತ್ತಿ ಮಾಡುತ್ತಿದ್ದಾಗ, ನಮ್ಮ ತಾಲ್ಲೂಕಿನಲ್ಲಿ ಒಂದು ಪಹಣಿ ತೆಗೆದುಕೊಳ್ಳಬೇಕಾಗಿದ್ದರೆ, ೧೫ ದಿವಸಗಳಾಗುತ್ತಿತ್ತು. ಈವತ್ತಿನ ದಿವಸದಲ್ಲಿ ಬೆಳಿಗ್ಗೆ ಅರ್ಜಿ ಕೊಟ್ಟು ಬಂದರೆ ಸಾಯಂಕಾಲದೊಳಗೆ ಪಹಣಿ ರೆಡಿಯಾಗಿರುತ್ತದೆ. ಆಡಳಿತದಲ್ಲಿ ಎಲ್ಲಾ ಸುಧಾರಣೆಯನ್ನು ಮಾಡಿದ್ದೇವೆಂದು ನಾನು ಹೇಳುವುದಿಲ್ಲ. ಆದಷ್ಟು ಮಟ್ಟಿಗೆ ಆಡಳಿತ ಮಾಡುವಲ್ಲಿ ಹಾಗು ಜನತೆಗೆ ಅನುಕೂಲ ಮಾಡುವಲ್ಲಿ ನಾವು ಸಫಲವಾಗಿದ್ದೇವೆಂದು ನಂಬಿಕೊಂಡಿದ್ದೇನೆ. ಕೊನೆಯದಾಗಿ, ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಜನಸಾಮಾನ್ಯರಿಗೆ ಧಕ್ಕಬೇಕಾಗಿದ್ದಂಥ ಎಲ್ಲಾ ಹಕ್ಕುಗಳನ್ನು ಒದಗಿಸಿಕೊಡುವುದಕ್ಕೆ ನಮ್ಮ ಸರ್ಕಾರ ಪ್ರಯತ್ನಪಟ್ಟಿದೆ. ಮಂಡಲ ಪಂಚಾಯಿತಿಯಿಂದ ಹಿಡಿದು ಎಲ್ಲಾ ಚುನಾವಣೆಗಳನ್ನು ಮಾಡಿ ಅವರಿಗೆ ರಾಜಕೀಯ ಸ್ವಾತಂತ್ರ್ಯದ ಹಕ್ಕನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗಿದೆ. ಈ ಹಕ್ಕನ್ನು ಕೊಡತಕ್ಕಂಥ ಸಂದರ್ಭದಲ್ಲಿ ಚರ್ಚೆ ಮಾಡಿ, ಈ ಚುನಾವಣಾ ಪದ್ಧತಿಗಳ ಬಗ್ಗೆ ನಮ್ಮ ಮಿತ್ರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಚುನಾವಣೆಗಳ ಬಗ್ಗೆ ೨೫ ವರ್ಷಗಳ ಹಿಂದೆ ಒಂದು ಮಾತನ್ನು ಪಂಡಿತ್ ಜವಹರಲಾಲ್ ನೆಹರೂರವರು ಹೇಳಿದ್ದರು. ೨೫ ವರ್ಷಗಳ ಹಿಂದೆ ಬೇರೆಲ್ಲೂ ಹೇಳಿದ್ದಲ್ಲ ಬೆಂಗಳೂರಿನಲ್ಲೇ ಹೇಳಿದ್ದಾರೆ. ಅದೇನೆಂದರೆ 'ಚುನಾವಣಾ ಸಮಯ ಸಂತೋಷದ ಸಮಯವಲ್ಲ' ಎಂದು ಪ್ರಧಾನಿಯಾಗಿದ್ದ ನೆಹರೂರವರೇ ಹೇಳಿದ್ದರು. ಅಷ್ಟೇ ಅಲ್ಲ 'ಚುನಾವಣೆಗಳು ಅತಿ ಕೆಟ್ಟವು ಆದರೂ ಚುನಾವಣೆಗಳು ಪ್ರಜಾಪ್ರಭುತ್ವಕ್ಕೆ ಬೇಕು'. ಚುನಾವಣೆಗಳು ಅತೀ ಕೆಟ್ಟವು ಎನ್ನತಕ್ಕ ಮಾತನ್ನು 'ಚರ್ಚಿಲ್ಲರವರು' ಹೇಳಿದ್ದನ್ನು ನಾನು ಒಪ್ಪುತ್ತೇನೆಂದು ನೆಹರೂರವರು ಹೇಳಿದ್ದಾರೆ. ಚುನಾವಣೆ ಸಮಯದಲ್ಲಿ ಜನರಿಗೆ ಹೆಂಡ ಕುಡಿಸಿದರು, ದುಡ್ಡು ಕೊಟ್ಟರು, ಚುನಾವಣೆಗಳು ಜಾತಿ ಆಧಾರದ ಮೇಲೆ ನಡೆಯುತ್ತವೆ, ಚುನಾವಣೆಯಲ್ಲಿ ಪದ್ಧತಿ ಸರಿಯಿಲ್ಲ ಎನ್ನುವಂಥ ಅಭಿಪ್ರಾಯಗಳು ಕೇವಲ ಈ ಸದನದಲ್ಲಿ ಮೊಟ್ಟಮೊದಲಿಗೆ ಕೇಳಿ ಬಂದಿಲ್ಲ.

ಶ್ರೀ ವೈ. ಕೆ. ರಾಮಯ್ಯ.—ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ಚುನಾವಣೆಯು ಬಂತು. ೨೫ ವರ್ಷಗಳ ಹಿಂದೆ, ಜವಹರಲಾಲ್ ನೆಹರೂರವರು, ಚರ್ಚಿಲ್‌ರವರು ಅಭಿಪ್ರಾಯಪಟ್ಟಿದ್ದಾರೆ, ಅದು ಏನೆಂದರೆ ಚುನಾವಣೆ ಕೆಟ್ಟದ್ದು ಅದು ಒಳ್ಳೆಯದಲ್ಲ ಎಂದು. ಆದರೂ ಚುನಾವಣೆ ಅನಿವಾರ್ಯ ಎಂಬ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ.

ಪ್ರಜಾಪ್ರಭುತ್ವದಲ್ಲಿ ಆಳುವಂತಹ ಸರ್ಕಾರಕ್ಕೆ ಮಾಡಬೇಕಾದಂತಹ ಅನೇಕ ಕೆಲಸಗಳು ಅನಿವಾರ್ಯ ಅಂತಹದ್ದರಲ್ಲಿ ಚುನಾವಣೆಗಳೂ ಕೂಡ ಅನಿವಾರ್ಯ ವಾದಂತಹವುಗಳಲ್ಲಿ ಒಂದು ಕೆಲಸ ವಾಗಿದೆ.

೧೯೮೩ ರಿಂದ ಇವೊತ್ತಿನವರೆಗೆ ರಾಜ್ಯದ ಜನರ ಸಮಸ್ಯೆಗಳನ್ನು ಬಗೆಹರಿಸಲು ಜನತಾ ಸರಕಾರ ಬಹಳ ಉತ್ತಮವಾಗಿ ಕೆಲಸ ಮಾಡಿದೆ. ಹಾಗೆ ಮಾಡುವಲ್ಲಿ ಕೆಲವು ಸಣ್ಣಪುಟ್ಟವುಗಳು ಲೋಪ ದೋಷವಾಗಿ ಕಂಡರೂ ಕೂಡಾ ಜನಸಾಮಾನ್ಯರ ಕಷ್ಟಗಳನ್ನು, ಸಮಸ್ಯೆಗಳನ್ನು, ಅರಿತುಕೊಂಡು ಅದಕ್ಕೆ ಸ್ಪಂಧಿಸುವ ಒಂದು ಗುಣವನ್ನು ಪ್ರದರ್ಶನ ಮಾಡಿದೆ ಎನ್ನುವ ಮಾತನ್ನು ಹೇಳಿ ನಮ್ಮ, ಮಿತ್ರರಾದಂತಹ ಮಾನ್ಯ ಶ್ರೀ ಎಂ. ಪಿ. ಪ್ರಕಾಶ್‌ರವರು ತಂದಿರತಕ್ಕಂಥ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವಂತಹ ನಿರ್ಣಯವನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ಈ ಸಭೆಗೆ ಒಪ್ಪಿಸಿದ ಸಂದರ್ಭದಲ್ಲಿ, ನಮ್ಮ ಮಾನ್ಯ ಸದಸ್ಯರುಗಳಾದ ಶ್ರೀ ಎಂ. ಪಿ. ಪ್ರಕಾಶ್‌ರವರು ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ಮೋಷನ್ ಮೂವ್‌ಮಾಡಿ, ಅದಕ್ಕೆ ಶ್ರೀ ವೈ. ಕೆ. ರಾಮಯ್ಯನವರು ಅಭಿನಂದನೆಯನ್ನು ಸಲ್ಲಿಸಿದ ಈ ಸಂದರ್ಭದಲ್ಲಿ ಆ ಕುರಿತಾಗಿ ನಾನು ನಾಲ್ಕು ಮಾತುಗಳನ್ನು ಆಡಲು ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಅಧ್ಯಕ್ಷರೇ ನಮ್ಮ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಾಜ್ಯದಲ್ಲಿ ನಾಲ್ಕು ವರ್ಷಗಳಿಂದ ಮಳೆ ಬಾರದಿದ್ದರೂನೂ, ಆ ಮೇಲೆ ಸ್ವಲ್ಪಮಟ್ಟಿಗೆ ಸುಧಾರಣೆ ಆಯಿತು, ನಮಗೆ ಇನ್ನು ಮುಂದೆ ಬಹಳ ಮಟ್ಟಿಗೆ ಅನುಕೂಲತೆ ದೊರೆಯಿತು ಎಂದು ಹೇಳಿದರು. ನಾನು ನಮ್ಮ ರಾಜ್ಯದ ಮತ್ತು ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ನೋಡಿಕೊಂಡರೆ, ಮಳೆ ಆಯಿತು ನಿಜ, ಆದರೆ ಆದ ಮಳೆ ಸಕಾಲದಲ್ಲಿ ಆಗಲಿಲ್ಲ. ಹಾಗೆಯೇ ಬಂದಂತಹ ಮಳೆ ಊರಿನಲ್ಲಿನ ಕೆರೆಕಟ್ಟೆಗಳು ತುಂಬಲಿಲ್ಲ. ಹಾಗೆ ಸರಿಯಾಗಿ ಮಳೆ ಆಗಲಿಲ್ಲವಾದ ಕಾರಣ, ಬಾವಿಗಳಲ್ಲಿ ಸರಿಯಾಗಿ ನೀರು ಬಂದಿಲ್ಲ. ಸಾಕಾದಷ್ಟು ಹುಲ್ಲು, ಆಹಾರ, ದೊರೆತಿಲ್ಲ. ನಮ್ಮ ಬಂಡೀಪುರಕ್ಕೆ ಬಂದರೆ ನೋಡಬಹುದು, ಒಂದು ಆನೆ ಪಂಪ್ ತುಳಿಯುತ್ತದೆ, ಇನ್ನೊಂದು ಆನೆ ನೀರು ಕುಡಿಯುತ್ತದೆ ಆನೆಗಳಿಗೂ ನೀರು ಕುಡಿಯಲಿಕ್ಕೆ ನೀರು ಸಿಗದೇ ಇರತಕ್ಕಂಥ ಕಾಲದಲ್ಲಿ ಹೆಚ್ಚು ಮಳೆ ಬಂತು, ರಾಜ್ಯಕ್ಕೆ ಅನುಕೂಲ ಆಯಿತು ಎಂದು ರಾಜ್ಯ ಪಾಲರ ಬಾಯಲ್ಲಿ ಹೇಳಿಸಿದ್ದಾರೆ. ನಿಜ ಪರಿಸ್ಥಿತಿಯನ್ನು ಅರಿತು ಕೊಂಡು, ಪರಿಸ್ಥಿತಿಯನ್ನು ಗಮನ ದಲ್ಲಿಟ್ಟುಕೊಂಡು ಕೆಲಸವನ್ನು ತೆಗೆದುಕೊಳ್ಳ ಬೇಕು ಮತ್ತು ತುಂಬಾ ಅನುಕೂಲ, ಬಂದ ಮಳೆ ಯಿಂದ ಆಯಿತು ಎಂದು ಭಾವಿಸ ಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರಾಜ್ಯಪಾಲರು ''ದುರದೃಷ್ಟವಶಾತ್ ವೃತ್ತಪತ್ರಿಕೆಯೊಂದರಲ್ಲಿ ಪ್ರಕಟವಾದ ಕತೆಯು ಒಂದು ಕೋಮಿನವರ ಭಾವನೆಗಳನ್ನು ಕೆರಳಿಸಿದ್ದು ಕರ್ನಾಟಕದ ಈ ಖ್ಯಾತಿಗೆ ಕಲಂಕ ತಟ್ಟಿತು. ಬೆಂಗಳೂರು, ಮೈಸೂರು ಮತ್ತು ತುಮಕೂರುಗಳಲ್ಲಿ ಹಿಂಸಾತ್ಮಕ ಘಟನೆಗಳು ಸಂಭವಿಸಿ, ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಯಿತು ಇನ್ನು ಮುಂತಾಗಿ ಹೇಳಿದ್ದಾರೆ. ದುರಾದೃಷ್ಟ ಎಂದು ಹೇಳಿದ್ದಾರೆ. ೫೦ ವರ್ಷಗಳಿಂದಲೂ ಎಂದೂ ಆಗದೇ ಇರತಕ್ಕಂಥ ಗಲಭೆ ಅಲ್ಲಿ ಏತಕ್ಕೆ ಆಯಿತು ಎಂದು ಸರಕಾರದವರಿಗೆ ಗೊತ್ತಿಲ್ಲ. ಮೈಸೂರಿನಲ್ಲಿ ಈಗಲೂ ಕೂಡ ಜನಗಳು ನೆಮ್ಮದಿ ಯಿಂದ ಬಾಳುವುದಕ್ಕೆ ಒಂದು ಅನುಕೂಲಕರ ವಾತಾವರಣಸೃಷ್ಟಿಯಾಗಿಲ್ಲ. ಇನ್ನೂ ಜನ ತಲ್ಲಣಿಸುತ್ತಾ ಇದ್ದಾರೆ. ಈಗ ಸರಕಾರದವರು ಭಯದಿಂದ ನೊಂದವರಿಗೆ ಪರಿಹಾರ ಕೊಡಬೇಕು. ಹಾಗೆಯೇ ನಿರಪರಾಧಿಗಳನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕಿದ್ದಾರೆ. ಅವರಿಗೆ ಅನುಕೂಲ ಮಾಡಿ ಕೊಡಬೇಕು. ಅಂತಹವರ ಕುಟುಂಬಗಳನ್ನು ನೋಡುವುದಕ್ಕೆ ಕೂಡ ಆಗುತ್ತಿಲ್ಲ, ಅಷ್ಟು ನೊಂದಿದ್ದಾರೆ. ಅವರುಗಳು ಏನೂ ತಪ್ಪು ಮಾಡಲಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಏನೂ ತಪ್ಪು ಮಾಡಿಲ್ಲ. ಎಷ್ಟೋ ಜನ ಸೋಶಿಯಲ್ ವರ್ಕರ್ಸ್ ಇದ್ದಾರೆ. ವಿನಾಕಾರಣ ಯಾರ್‍ಯಾರ ಮಾತು ಕೇಳಿಕೊಂಡು ಜೈಲಿನಲ್ಲಿಟ್ಟು ಕೊಂಡಿರುವವರನ್ನು ಬಿಟ್ಟುಕೊಡಬೇಕೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರೇ, ಸನ್ಮಾನ್ಯ ಪ್ರಕಾಶರವರು ಮತ್ತು ರಾಮಯ್ಯನವರು ಬಹಳ ಚೆನ್ನಾಗಿ ಮಾತನಾಡಿದರು. ಪ್ರಕಾಶರಂತೂ ವ್ಯಾಕರಣಬದ್ಧವಾಗಿ ಪ್ರೊಫೆಸರ್ ಹಾಗೆ ಎಲ್ಲ ಕೊಟೇಷನ್‌ಗಳನ್ನೂ ಹೇಳಿ ಒಳ್ಳೆಯ ಸಾಹಿತ್ಯಪೂರ್ಣವಾಗಿ ಮಾತನಾಡಿದರು. ರಾಮಯ್ಯನವರು ಪಾಪ ನಮ್ಮ ಹಾಗೆ ಹಳ್ಳಿಗರು, ನಾವು ಹೇಗೆ ಮಾತನಾಡುತ್ತೇವೋ ಹಾಗೆ ಒರಟೊರಟಾಗಿ ಅವರ ಹೊಟ್ಟೆಯಲ್ಲಿ ಏನಿತ್ತೋ ಅದನ್ನೆಲ್ಲಾ ಹೇಳಿದರು. ಜನಗಳಿಗೆ ಎಷ್ಟು ತೊಂದರೆಯಾಗಿದೆ, ಎಷ್ಟು ಅನುಕೂಲವಾಗಿದೆ, ಸರ್ಕಾರ ಏನೇನು ಮಾಡಿದೆ ಎಂದು ಅವರು ಹೇಳುವಾಗ ಬಹಳ ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್ಸ್ ಕಂಡು ಬಂದವು. ಆದರೂ ಪಾಪ ಅವರಿಗೂ ಸಮಾಧಾನ ಆಗಿಲ್ಲ, ಹೇಳಲೇಬೇಕಲ್ಲ, ಹೇಳದಿದ್ದರೆ ವಿಧಿಯಿಲ್ಲ ಎಂದು ಮಾತನಾಡಿದ್ದು ಕಂಡುಬಂತು. ನಾನಂತೂ ಬಹಳ ನಿಗಾ ಕೊಟ್ಟು ಇವರಿಬ್ಬರ ಮಾತನ್ನು ಕೇಳಿದೆ. ಕೊನೆಯದಾಗಿ ಹೇಳಿದರು : ಚುನಾವಣೆ ಅನಿವಾರ್ಯವೆಂದು ನೆಹರೂ ಅವರೇ ಹೇಳಿದ್ದಾರೆ, ಇದು ನೆಸೆಸರಿ ಈವಿಲ್ ಎಂದು. ಪ್ರಕಾಶರು ಜಿಲ್ಲಾಪರಿಷತ್ತುಗಳ ವಿಚಾರದಲ್ಲಿ, ಚುನಾವಣೆಗಳ ವಿಚಾರದಲ್ಲಿ ಬಹಳ ಮಟ್ಟಿಗೆ ಯಾರೋ ಕಾಣದವರ ಮುಂದೆ ಹೇಳುವಂತೆ ಹೇಳಿದರು. ಈ ಚುನಾವಣೆಗಳನ್ನು ಇವರ್ಯಾರೂ ನೋಡೇ ಇರಲಿಲ್ಲವೆಂದು ಕಾಣುತ್ತದೆ, ಪಾಪ. ಜನಗಳ ಕೈಗೆ ಸೂರ್ಯ ಚಂದ್ರ ನಕ್ಷತ್ರಗಳನ್ನು ತಂದು ಕೊಟ್ಟಿದ್ದೇವೆಂದರು. ಲೋಕನಾಯಕ ಜೆ. ಪಿ. ಯವರ ಐಡಿಯಲ್ಸ್ ಪ್ರಕಾರ ಚುನಾವಣೆ ನಡೆಸಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಹೇಳಿದರು. ಹಾಗೆಯೇ ಮಹಾತ್ಮ ಗಾಂಧಿಯವರು ಕನಸು ಕಂಡಂತೆ ಮಾಡಿದ್ದೇವೆ, ಜನಗಳಿಗೆ ಇದರಿಂದ ಸಂತೋಷ ವಾಗಿದೆ ಎಂದು ಹೇಳಿದರು. ಅಲ್ಲದೆ ಇದರಲ್ಲಿ ತಪ್ಪು ನ್ಯೂನತೆ ಇರಬಹುದು, ಆದರೆ ಅಂಥಾ ಅನಾಹುತ ಆದಂತೆ ಕಾಣುತ್ತಿಲ್ಲ ಎಂದರು. ಆಮೇಲಿಂದ ಇನ್ನು ಏನು ಹೇಳಿದರು? ನಮ್ಮ ಪ್ರಕಾಶರು ಹೇಳಿದಂತೆ ಜಿಲ್ಲಾಪರಿಷತ್ತು ಮಂಡಲ ಪಂಚಾಯಿತಿಗಳ ಚುನಾವಣೆಗಳು, ವ್ಯವಸ್ಥೆ ಯಾವುವೂ ಹೊಸಾವೇನಲ್ಲ, ಅವರಿಗೆ ಪಾಪ ಗೊತ್ತಿಲ್ಲದಿರಬಹುದು ಆದರೆ ನಮಗಂತೂ ಗೊತ್ತು. ಹಿಂದೆಯೂ ಡಿಸ್ಟ್ರಿಕ್ಟ್ ಬೋರ್ಡ್ಸ್ ಇದ್ದು, ಗ್ರೂಪ್ ಪಂಚಾಯಿತಿಗಳಿದ್ದು. ಆಗ ಇದ್ದ ಹಣವನ್ನು ಅವರು ಖರ್ಚು ಮಾಡುತ್ತಿದ್ದರು. ಈಗಿರುವ ಹಣವನ್ನು ಇವರು ಖರ್ಚು ಮಾಡುತ್ತಾರೆ, ಅಷ್ಟೇ. ಆಗಲೂ ಇಂಜಿನೀರ್ಸ್, ಡಾಕ್ಟರ್‌ಗಳು, ಸ್ಕೂಲ್‌ಗಳು ಎಲ್ಲ ಜಿಲ್ಲಾ ಬೋರ್ಡ್ಸ್ ಅಧೀನದಲ್ಲಿದ್ದುವು. ಇವಕ್ಕೆ ಇವರು ಹೊಸ ಹೆಸರು ಇಟ್ಟು ಕರೆಯುತ್ತಿದ್ದಾರೆ ಅಷ್ಟೇ. ಪಾಪ ಇವರಿಗೆಲ್ಲ ಹೊಸದಾಗಿ ಯಾರೂ ಮಾಡಬಾರದ್ದನ್ನು ಮಾಡಿದ್ದೇವೆ, ಎಲ್ಲಾ ಕೈಗೆ ಸಿಕ್ಕಿಹೋಯ್ತು, ಇನ್ನು ಯಾವ ರೀತಿಯಲ್ಲೂ ಬಾಧಕ ಇಲ್ಲ ಎಂದು, ನಮ್ಮ ನಜೀರ್‌ಸಾಬ್‌ರ ಸಿದ್ಧಾಂತವೆಲ್ಲ ಚುನಾವಣೆಗಳ ಮೂಲಕ ನಡೆದುಹೋಯಿತೆಂದು ಭಾಷಣ ಮಾಡಿದರು.

**ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.**—ಅವರು ನಿಮಗೆ ಹಳೇ ಶಿಷ್ಯರಲ್ಲವೇ?

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ.**—ನಮ್ಮ ಶಿಷ್ಯರು, ಈಗ ನಿಮಗೆ ಗುರುಗಳು. ಅಧ್ಯಕ್ಷರೇ ನಮ್ಮ ದೇಶದಲ್ಲಿ ೭೮ ಪರ್ಸೆಂಟ್ ಓದದೇ ಇರುವ ಜನ ಇದ್ದಾರೆ. ಅವರಿಗೆ ರಾಜ್ಯವಾಳುವುದಕ್ಕೆ ಬಿಟ್ಟುಕೊಟ್ಟಿದ್ದೇವೆ. ಓದದೇ ಇರತಕ್ಕಂತಹ ಜನರಲ್ಲಿ ಬುದ್ಧಿವಂತರಿಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲಾ ತಾಲ್ಲೂಕಿನಲ್ಲಿ ಆದ ಹಾಗೆ ನಮ್ಮ ತಾಲ್ಲೂಕಿನಲ್ಲೂ ಎಲೆಕ್ಷನ್ ಆಯಿತು. ಗಾಂಧೀಜಿಯವರು ಕನಸು ಕಂಡರಂತೆ ಹಳ್ಳಿಯವರಿಗೇ ರಾಜ್ಯ ಆಳುವುದಕ್ಕೆ ಪ್ಲಾನ್ ಮಾಡಿಕೊಳ್ಳುವುದಕ್ಕೆ ಬಿಟ್ಟು ಅವರಿಗೆ ಬೇಕಾದಂತಹ ಪ್ಲಾನ್‌ಗಳನ್ನು ಅವರೇ ಮಾಡಿಕೊಂಡು, ಅವರಿಂದಲೇ ರಾಜ್ಯಗಳ, ಗ್ರಾಮಗಳ ಉದ್ಧಾರವಾಗಬೇಕು. ರಾಮರಾಜ್ಯವಾಗಬೇಕು, ಗ್ರಾಮರಾಜ್ಯವಾಗಬೇಕು ಎಂದು, ಇದನ್ನು ನಮಗೆ ಹೇಳುತ್ತಾರೆ ನಮಗೇನೋ ಗೊತ್ತಿಲ್ಲ, ಅದು ಇರಲಿ. ಪ್ರತಿಯೊಂದಕ್ಕೂ ರಾಜಕೀಯದ ಜನ ಹೋಗಿ ಮಾಡಿ ಎಂದು ಅವರು ಹೇಳಲಿಲ್ಲ ಅವರವರಿಗೆ ಏನು ಬೇಕೋ ಅವರವರೇ ಮಾಡಿಕೊಳ್ಳಲಿಕ್ಕೆ ಹೇಳಿದರೇ ಹೊರತು ನಮ್ಮನ್ನು ಹೋಗಿ ಅದಕ್ಕೆ ಕೈ ಹಾಕಿ, ಬಾಯಿ ಹಾಕಿ ಮಾಡಿ ಎಂದು ಹೇಳಿರಲಿಲ್ಲ. ಮಾನ್ಯ ನಜೀರ್‌ಸಾಬ್‌ರವರು ಬಹಳ ಓದಿದ್ದಾರೆ ಓದಿ ಓದಿ ಅವರಿಗೆ ತುಂಬಾ ಕನ್‌ಫ್ಯೂಸ್ ಆಗಿದೆ ಆ ಕನ್‌ಫ್ಯೂಸ್ ಇಮ್ಯಾಜಿನೇಷನ್‌ನಲ್ಲಿ ಒಂದು ತರಹದ ಭ್ರಮೆ ಇದೆ. ಇದರಿಂದ ಏನಾಗಿದೆ ಎಂದರೆ ಪವರ್ ಇದ್ದರೆ ಎಲ್ಲಾ ಆಗುತ್ತದೆ, ಅಧಿಕಾರವಿಲ್ಲದಿದ್ದರೆ ಏನೂ ಆಗುವುದಿಲ್ಲ ಎಂಬ ಭ್ರಮೆ ಬಂದು ಪವರ್ ಮ್ಯಾಡ್‌ನೆಸ್ ಬಂದಿದೆ. ರಾಮಣ್ಣ, ಭೀಮಣ್ಣ ಕತೆ ಇದೆ ಯಾರು ಏನೂ ಮಾಡದೇ ಹೋದರೂ ರಾಮಣ್ಣ, ಭೀಮಣ್ಣ ಸುಮ್ಮನೆ ಇರುತ್ತಿರಲಿಲ್ಲವಂತೆ, ಆ ರೀತಿ ಆಗಿದೆ. ಈ ಹಳ್ಳಿಗಳಿಗೆ ಪಾರ್ಟಿ ಎಲೆಕ್ಷನ್ ಬೇಕಾಗಿರಲಿಲ್ಲ ಅವರಿಗೆ ಯಾವ ಪಾರ್ಟಿಯವರು ಬಂದರೂ ಕೂಡ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಆಗಬೇಕು. ... ಅವರು ಹೇಳಿದ್ದು ಏನೆಂದರೆ ಪಾರ್ಟಿಗಳ ಪ್ರಕಾರವಾಗಿ ಮಾಡದೇ ಇದ್ದರೂ ನಾವು ಮಾಡಿದ್ದೇ ಸರಿ ಎಂಬ ಭ್ರಮೆ ನಿಮಗಿದ್ದರೆ, ನಮ್ಮಗಳಿಗೆ ಅನಿಸುತ್ತದೆ ಇದು ಬಹಳ ತಪ್ಪಾಯಿತು ಎಂದು. ಸುಮಾರು ಒಂದೂವರೆ, ಎರಡು ತಿಂಗಳಿನ ಹಿಂದೆ ಶಾಂತಿಯಿಂದ, ನೆಮ್ಮದಿ

ಯಿಂದ ಇದ್ದಂತಹ ಹಳ್ಳಿಗಳಲ್ಲಿ ಇಂದು ಏನಾಗಿದೆ ಎಂದರೆ, ಮನೆ ಮನೆಗೂ ವೈರತ್ವ, ಅಣ್ಣ ತಮ್ಮಂದರಿಗೆ ವೈರತ್ವ, ತಂದೆ ಮಗಳಿಗೆ ವೈರತ್ವ, ತಾಯಿ ಮಗಳಿಗೆ ವೈರತ್ವ ಉಂಟಾಗಿದೆ ಆದರೆ ಸ್ಥಳದಲ್ಲಿ ಪಾರ್ಲಿಮೆಂಟ್, ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಅಷ್ಟಾಗಿ ವೈರತ್ವ ತೋರುವುದಿಲ್ಲ. ಇದು ಎಲ್ಲಿಯವರೆಗೂ ಹೋಗುತ್ತದೆಂದರೆ, ಕಳೆದ ವಾರದಲ್ಲಿ ಒಬ್ಬರು ಕಾಲವಾಗಿ ಹೋದರು ಅವರ ಮಣ್ಣಿಗೂ ಸಹ ಅವರ ಮನೆಯವರು ಹೋಗಲಿಲ್ಲ, ಅವರು ಎದುರು ಪಾರ್ಟಿಯಿಂದ ನಿಂತಿದ್ದಕ್ಕೆ. ಇದನ್ನು ಮಾಡಿ ಎಂದು ಗಾಂಧೀಜಿಯವರು ಹೇಳಿದ್ದರೇ, ತಂದೆ ಮಗಳಿಗೆ, ಅಣ್ಣ ತಮ್ಮಂದರಿಗೆ ವೈರತ್ವ ಬರಬೇಕೆಂದು ಮಹಾತ್ಮಾ ಗಾಂಧೀಜಿಯವರು ಹೇಳಿದ್ದರೇ? ಇದನ್ನಂತೂ ಅವರು ಹೇಳಲಿಲ್ಲ ವೆಂದು ನನಗಾದರೂ ಅನಿಸುತ್ತದೆ. ಹೇಗೆ ಎಲೆಕ್ಷನ್ ನಡೆಸಿದ್ದು ಎಂದರೆ, ಮಾನ್ಯ ರಾಮಯ್ಯನವರು ಒಪ್ಪಿಕೊಂಡರು. ಮಾನ್ಯ ನೆಹರೂರವರು ಹೇಳಿದರು ಎಲೆಕ್ಷನ್ ಒಳ್ಳೆಯದಲ್ಲ ಅದು ಈವಿಲ್ ಆದರೂ ಅನಿವಾರ್ಯವೆಂದು ಹೇಳಿದರು. ಅಂತಹ ಅನಿವಾರ್ಯವನ್ನು ಎಷ್ಟರ ಮಟ್ಟಿಗೆ ನಿವಾರಿಸಬಹುದು ಎಂಬುದನ್ನು ಯೋಚನೆ ಮಾಡಬಹುದಾಗಿತ್ತು. ಇನ್ನು ಎಲೆಕ್ಷನ್‌ಗೆ ಕ್ಯಾಂಡಿಡೇಟ್ ಅನ್ನು ಸೆಲೆಕ್ಷನ್ ಮಾಡುವಾಗ ಒಬ್ಬ ಕ್ಯಾಂಡಿಡೇಟ್ ಅನ್ನು ಸೆಲೆಕ್ಟ್ ಮಾಡಿ ಇನ್ನೊಬ್ಬನ್ನೇನಾದರೂ ಡಮ್ಮಿಯಾಗಿ ಹಾಕಿದ್ದರೆ, ಅವರನ್ನೇ ಹಾರಿಸಿಕೊಂಡು ಹೋಗುವುದು. ಕ್ಯಾಂಡಿಡೇಟ್ ನಾಮಿನೇಷನ್ ಫೈಲ್ ಮಾಡಿದವರು ಡಮ್ಮಿ ಹಾಕಿಸಿಕೊಂಡಿದ್ದರೆ ಇವರೇ ಅವರ ಗುರುತು ಕೊಟ್ಟು ಕ್ಯಾಂಡಿಡೇಟ್ ಎಂದು ಮಂಡಿಸಿದರು. ಅಪ್ಲಿಕೇಷನ್ ಹಾಕುವಾಗ ಅಧಿಕಾರಿಗಳ ಕೈವಾಡವಿದ್ದು ಇವರ ಅಪ್ಲಿಕೇಷನ್ ಅನ್ನೇ ತೆಗೆದುಕೊಳ್ಳುವ ಹಾಗಿಲ್ಲ ಸಮಯ ಮುಗಿದು ಹೋಗಿದೆಯೆಂದು ಹೇಳಿ ಇವರು ಯುನಾನಿಮಸ್ ಆಗಿ ಎಲೆಕ್ಟ್ ಆಗಿದ್ದಾರೆ. ಅಪ್ಲಿಕೇಷನ್ ಹಾಕುವಾಗ ಹೀಗಾದರೆ ವಿತ್‌ಡ್ರಾಯಲ್ ಮಾಡುವಾಗ ಹೇಗೆಂದರೆ, ರಾಮಣ್ಣನನ್ನೇ ಭೀಮಣ್ಣನನ್ನಾಗಿ ಮಾಡುವುದು. ನೀನು ವಿತ್‌ಡ್ರಾಯಲ್ ಮಾಡಿಕೋ ೫,೦೦೦ ೧೦,೦೦೦ ೧೫,೦೦೦ ರೂಪಾಯಿ ಕೊಡುತ್ತೇನೆ ಎಂದು ಬಿಡ್, ಅಕ್ಷನ್ ಮಾಡುವುದನ್ನು ಎಲ್ಲಿಯಾದರೂ ಕೇಳಿದ್ದೀರಾ? ಇದು ಅನಿವಾರ್ಯವೆಂದು ಮಾನ್ಯ ರಾಮಯ್ಯನವರು ಹೇಳಿದರು, ಇದು ಅನಿವಾರ್ಯವಾಗಿದೆಯೇ? ಇಂತಹ ವಿಚಿತ್ರವನ್ನು ಎಲ್ಲಿಯಾದರೂ ಕೇಳಿದ್ದೀರಾ? ದೊಡ್ಡವರು, ಮಂತ್ರಿಗಳು, ಬರುತ್ತಾರೆ ಭಾಷಣಗಳನ್ನು ಮಾಡುತ್ತಾರೆ. ಆದರೆ ಈಗ ಆದದ್ದು ಏನು ಗಲ್ಲಿ ಗಲ್ಲಿಗೆ, ಮನೆ ಮನೆಗೆ ಹೋಗಿ ನಿನಗೆ ಬಾವಿ ತೋಡಿಸಿಕೊಡುತ್ತೇನೆ, ಮನೆ ಕೊಡಿಸುತ್ತೇನೆ, ಸಾಲ, ಪೆನ್‌ಷನ್ ಕೊಡಿಸುತ್ತೇನೆ, ಲೈಟ್ ಕೊಡಿಸುತ್ತೇನೆ ಎಂದು ಆಸೆ ತೋರಿಸುವುದು, ಇದಕ್ಕೆ ಜನ ಬಗ್ಗಲಿಲ್ಲ ಎಂದರೆ......

ಜನರನ್ನು ಭಯಪಡಿಸುವುದು, ನಿನಗೆ ಓಲ್ಡ್ ಏಜ್ ಪೆನ್ಷನ್ ನಿಲ್ಲಿಸುತ್ತೇವೆ ಮತ್ತು ನಿನ್ನ ಬಾವಿಯನ್ನು ರಿಪೇರಿ ಮಾಡಿಸುವುದಿಲ್ಲ, ನಿಮಗೆ ಅಕ್ಕಿ ಕೊಡುವುದಿಲ್ಲ ಬಡವರಿಗೆ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದಾರೆ, ಆದರೆ ಅಕ್ಕಿ ಕೊಡುವುದಿಲ್ಲ ಹರಿಜನರು ಬಡವರು ಬಗ್ಗರು ಎಲ್ಲರೂ ಇರುತ್ತಾರೆ. ಅವರಿಗೆ ಯಾವ ರೀತಿ ಹೆದರಿಸುವುದು ಎಂದರೆ ಅಕ್ಕಿಯನ್ನು ಹೇಗೆ ತೆಗೆದುಕೊಳ್ಳುತ್ತೀಯೋ ನೋಡೋಣ ಎಂದು ಕೊಡುವುದಿಲ್ಲ, ಸರ್ಕಾರದಿಂದ ಯಾವ ಸೌಲಭ್ಯವನ್ನು ಕೊಡುವುದಿಲ್ಲ ಎಂದು ಜನರನ್ನು ಹೆದರಿಸುವುದು. ಇದೂ ನಡೆಯಲಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಕೆಲಸವನ್ನು ಕೂಡಿ ಬಿಟ್ಟರು. ನಾಲ್ಕು ದಿವಸ ಸುಮ್ಮನೆ ಕೂಡಿಬಿಡುವುದು. ಹೊಡೆಯುವುದಿಲ್ಲ. ಬಡಿಯುವುದಿಲ್ಲ. ಇವತ್ತು ನಮ್ಮ ಹಳ್ಳಿಗಳಲ್ಲಿ ಕಾಕಿಬಟ್ಟೆ ಹಾಕಿಕೊಂಡು ಹೋದರೆ ಮತ್ತು ಪೋಲೀಸ್‌ನವರನ್ನು ಕಂಡರೆ ಜನರು ಗಡ ಗಡ ಎಂದು ನಡುಗುತ್ತಾರೆ. ಮಾನಕ್ಕೆ ಹೆದರುತ್ತಾರೆ. ಪೋಲೀಸ್ ಸ್ಟೇಷನ್‌ಗೆ ನನ್ನನ್ನು ಕರೆದುಕೊಂಡು ಹೋಗುತ್ತೇನೆ ಎಂದರೆ ನಾನು ಬರುತ್ತೇನೆ ನಡೆಯಿರಿ ಎಂದು ಹೇಳುತ್ತೇನೆ ಕಾಕಿ ಬಟ್ಟೆಗಳನ್ನು ಕಂಡರೆ ಜನರಿಗೆ ಅಂಜಿಕೆ ಹೋಗುವುದಿಲ್ಲ. ಸುಮ್ಮ ಸುಮ್ಮನೆ ನಾಲ್ಕೆಂಟು ದಿವಸ ಕೂಡಿ ಕೊಳ್ಳುವುದು. ಅವರು ಯಾವ ತರಹದ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಮಿತಿಮೀರಿದರೆ ಹೊಡೆದಿರುವುದು ಉಂಟು. ಆದರೆ ಅಷ್ಟು ಜಾಸ್ತಿ ಹೊಡೆದಿಲ್ಲ. ಇನ್ನೂ ಫಾರೆಸ್ಟ್ ಗಾರ್ಡ್ಸ್ ಬೇರೆ ಇದ್ದಾರೆ. ನಮ್ಮ ಹಳ್ಳಿಗಾಡಿನ ಜನರು ಸೌದೆಗೆ ಸೊಪ್ಪಿಗೆ, ದನ ಮೇಯಿಸಲಿಕ್ಕೆ, ಕುರಿಗಳನ್ನು ಅಟ್ಟಿ ಕೊಂಡು ಕಾಡಿಗೆ ಹೋಗುವುದು ಸಹಜ. ಆಗ ಅಲ್ಲಿ ಫಾರೆಸ್ಟ್ ಗಾರ್ಡ್ಸ್ ನೀವು ಯಾವ ರೀತಿ ಕಾಲು ಹಾಕುತ್ತೀರೋ ಹಾಕಿ ಎಂದು ಹೆದರಿಸುವುದು. ವಿಲೇಜ್ ವರ್ಕರ್ಸ್ ಬಂದುಬಿಟ್ಟರು, ವಿಲೇಜ್ ಅಕೌಂಟೆಂಟ್ ಬಂದರು, ಸರ್ವೇಯರ್ಸ್ ಬಂದುಬಿಟ್ಟರು. ಟೀಚರ್ಸ್‌ಗಳು ಯಾರು ಇದ್ದಾರೆ, ಅವರನ್ನು ಹೆದರಿಸುವುದು. ನೀವು ಕೆಲಸ ಮಾಡದಿದ್ದರೆ ಗುಲ್ಬರ್ಗ, ಬಿಜಾಪುರ ಕಾಣಿಸುತ್ತೇನೆ, ನಿನ್ನನ್ನು ಟ್ರಾನ್ಸ್‌ಫರ್ ಮಾಡಿಸುತ್ತೇನೆ, ಇದು ಒಂದು ತರಹದ ಅಂಜಿಕೆ. ಅಧಿಕಾರಿಗಳು ಗಡ ಗಡ ನಡುಗಿ ಬಿಟ್ಟರು. ಇಲ್ಲಿರುವಂತ ಜನ ಬಿಜಾಪುರದ ತುದಿಗೆ ಹೋಗಿಬಿಟ್ಟರೆ ಅವರ ಫ್ಯಾಮಿಲಿ ಗತಿಯೇನು ? ಇವರುಗಳನ್ನು ಟ್ರಾನ್ಸ್‌ಫರ್ ಮಾಡಿಸುತ್ತೇನೆ ಎನ್ನುವುದನ್ನು ಇವರ ಮಂತ್ರಿಗಳ ಪ್ರಕಾರ ಆವರ ಮಂತ್ರಿಗಳ ಮನೆಯವರೆಲ್ಲ ಮಂತ್ರಿಗಳು ಆಗಿಬಿಟ್ಟಿದ್ದರು. ಎಲ್ಲರೂ ಮಂತ್ರಿಗಳಾಗಿ

ಬಿಟ್ಟರು. ಹೋಗಿ ಹೇಳಿದ್ದೆ ಹೇಳಿದ್ದು...ಬಿ.ಡಿ.ಓ. ಆಫೀಸ್, ತಹಶೀಲ್ದಾರ್ ಆಫೀಸ್, ಸಬ್ ಇನ್ಸ್‌ಪೆಕ್ಟರ್ ಆಫೀಸ್‌ನಲ್ಲಿ ಇವರುಗಳು ಹೇಳುವುದಕ್ಕೆ ಲೆಕ್ಕ ಇಲ್ಲದಷ್ಟು ಜನರನ್ನು ಅಂಜಿಸುವುದಕ್ಕೆ ಶ್ರಮಪಟ್ಟರು. ಇದೂ ಆಯಿತಲ್ಲ. ಎಷ್ಟು ಪೇಪರ್ ಕಟಿಂಗ್ ಬೇಕು ನಿಮಗೆ. ಏಷ್ಟು ವಿಷಯ ಎಂದು ಹೇಳಲಿ ಈ ಎಲೆಕ್ಷನ್ ವಿಚಾರವಾಗಿ ಮಾನ್ಯ ಗೃಹಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು ಅದು ಈ ರೀತಿ ಇದೆ:

> ''ಕಾಂಗ್ರೆಸ್ ಪಕ್ಷಕ್ಕೆ ದೆಹಲಿಯಿಂದ ಫಿಲ್ಮ್ ರೀಲ್ ಬಾಕ್ಸ್‌ಗಳಲ್ಲಿ ಭಾರಿ ಹಣ ಬಂದಿದೆ ಎಂದು ಹೇಳಲಾಗಿದ್ದು ಅದನ್ನು ನಾಲ್ಕು ರೆವಿನ್ಯೂ ವಿಭಾಗಗಳಲ್ಲಿ ಖರ್ಚು ಮಾಡಲು ನೀಡಲಾಗಿದೆ ಎನ್ನಲಾಗಿದೆ. ಕೆ. ಹೆಚ್. ಪಾಟೀಲ್, ಮಲ್ಲಿಕಾರ್ಜುನ ಖರ್ಗೆ, ಶ್ರೀಕಂಠಯ್ಯ, ಕೆ.ಎಸ್. ನಾಗರತ್ನಮ್ಮ ಅವರು ಹಣ ವಿತರಣೆಯ ಮೇಲ್ವಿಚಾರಣೆ ವಹಿಸಿಕೊಂಡರೆಂದು ಹೇಳಲಾಗಿದೆ ಎಂದು ಮಾನ್ಯ ಗೃಹ ಮಂತ್ರಿಗಳು ಹೇಳಿದರು''.

ನಾಲ್ಕು ಜನರನ್ನು ಸೇರಿಸಿದರು. ಪಾಪ ಏತಕ್ಕೊ ಏನೋ ಬಸವಲಿಂಗಪ್ಪನವರ ಮೇಲೆ ಅಷ್ಟೊಂದು ಕರುಣೆ ಬಂದುಬಿಟ್ಟಿತ್ತು. ಆದರೆ ಏತಕ್ಕೋ ಏನೋ ಬಸವಲಿಂಗಪ್ಪನವರನ್ನು ಬಿಟ್ಟುಬಿಟ್ಟರು. ನೀನು ಹೇಳಿರುವುದನ್ನು ಹೇಳುತ್ತಿದ್ದೇನೆ,

> '' ಕಾಂಗ್ರೆಸ್‌ನವರಿಗೆ ನಿಗೂಢ ಪೆಟ್ಟಿಗೆ, ರಾಚಯ್ಯನವರ ಆರೋಪ. ಜಿಲ್ಲಾ ಪರಿಷತ್ತು ಚುನಾವಣೆ ಸಮಯದಲ್ಲಿ ಕಾಂಗ್ರೆಸ್‌ನವರಿಗೆ ದೆಹಲಿಯಿಂದ ಎರಡು ನಿಗೂಢ ಪೆಟ್ಟಿಗೆಗಳು ಬಂದವೆಂದು ರಾಜ್ಯದ ಗೃಹಸಚಿವ ಬಿ. ರಾಚಯ್ಯನವರು ಆಪಾದಿಸಿದ್ದಾರೆ. ಸೋಮವಾರ ಇಲ್ಲಿ ಕನ್ನಡ ಪ್ರಭ ವರದಿಗಾರರ ಜೊತೆ ಮಾತನಾಡುತ್ತಾ ಆಪಾದನೆ ಮಾಡಿದ ಸಚಿವ ರಾಚಯ್ಯ ಅವರು ವಿಮಾನವು ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದಲ್ಲಿ ಇಳಿಯಿತು, ಅದು ದೆಹಲಿಯಿಂದ ಬಂದದ್ದೆಂದು ತಿಳಿದು ಬಂತು ಎಂದರು. ''

ಇದರ ಬಗ್ಗೆ ಇನ್ನೂ ಬೇಕಾದಷ್ಟು ಇದೆ. ಇವೆಲ್ಲಾ ಬೇಕಾಗಿಲ್ಲ.

ಅವರು ನಾನು ಹಣ ಹಂಚಿದ್ದೇನೆಂದು ಹೇಳುತ್ತಾರೆ ಡೆಲ್ಲಿಯಿಂದ ಪೆಟ್ಟಿಗೆಗಳು ಬಂದವು ಎಂದು ಹೇಳುತ್ತಾರೆ ಈ ಬಗ್ಗೆ ಅವರು ಕೇಳಿದ್ದಕ್ಕೆ ಉತ್ತರ ಕೊಡುವ ಶಕ್ತಿ ಇದೆ.

ಶ್ರೀ ಬಿ. ರಾಚಯ್ಯ.—ಆ ವಿಷಯವನ್ನು ನನ್ನ ಗಮನಕ್ಕೆ ತಂದಾಗ, ಈ ರೀತಿ ಪೆಟ್ಟಿಗೆಗಳು ಬಂದದ್ದು ನಿಜವೇ ಎಂದು ಕೇಳಿದಾಗ ಬಂದದ್ದು ನಿಜ ಅಂತ ಹೇಳಿದೆ ಇನ್ನೇನೂ ಹೇಳಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಕೇಳುತ್ತೇನೆ, ಇದನ್ನು ತಂದಾಗ ನಿಮ್ಮ ಅಧಿಕಾರಿಗಳು ಏನಾದರೂ ಅಫೀಮು ತಿನ್ನುತ್ತಿದ್ದರೆ ? ಅವರಿಗೆ ಅಭ್ಯಾಸ ಇಲ್ಲವೇ ಆ ಪೆಟ್ಟಿಗೆ ಸಮೇತ ನಮ್ಮನ್ನೂ ಸಹ ಹಿಡಿದುಕೊಂಡು ಹೋಗಿದ್ದರೆ ಮುಗಿಯುತ್ತಿತ್ತಲ್ಲಾ ? ಅವರೇನಾದರೂ ಜೂಜು ಆಡುತ್ತಿದ್ದರೇ ? ಇದನ್ನು ಹೇಳಬೇಕಾದರೆ ತಮಗೆ ಸ್ವಲ್ಪ ಮಟ್ಟಿಗಾದರೂ ಸೆನ್ಸ್ ಆಫ್ ಪ್ರಮೋಷನ್ ಬೇಡವೇ ?ಅದನ್ನು ಅವರು ತಿಳಿದುಕೊಂಡಿದ್ದರೆ ಈ ಮಾತು ಆಡುತ್ತಿರಲಿಲ್ಲ. ಅವರು ಹೇಳಿದ ಮಾತು ಕೇಳಿ ನನಗೆ ಸಂಶಯ ಬರುತ್ತೆ. ಏತಕ್ಕೆಂದರೆ ಆ ಸಮಯದಲ್ಲಿ ನಮ್ಮ ತಾಯಿಯವರು ಸೀರಿಯಸ್ ಆಗಿದ್ದರು. ನಾನು ನಮ್ಮ ಸ್ಥಳಕ್ಕೂ ಇಲ್ಲಿಗೂ ಓಡಾಡುತ್ತಿದ್ದೆ. ಮೈಸೂರಿಗೂ ಬೆಂಗಳೂರಿಗೂ ಓಡಾಡುತ್ತಿದೆ. ಆದರೆ ನಮ್ಮ ತಾಯಿಯನ್ನು ನಾವು ನೋಡಿಕೊಳ್ಳುವುದು ನನ್ನ ಕರ್ತವ್ಯ. ಅನಂತರ ಅವರು ಸತ್ತು ಹೋದರು ಆ ಸಮಯದಲ್ಲಿ ಈ ಪೆಟ್ಟಿಗೆ ಬಂತು, ಅದನ್ನು ತೆಗೆದುಕೊಂಡು ಹೋಗಿದ್ದಾರೆ ಅಂತ ಹೇಳಿವರಲ್ಲಾ ಅವರಿಗೇನಾದರೂ ಒಂದು ಸಂಸ್ಕೃತಿ ಇದೆಯೋ ಅಂತ ಕೇಳುತ್ತೇನೆ. ಇಂತಹ ಮಾತನಾಡುವುದಕ್ಕೆ ಅವರಿಗೆ ಹೇಗೆ ಮನಸ್ಸು ಬಂತು ? ನನ್ನನ್ನು ಅವರು ೩೦ ವರ್ಷದಿಂದಲೂ ನೋಡಿಲ್ಲವೇ ? ಈ ಹಣ ತೆಗೆದುಕೊಂಡು ನಾನು ಎಲೆಕ್ಷನ್ ಮಾಡಬೇಕೇ ಅವರು ಗುಂಡ್ಲುಪೇಟೆ ಎಲೆಕ್ಷನ್ ಒಂದು ಮಾದರಿ ಎಲೆಕ್ಷನ್ ಅನ್ನುವುದು ನೋಡಿಲ್ಲವೇ? ಅವರೂ ಬೇಕಾದಷ್ಟು ಎಲೆಕ್ಷನ್ ನೋಡಿದ್ದಾರೆ, ನಾನೂ ಬೇಕಾದಷ್ಟು ಎಲೆಕ್ಷನ್ ನೋಡಿದ್ದೇನೆ. ಅವರಿಗೆ ಇದನ್ನು ಯಾರು ಚುಚ್ಚು ಕೊಟ್ಟರೋ ಏನೋ ನನಗೆ ಅರ್ಥವಾಗುವುದಿಲ್ಲ. ಇನ್ನು ಮಾನ್ಯ ನಜೀರ್‌ಸಾಹೇಬರಾದರೆ ಅವರು ಇನ್ನೂ ಚಿಕ್ಕ ಹುಡುಗ, ಅವರಿಗೆ ಇನ್ನೂ ಬೇಕಾದಷ್ಟು ಅಂಬೀಷನ್ ಇದೆ. ಅವರು ನಾನು ಇನ್ನೂ ಮುಂದುವರೆಯಬೇಕು ಅನ್ನುವ ಆಸೆ ಇದೆ ಬೇಕಾದರೆ ಅವರು ಇದನ್ನು ಮಾಡಿಕೊಂಡು

ಹೋಗಲಿ. ಆದರೆ ಮಾನ್ಯ ರಾಚಯ್ಯನವರು ನನ್ನ ವಿಚಾರ ಗೊತ್ತಿದ್ದೂ ನನ್ನ ವಿಚಾರದಲ್ಲಿ ಈರೀತಿ ಮಾತನಾಡುವುದಕ್ಕೆ ಅವರಿಗೆ ಮನಸ್ಸು ಹೇಗೆ ಬಂತು ? ಇನ್ನು ರಾಮಣ್ಣ, ಭೀಮಣ್ಣ ಅವರುಗಳು ಬೇಕಾದರೆ ಮಾತಾಡಿಕೊಳ್ಳಲಿ. ಬೇಡ ಅನ್ನುವುದಿಲ್ಲ, ಈ ಎಲೆಕ್ಷನ್ ಅನಿವಾರ್ಯವಾಗಿ ಆಯಿತು. ಈಗ ೧೩ ಜನ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಇನ್ನು ಅವರು ನನ್ನನ್ನು ಲಿಂಗಾಯಿತ ವಾದಿ ಎಂದು ಹೇಳುತ್ತಾರೆ. ನಾನು ಲಿಂಗಾಯಿತ ಎಂದು ಹೇಳಿಕೊಳ್ಳುವುದಕ್ಕೆ ಅವಮಾನವೇ ? ನಾನು ಲಿಂಗಾಯಿತ ಎಂದು ಹೇಳಿ ಕೊಳ್ಳುವುದಕ್ಕೆ ಬಹಳ ಸಂತೋಷ ಇದು ನನಗೆ ಅವಮಾನ ಎಂದು ತಿಳಿದುಕೊಂಡಿಲ್ಲ. ಇನ್ನು ನನ್ನನ್ನು ಜಾತಿವಾದಿ ಎಂದು ಹೇಳುತ್ತಾರೆ. ಈಗ ನಜೀರ್‌ಸಾಹೇಬರು ಇಲ್ಲವೇ ಅವರು ಇವರು ಎಲ್ಲರನ್ನೂ ಹೇಳಿ. ನಾನು ಹೇಗೆ ಯಾರು ಅನ್ನುವುದನ್ನು ಕೇಳಿ ನಿಮಗೆ ಗೊತ್ತಾಗುತ್ತದೆ. ಅವರನ್ನು ಮುಂದಕ್ಕೆ ತರುವುದಕ್ಕೆ ನಾನು ಸಹಾಯ ಮಾಡಲಿಲ್ಲವೇ ? ಅವರನ್ನೇ ಏತಕ್ಕೆ ಮುಂದಕ್ಕೆ ತರಬೇಕಾಗಿತ್ತು. ನಾನು ಲಿಂಗಾಯಿತವಾದಿ ಅನ್ನುವ ಹಾಗೆ ಇದ್ದರೆ ನನಗೆ ಲಿಂಗಾಯಿತರು ಯಾರೂ ಸಿಕ್ಕುತ್ತಾ ಇರಲಿಲ್ಲವೇ ? ಅವರನ್ನು ಮುಂದಕ್ಕೆ ತೆಗೆದುಕೊಂಡು ಬಂದದ್ದು ಅವರು ಬುದ್ಧಿವಂತರು ಇಂಟಲಿಜನ್ಸ್ ಆಗಿದ್ದಾರೆ. ನಾಲ್ಕು ಜನಕ್ಕೆ ಸಹಾಯ ಮಾಡುವಂತವರು, ಅವರಿಗೂ ಸಹ ಮುಂದುವರೆಯಬೇಕು ಅನ್ನುವ ಆಸೆ ಇದ್ದುದರಿಂದ ಮುಂದಕ್ಕೆ ಬರಲಿ ಎಂದು ಸಹಾಯ ಮಾಡಿದೆ. ಹೀಗಿರುವಾಗ ನನ್ನನ್ನು ಏಕ್‌ದಮ್ ಜಾತಿವಾದಿ ಅಂತ ಹೇಳಬಹುದೇ.

೨.೦೦ ಪಿ. ಎಂ

ನಾವು ಇಲ್ಲಿ ಏನು ಮಾತನಾಡಿದರೂ ನಿಮ್ಮದು ಕಾಂಗ್ರೆಸ್ ಸಂಸ್ಕೃತಿ, ನಿಮ್ಮದು ಕಾಂಗ್ರೆಸ್ ಐಡಿಯಲ್ಸ್ ಎಂದು ಆ ಕಡೆಯವರು ಹೇಳುತ್ತಾರೆ. ಹಾಗಿದ್ದರೆ ನಿಮ್ಮದು ಹೈಬ್ರಿಡ್ ಕಾಂಗ್ರೆಸ್ ಸಂಸ್ಕೃತಿಯೇ ? ೪ ವರ್ಷಗಳ ಕೆಳಗೆ ಇವರೆಲ್ಲರೂ ಕಾಂಗ್ರೆಸ್ ಪಕ್ಷದಲ್ಲಿರಲಿಲ್ಲವೇ ? ಈ ೪ ವರ್ಷಗಳ ನಂತರ ಇವರ ಸಂಸ್ಕೃತಿ ಬೇರೆಯಾಯಿತೇ ? ಇವರು ಇದೇರೀತಿ ಮಾತನಾಡುತ್ತಾ ಹೋದರೆ, ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳು ಎಷ್ಟರಮಟ್ಟಿಗೆ ನಡೆದವು, ಮುಂದೆ ಈ ಸ್ಥಳೀಯ ಸಂಸ್ಥೆಗಳಿಂದ ಜನರಿಗೆ ಎಷ್ಟರಮಟ್ಟಿಗೆ ಉಪಕಾರವಾಗ ಬಹುದು ಎಂಬುದನ್ನು ತಮಗೇ ಬಿಡುತ್ತೇನೆ. ಈ ಸಂಸ್ಥೆಗಳು ಮುಂದೆ ಯಾವ ರೀತಿ ನಡೆಯುತ್ತವೆ ಎಂಬುದನ್ನು ಕಾದು ನೋಡೋಣ. ಇಲ್ಲಿಯವರೆಗೆ ಯಾರೂ ಮಾಡದಿದ್ದಂಥ ಚುನಾವಣೆಗಳನ್ನು ತಾವು ಮಾಡಿದ್ದೇವೆಂದು ಮಾನ್ಯ ರಾಮಯ್ಯನವರು ಬಹಳದೊಡ್ಡ ಮಾತನ್ನು ಹೇಳಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಧಿಕಾರದಲ್ಲಿದ್ದಾಗ ಮುನಿಸಿಪಲ್ ಚುನಾವಣೆಗಳನ್ನು ಮತ್ತು ನಗರ ಕಾರ್ಪೊರೇಷನ್ ಚುನಾವಣೆಗಳನ್ನು ನಡೆಸಲಿಲ್ಲ, ಆದರೆ ತಮ್ಮ ಕಾಲದಲ್ಲಿ ಚುನಾವಣೆಗಳು ನಡೆದವು ಎಂದು ಅವರು ಹೇಳಿದರು. ಹಾಗಿದ್ದರೆ ಇವರು ಗ್ರಾಮ ಪಂಚಾಯಿತಿಗಳ ಮತ್ತು ತಾಲ್ಲೂಕ್ ಬೋರ್ಡುಗಳ ಚುನಾವಣೆಯನ್ನು ಏತಕ್ಕೆ ನಡೆಸಲಿಲ್ಲ ? ಜಿಲ್ಲಾಪರಿಷತ್ ಚುನಾವಣೆಗಳು ಆಗುವವರೆಗೂ ತಾಲ್ಲೂಕ್ ಬೋರ್ಡುಗಳ ಚುನಾವಣೆಗಳನ್ನು ನಡೆಸಬಾರದೆಂದು ತೀರ್ಮಾನ ಮಾಡಿದವರು ಯಾರು ? ಈ ಬಗ್ಗೆ one ಪೆನ್‌ಸ್ಟ್ರೋಕ್‌ನಿಂದ ಹೊಡೆದು ಹಾಕಿದ್ದು ನಾವಲ್ಲ, ನೀವು. ತಾಲ್ಲೂಕ್‌ಬೋರ್ಡುಗಳ ಚುನಾವಣೆಗಳನ್ನು ನೀವು ಮಾಡಿದ್ದರೆ, ಅಲ್ಲಿಗೆ ಆರಿಸಿ ಬಂದವರು ಲಕ್ಷಣವಾಗಿ ತಮ್ಮ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದರು. ನೀವು ಗ್ರಾಮ ಪಂಚಾಯಿತಿಗಳ ಚುನಾವಣೆ ಮಾಡಿದ್ದರೆ, ಅಲ್ಲಿ ಪಾರ್ಟಿ ಪಂಗಡ ಎಂಬುದು ಇಲ್ಲದೆ ಅವರವರ ಕೆಲಸಗಳನ್ನು ಅವರವರು ಮಾಡಿಕೊಂಡು ಹೋಗುತ್ತಿದ್ದರು. ಚುನಾವಣೆ ನಡೆಸಿದ್ದರೆ ಆ ಸಂದರ್ಭದಲ್ಲಿ ಜನರು ಸ್ವಲ್ಪ ದಿವಸ ಕುರ್ರೋ ಮುರ್ರೋ ಅನ್ನುತ್ತಿದ್ದರು. ಅನಂತರ ಕೆಲಸ ಚೆನ್ನಾಗಿ ನಡೆದುಕೊಂಡು ಹೋಗುತ್ತಿತ್ತು. ಆದರೆ ತಾವು ಇದಕ್ಕೆ ಒಪ್ಪದೆ, ಜಿಲ್ಲಾಪರಿಷತ್‌ಗಳ ಮತ್ತು ಮಂಡಲ್ ಪಂಚಾಯತ್‌ಗಳ ಚುನಾವಣೆಯನ್ನು ನಡೆಸಿದಿರಿ. ಈ ಚುನಾವಣೆಗಳ ಸಂದರ್ಭದಲ್ಲಿ ಅಧಿಕಾರದ ದುರುಪಯೋಗ ಮತ್ತು ಹಣದ ದುರುಪಯೋಗ ಎಷ್ಟರಮಟ್ಟಿಗೆ ನಡೆಯಿತೆಂಬುದು ನನಗೆ ಗೊತ್ತಿಲ್ಲ. ಆದರೆ ಜನರು ಇದನ್ನೆಲ್ಲಾ ಹೇಳುತ್ತಿದ್ದಾರೆ. ಸಾರಾಯಿ ಪ್ಲಾಸ್ಟಿಕ್ ಚೀಲಗಳಲ್ಲಿ ಸರಬರಾಜಾಯಿತು. ಅದು ಎಲ್ಲಿಂದ ಬಂತು, ಹೇಗೆ ಬಂತು ಎಂಬುದನ್ನೆಲ್ಲಾ ಜನರು ಹೇಳುತ್ತಾರೆ. ಇವೊತ್ತು ಸಣ್ಣ ಸಣ್ಣ ಮಕ್ಕಳೂ ಸಹ ಕುಡಿಯುವುದನ್ನು ಅಭ್ಯಾಸ ಮಾಡಿದ್ದಾರೆ. ಪರಿಸ್ಥಿತಿ ಒಂದು ಕಡೆ ಈ ರೀತಿ ಇದ್ದರೆ, ಮತ್ತೊಂದು ಕಡೆ ಈ ನಮ್ಮ ಮಕ್ಕಳನ್ನು ಮುಂದೆ ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮದು ಎಂದು ಮಾನ್ಯ ರಾಮಯ್ಯನವರು ಹೇಳಿದರು. ಆದರೆ ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ಯಾರಿಗಾಗಿ ಇಷ್ಟೊಂದು ಮಿಲ್‌ಗಳನ್ನು ಪ್ರಾರಂಭ ಮಾಡಬೇಕು, ಇಷ್ಟೊಂದು ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕು, ಇಷ್ಟೊಂದು ಕಾಲೇಜುಗಳನ್ನು ಪ್ರಾರಂಭ ಮಾಡಬೇಕು ? ಯಾರಿಗಾಗಿ ನಾವು ಈ ದೇಶವನ್ನು ಕಟ್ಟಬೇಕು ? ಇದರ ಬಗ್ಗೆ ಒಂದು ದಿವಸವೆಲ್ಲಾ ಬೇಕಾದರೆ ಮಾತನಾಡಬಹುದು, ಮುಖ್ಯವಾಗಿ ಈ ಜಿಲ್ಲಾಪರಿಷತ್

ಚುನಾವಣೆಗಳನ್ನು ಯಾವ ರೀತಿ ನಡೆದವೆಂದು ಆ ಕಡೆಯವರು ಹೇಳಿದ್ದಾರೆ ಮತ್ತು ನಾನೂ ಸಹ ಹೇಳಿದ್ದೇನೆ. ಈ ಬಗ್ಗೆ ಮೇಲೆ ಕುಳಿತಿರುವಂತಹ ಜನರೇ ವಿಮರ್ಶೆ ಮಾಡಲಿ ಎಂದು ಇದನ್ನು ನಾನು ಅವರಿಗೇ ಬಿಡುತ್ತೇನೆ.

ಇನ್ನು ಎರಡನೇ ಶೃಂಗಸಭೆ ಬೆಂಗಳೂರಿನಲ್ಲಿ ನಡೆದ ಬಗ್ಗೆ ಮಾನ್ಯ ರಾಜ್ಯ ಪಾಲರು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಕಾರ್ಯಕ್ರಮ ಬಹಳ ಚೆನ್ನಾಗಿ ನಡೆಯಿತೆಂದು ಬಹಳಷ್ಟು ಜನ ಒಪ್ಪಿ ಕೊಂಡಿದ್ದು ನಿಜ. ಬೇರೆ ರಾಷ್ಟ್ರಗಳ ಮುಖ್ಯಸ್ಥರು ಸಹ ಇದನ್ನು ಹೊಗಳಿದರು. ಈ ಸಭೆ ನಡೆ ಸಲು ಕೇಂದ್ರ ಸರ್ಕಾರದವರು ಬೇಕಾದಷ್ಟು ಹಣ ಕೊಟ್ಟರು. ಬೇರೆ ರಾಷ್ಟ್ರಗಳಿಂದ ಬರುವವರಿಗೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡಲು ಹಣ ಕೊಟ್ಟರು. ಈ ಹಣವನ್ನು ಸರ್ಕಾರ ದವರು ನಾನಾ ಇಲಾಖೆಗಳ ಮೂಲಕ ಖರ್ಚು ಮಾಡಿದರು. ಆಗ ನಡೆದಂಥ ರಸ್ತೆ ರಿಪೇರಿ ಕೆಲಸ ಯಾವ ರೀತಿ ನಡೆದಿದೆ ಎಂದರೆ, ಈಗ ರಿಪೇರಿ ನಡೆದ ಕಡೆಗಳಲ್ಲಿ ಹಪ್ಪಳ ಸುಟ್ಟಂತೆ ಅಲ್ಲಲ್ಲೇ ಗುಂಡಿ ಗಳು ಬಿದ್ದಿವೆ. ಇವರು ರಸ್ತೆ ರಿಪೇರಿಗೆಂದು ಖರ್ಚು ಮಾಡಿದ ಹಣದಲ್ಲಿ ಬಹಳಷ್ಟು ಪಾಲು ಕಂಟ್ರಾ ಕ್ಟರ್‌ಗಳ ಹೊಟ್ಟೆಯನ್ನು ದಪ್ಪ ಮಾಡುವುದಕ್ಕಾಗಿಯೇ ಖರ್ಚಾಗಿದೆ. ಈ ರಸ್ತೆಗಳು ಯಾವ ರೀತಿ ಆಗಿವೆ ಎಂಬುದನ್ನು ಇವರೇ ಬೇಕಾದರೆ ಹೋಗಿ ನೋಡಲಿ. ಇಪ್ಪತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ಮಾನ್ಯ ರಾಮಯ್ಯನವರು ಬಹಳ ಚೆನ್ನಾಗಿ ಮಾತನಾಡಿದರು. ಈ ಬಗ್ಗೆ ಮಾತನಾಡುವಾಗ ನನ್ನ ಕಣ್ಣಲ್ಲಿ ನೀರು ಬರುತ್ತಿದೆ ಎಂದು ಅವರು ನನ್ನ ಬಗ್ಗೆ ಹೇಳಿದರು. ಒಂದೊಂದು ಸಲ ಕಣ್ಣಿಗೆ ಅಲರ್ಜಿ ಆದರೂ ಕಣ್ಣಲ್ಲಿ ನೀರು ಬರುತ್ತದೆ. ಈ ರೀತಿ ನನ್ನ ಕಣ್ಣಲ್ಲಿ ನೀರು ಬಂದಾಗ ಅವರು ನಾನು ಅಳುತ್ತಿದ್ದೇನೆಂದು ಹೇಳಿದರು. ಆದರೆ ನಾನು ಅಳಲಿಲ್ಲ- ನನಗೆ ಕಿವಿ ಚೆನ್ನಾಗಿ ಕೇಳುತ್ತದೆ. ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಅಳುವಂತಹ ಕೆಲಸಗಳು ಸಹ ನಡೆದಿವೆ. ಇಲ್ಲಿ ನಡೆದಿರುವ ಕೆಲವು ಕೆಲಸಗಳನ್ನು ನೋಡಿದರೆ ತನ್ನಷ್ಟಕ್ಕೆ ತಾನೇ ಕಣ್ಣಲ್ಲಿ ನೀರು ಬರುತ್ತದೆ.

ಮಾನ್ಯ ಅಧ್ಯಕ್ಷರೇ, ಈ ಗರ್ಭಿಣಿಯರಿಗೆ ಧನ ಸಹಾಯದ ಕಾರ್ಯಕ್ರಮ, ರೂರಲ್ ಏರಿಯಾಸ್‌ನಲ್ಲಿ ಬಡತನ ರೇಖೆಗೆ ಒಳಪಟ್ಟವರಿಗೆ ನಡೆಯತಕ್ಕ ಕಾರ್ಯಕ್ರಮ. ಇವುಗಳ ಬಗ್ಗೆ ನಮ್ಮಗಳನ್ನೆಲ್ಲಾ ಕೊಶ್ಚನ್ ಮಾಡಿದರು. ಗರ್ಭಿಣಿಯರಿಗೆ ಧನಸಹಾಯ ಮಾಡುವುದು ತಪ್ಪೆ, ಹೆರಿಗೆ ಭತ್ಯೆ ಕೊಡು ವುದು ತಪ್ಪೇ, ಟೆಕ್ಸ್ಟ್ ಬುಕ್ಸ್ ಕೊಡುವುದು ತಪ್ಪೇ, ಯೂನಿಫಾರಮ್ಸ್ ಕೊಡುವುದು ತಪ್ಪೇ, ತಾಳಿ ಭಾಗ್ಯ, ವಿಡೋಸ್ ಪೆನ್‌ಷನ್ ಕೊಡುವುದು ತಪ್ಪೇ ಎಂದು ಹೀಗೆ ಉದಕ್ಕೂ ನಮ್ಮಗಳನ್ನೆಲ್ಲಾ ಕೊಶ್ಚನ್ ಮಾಡಿದರು. ಇದು ಯಾವುದೂ ತಪ್ಪಲ್ಲ. ಆದರೆ ಈ ಕಾರ್ಯಕ್ರಮಗಳನ್ನು ಮಾಡುತ್ತಾ ಇರುವ ರೀತಿ ತಪ್ಪು. ಈ ಕಾರ್ಯಕ್ರಮಗಳು ತಪ್ಪು ಎಂದು ಯಾವ ಮೂರ್ಖರು ಹೇಳುತ್ತಾರೆ ಆದರೆ ಇವು ನಡೆಯುತ್ತಾ ಇರುವ ವಿಧಾನ ತಪ್ಪು. ಈಗ ಹೆರಿಗೆ ಭತ್ಯೆ ಆ ಹೆಣ್ಣು ಮಕ್ಕಳಿಗೆ ಸಿಗುತ್ತಿ ದೆಯೇ. ನಾನು ಅವತ್ತೇ ಹೇಳಿದೆ. ಹೆಣ್ಣುಮಗಳು ಬಸಿರು ಆದ ಕೂಡಲೇ ಗಂಡ ನಿನಗೆ ಹೆರಿಗೆ ಭತ್ಯೆ ಬರುತ್ತದೆ ಎಂದು ಶುರುಮಾಡುತ್ತಾನೆ. ಹೆರಿಗೆ ಆದ ಮೇಲೆ ಆಕೆಗೆ ೫ ರೂಪಾಯಿ, ೧೦ ರೂಪಾಯಿ ಸಿಗಬಹುದು. ಹೆಲ್ತ್ ವಿಸಿಟರ್, ಡಾಕ್ಟರ್ ಕೊನೆಗೆ ಗಂಡ ಎಲ್ಲರೂ ಅದಕ್ಕೆ ಪಾಲು ದಾರರು. ಹೀಗಾಗಿ ಯಾವ ಭತ್ಯವೂ ಅವರಿಗೆ ಸಿಕ್ಕುವುದಿಲ್ಲ. ಆಮೇಲೆ ಬುಕ್ಸ್, ಯೂನಿಫಾರಂ ಸಪ್ಲೈ ಮಾಡುತ್ತಾರೆ. ಒಂದು ಬುಕ್ಕನ್ನು ಒಂದು ಮಗುವಿಗೆ ಕೊಟ್ಟರೆ ಸಾಕೇ. ಅದು ಬೇರೆ ಕಡೆ ಪ್ರಿಂಟಾಗುವುದಿಲ್ಲ, ಹೊರಗಡೆ ಸಿಗುವುದಿಲ್ಲ. ನಿಮ್ಮ ಮಕ್ಕಳು ಕೊನೇವರೆಗೆ ಒಂದು ಪುಸ್ತಕವನ್ನು ಇಟ್ಟು ಕೊಂಡಿರುತ್ತಾರೆಯೇ. ನಮ್ಮ ಮನೆಯಲ್ಲಿ ಮಕ್ಕಳು ಹರಿದು ಹಾಕುತ್ತಾರೆ. ಒಂದು ಬುಕ್ಕ ನ್ನು ತೆಗೆದುಕೊಂಡು ಹೋಗಿ ಆಮೇಲೆ ಹರಿದು ಹೋದರೆ ಮತ್ತೆ ಎಲ್ಲಿ ಸಿಗಬೇಕು ಅದು. ಇನ್ನು ಯೂನಿಫಾರ್ಮ್ಸ್. ಈ ಯೂನಿಫಾರ್ಮ್ ಎಷ್ಟು ತಿಂಗಳ ಬರುತ್ತೆ. ಒಂದು ತಿಂಗಳೂ ಬರು ವುದಿಲ್ಲ. ಆ ಹೊಲಿಗೆ ಆ ಬಟ್ಟೆನೇ. ಎಷ್ಟು ದುಡ್ಡು ಅನಾವಶ್ಯಕವಾಗಿ ಖರ್ಚು ಆಗುತ್ತಿದೆ. ಅದರ ಬದಲು ಗಟ್ಟಿಯಾಗಿರುವಂಥ ಬಟ್ಟೆಯನ್ನು ನೀಡಿವಾಗಿರುವಂಥ ಮಕ್ಕಳಿಗೆ ಕೊಡಿ. ಎಲ್ಲ ಮಕ್ಕಳಿಗೂ ಕೊಡುತ್ತೇವೆ ಎನ್ನುವ ವಿಧಾನವನ್ನು ತಪ್ಪಿಸಿ. ಇನ್ನು ತಾಳಿಭಾಗ್ಯ ಯೋಜನೆ. ಮದುವೆಯಾಗುವವರಿಗೆ ತಾಳಿ ಕೊಡುವುದು ತಪ್ಪೇ ಎಂದು ಕೊಶ್ಚನ್ ಮಾಡಿದರು. ಇದು ಕೊಡು ವುದು ತಪ್ಪು ಎಂದು ನನ್ನ ಭಾವನೆ. ಏಕೆಂದರೆ, ಇದನ್ನು ಹೇಳಬೇಕೋ ಬೇಡವೋ ಗೊತ್ತಿಲ್ಲ. ಬರ್ನಾರ್ಡ್‌ಷಾ ಹೇಳಿದನಂತೆ, 'what is marriage? A marriage is a public announcement for a private purpose.' This is marriage.

ಆದರೆ ನಮ್ಮಲ್ಲಿ ಹಾಗಿಲ್ಲ. ಮ್ಯಾರೇಜ್ ಏನಿದೆ ಅದಕ್ಕೆ ಸೆಂಟಿಮೆಂಟ್ಸ್ ಮತ್ತು ಎಲ್ಲಾ ಸ್ಯಾಂಕ್ಟಿಟಿ ಇದೆ. ಎರಡು ಗುಲಗಂಜಿ ತೂಕದ ತಾಳಿ ಮಾಡಿ ಕಟ್ಟಿದರೂ ಗಂಡನಿಗೆ ಬೆಲೆ ಇರುತ್ತದೆ, ಮರ್ಯಾದೆ ಇರುತ್ತದೆ. ಆದರೆ ನಿಮ್ಮ ಸರ್ಕಾರದ ತಾಳಿಗೆ ಬೆಲೆ ಇಲ್ಲ. ಸರ್ಕಾರ ತಾಳಿಯನ್ನು ಕೊಡಕೂಡದು.

ಹರಿಶಿನದ ಕೊಂಬನ್ನು ಕಟ್ಟಿದರೂ ಎಷ್ಟೋ ಬೆಲೆ ಇರುತ್ತದೆ. ಯಾರಾದರೂ ಅಪ್ಲಿಕೇಷನ್ ಹಾಕಿದ್ದರೆ, ನಾನು ಮದುವೆಯಾಗುತ್ತೇನೆ ತಾಳಿ ಕೊಡಿ ಎಂದು, ನಮಗಂತೂ ಕಾಣಲಿಲ್ಲ. ನಾನು ಹೇಳುತ್ತಾ ಇರುವುದನ್ನು ಯಾರೂ ವಿನೋದವಾಗಿ ತೆಗೆದುಕೊಳ್ಳಬೇಡಿ. ನಾನು ಜನರು ಹೇಳುವುದನ್ನು ಕೇಳುತ್ತಾ ಇದ್ದೆ.

ಡಾ|| ಹೆಚ್.ಎಲ್. ತಿಮ್ಮೇಗೌಡ.—ಸಾಮೂಹಿಕ ವಿವಾಹಗಳನ್ನು ಮಾಡುತ್ತಾರೆ, ಆಗಅವರಿಗೆ ತಾಳಿಗಳನ್ನು ಕೊಡುತ್ತಾರಲ್ಲ ಅದನ್ನು ತಪ್ಪು ಎಂದು ಹೇಳುತ್ತೀರಾ ?

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ಎಲ್ಲಾ ಮಠಗಳಲ್ಲಿ ನೀವು ಸಾಮೂಹಿಕ ಮದುವೆಗಳನ್ನು, ಸಾಮೂಹಿಕ ಸಮಾರಾಧನೆಗಳನ್ನು ಮಾಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಶ್ರೀ ಮತಿ ನಾಗರತ್ನಮ್ಮನವರು ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬಂದಿದ್ದಾರೆ. ಅವರಿಗೆ ತಾಳಿಭಾಗ್ಯ ಬೇಡ.

ಶ್ರೀ ಮತಿ ಕೆ.ಎಸ್. ನಾಗರತ್ನಮ್ಮ.— ನನ್ನ ಶ್ರೀ ಮಂತಿಕೆ ಇವರಿಗೆ ಏನು ಬೇಕಾಗಿದೆ ?

ಶ್ರೀ ಬಿ. ಆರ್. ನೀಲಕಂಠಪ್ಪ.—ಅವರು ಶ್ರೀಮಂತ ಮನೆತನದವರು. ತಾಳಿಭಾಗ್ಯ ನನಗೆ ಬೇಡ ಎಂದು ಹೇಳುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ನಾನು ಯಾರಿಗೂ ಈಲ್ಡ್ ಆಗುವುದಿಲ್ಲ.

ಅಧ್ಯಕ್ಷರು.—ದಯವಿಟ್ಟು ಯಾರೂ ಇಂಟರ್‌ಫಿಯರ್ ಮಾಡಬಾರದು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ವಿಧವೆಯರಿಗೆ ಮಾಶಾಸನ ಕೊಡುವ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಪುರುಷರು ಈ ದೇಶದಲ್ಲಿ ಏನು ಮಾಡುವುದಕ್ಕೂ ಹೇಸುವುದಿಲ್ಲ. ಬಡತನ ಈ ದೇಶದಲ್ಲಿ ತಾಂಡವಾಡುತ್ತಿರುವಾಗ, ಗಂಡಂದಿರು ತಮ್ಮ ಪತ್ನಿಯರನ್ನು ಬಲವಂತವಾಗಿ ವಿಧವೆಯರೆಂದು ಮಾಶಾಸನ ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಬಂದಂಥ ಹಣವನ್ನು ತೆಗೆದುಕೊಂಡು ಹೋಗಿ ಸಾರಾಯಿ ಕುಡಿದು ಬರುತ್ತಾರೆ. ಇದು ನಿಮ್ಮ ಪಾಪುಲರ್ ಪ್ರೋಗ್ರಾಂ ಅಲ್ಲದೇ ಮತ್ತೇನು ? ನೀವು ಮಾಡಿದ ಕೆಲಸಕ್ಕೆ ಮುಕ್ತಿಯಂತೂ ಇಲ್ಲ. ನೀವು ಮಾಡುತ್ತಿರುವ ಕಾರ್ಯಕ್ರಮಗಳಿಗೆ ನನ್ನ ವಿರೋಧ ಅಲ್ಲ, ಆ ರೀತಿ ವಿರೋಧ ಮಾಡುವಂಥ ಮುಟ್ಠಾಳಳು ನಾನಲ್ಲ ಬಡವರಿಗೆ ಸಹಾಯವಾಗಬೇಕು. ಮಾನ್ಯ ಸದಸ್ಯರು ನನ್ನ ಶ್ರೀಮಂತಿಗೆ ಬಗ್ಗೆ ಹೇಳಿದರು, ನನ್ನ ಶ್ರೀಮಂತಿಗೆಯ ಬಗ್ಗೆ ಮೈಸೂರು ಜಿಲ್ಲೆಯವರನ್ನು ಕೇಳಿ, ನಿಮಗೆ ಗೊತ್ತಿಲ್ಲ. ಇನ್ನು ಆಹಾರ ಪದಾರ್ಥಗಳ ವಿತರಣೆ ವಿಚಾರದಲ್ಲಿ ಹೇಳುವುದಾದರೆ, ೩೧,೦೦೦ ಕುಟುಂಬಗಳಿಗೆ ಸಬ್ಸಿಡೈಸ್ ದರದಲ್ಲಿ ಆಹಾರ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರನ್ನು ಎಷ್ಟು ಕೇಳಿದರೂ ಆಹಾರ ದವಸವನ್ನು ಒದಗಿಸುತ್ತಾರೆ. ಈಗ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ತೊಂದರೆಯಲ್ಲಿರುವವರಿಗೆ ಹೆಚ್ಚು ಹೆಚ್ಚು ಆಹಾರಧಾನ್ಯವನ್ನು ದಾಸ್ತಾನು ಮಾಡಿ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಬಡವರಿಗೆ ಆಹಾರ ಕೊಟ್ಟು, ನಾವು ಹೇಳಿದಂತೆ ನೀವು ಕೇಳಬೇಕೆಂದೂ: ನಾವು ಕೇಳಿದಾಗಲೆಲ್ಲಾ ನಮಗೆ ಓಟು ಕೊಡಿ ಎಂದೂ; ಅವರನ್ನು ಯಾವಾಗಲೂ ಗುಲಾಮರನ್ನಾಗಿ ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ ಎಂದು ಸೂಚನೆ ಕೊಡುತ್ತೇನೆ.

ಇನ್ನು ವಾಟರ್ ಸಪ್ಲೈ ವಿಚಾರದಲ್ಲಿ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮಾನ್ಯ ನಜೀರ್ ಸಾಬ್‌ರು ೬೭,೦೦೦ ಬಾವಿಗಳನ್ನು ತೆಗೆಸಿದ್ದೇವೆಂದು ಹೇಳಿದ್ದಾರೆ. ಬಾವಿಗಳನ್ನು ತೆಗೆಸಿರಬಹುದು; ಅವುಗಳಿಗೆ ಪಂಪು ಇಲ್ಲ; ಎಲೆಕ್ಟ್ರಿಸಿಟಿ ಇಲ್ಲ. ನೀರು ಹೊರಗೆ ಬರದೇ ಇದ್ದಮೇಲೆ ಬಾವಿಗಳು ಇದ್ದೂ ಏನು ಪ್ರಯೋಜನ ; ತೆರೆದ ಬಾವಿಗಳಿದ್ದರೆ ಒಂದು ಬೊಗಸೆ ನೀರಾದರೂ ಕುಡಿಯಬಹುದು, ಪಂಪುಗಳನ್ನು ಹಾಕಿಸಿ ಜನಗಳಿಗೆ ಅನುಕೂಲ ಮಾಡಿಕೊಡಬೇಕು : ಇಲ್ಲದಿದ್ದರೆ ಅವುಗಳನ್ನು ಮುಚ್ಚಿಸಬೇಕು, ಬೋರ್‌ವೆಲ್ ತೆಗಯುವವರಿಗೆ ದುಡ್ಡು ಕೊಡುವ ಸಲುವಾಗಿ ಇದೆಲ್ಲಾ ಮಾಡುತ್ತಿದ್ದೀರಿ ಎಂದು ಹೇಳುತ್ತೇನೆ. ಕೇಸಿಂಗ್ ಪೈಪುಗಳನ್ನು ಕೊಳ್ಳುವುದರಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಗೊತ್ತಾಗಿದೆ, ಇದರ ಬಗ್ಗೆ ಮಾನ್ಯ ಮಂತ್ರಿಯವರು ನಿಗಾ ಇಡಬೇಕೆಂದು ಸೂಚಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ........

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ನಾನು ಡಿಲ್ಡ್ ಆಗುವುದಿಲ್ಲ; ನಾನು ಮಾತನಾಡುವುದಕ್ಕೆ ತೊಂದರೆಯಾಗುತ್ತದೆ, ಕಂಟಿನ್ಯೂಟಿ ಹೋಗುತ್ತದೆ.

ಅಧ್ಯಕ್ಷರು.—ಯಾರೂ ಮಧ್ಯೆ ಮಾತನಾಡಬಾರದು.

ಶ್ರೀ ಡಿ.ಟಿ. ಜಯಕುಮಾರ್.—ಇದೇ ನಿಯಮವನ್ನು ನಾವು ಮಾತನಾಡುವಾಗಲೂ ಪಾಲಿಸಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನಗೆ ಕಂಟಿನ್ಯೂಟಿ ಹೋಗುತ್ತೆ ಎಂದು ನಿಮ್ಮನ್ನು ಕೇಳಿಕೊಂಡಿದ್ದಾರೆ, ಇವರು ಏತಕ್ಕೆ ಮಧ್ಯೆ ಮಾತನಾಡುತ್ತಾರೋ ಗೊತ್ತಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಈಗ ಆ ಕಡೆಯವರು ಮಾತನಾಡುವಾಗ ಈ ಕಡೆಯವರು ಮಾತನಾಡಬಾರದು. ಹಾಗೆಯೇ ಈ ಕಡೆಯವರು ಮಾತನಾಡುವಾಗ ಆ ಕಡೆಯವರು ಮಾತನಾಡಬಾರದು. ಎಲ್ಲಿಯಾದರೂ ಲೋಪದೋಷಗಳು ಬಂದರೆ ಅದನ್ನು ಎತ್ತಿ ತೋರಿಸಬೇಕು, ಸಲಹೆ ಸೂಚನೆ ಕೊಡಬೇಕು. ಅವರು ಮಾತನಾಡುವಾಗ ನೀವು ಸಹಕಾರ ಮಾಡಬೇಕು ಹಾಗೆಯೇ ನೀವು ಮಾತನಾಡುವಾಗ ಅವರು ಸಹಕಾರ ಮಾಡಬೇಕು. ಈಗ ಯಾರೂ ಇಂಟರ್‌ಫಿಯರ್ ಮಾಡಬೇಡಿ.

ಶ್ರೀ ಎಂ. ರಘುಪತಿ.—ಸಲಹೆ ಚೆನ್ನಾಗಿ ಇದೆ. ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಇಂಟರ್‌ಪ್‌ಷನ್ ಇರಲೇಬೇಕು.

ಅಧ್ಯಕ್ಷರು.—ಪಾರ್ಲಿಮೆಂಟರಿ ಪ್ರೊಸೀಜರ್‌ನಲ್ಲಿರುವುದು ನನಗೂ ಗೊತ್ತಿದೆ. ಒಳ್ಳೆಯ ವಿಚಾರ ಹೇಳುವಾಗ ಎಲ್ಲರೂ ಕೇಳಲೇಬೇಕಾಗುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪ್ರಕಾಶ್‌ರವರು ಮತ್ತು ರಾಮಯ್ಯನವರು ಮಾತನಾಡುವಾಗ ನಾನು ಮಧ್ಯೆ ಮಾತನಾಡಲಿಲ್ಲ. ನಾನು ಏನಾದರೂ ತಪ್ಪು ಮಾತನಾಡಿದ್ದು ಇದ್ದರೆ ಅವರು ಕೇಳಲಿ ನಾನು ಕರೆಕ್ಟ್ ಮಾಡಿಕೊಳ್ಳುತ್ತೇನೆ. ನಾನೇ ಬಹಳ ಬುದ್ಧಿವಂತೆ, ಸರ್ವಜ್ಞೆ ಎಂದು ತಿಳಿದುಕೊಂಡಿಲ್ಲ. ತಪ್ಪು ಮಾತನಾಡಿದ್ದು ಇದ್ದರೆ ನಾನು ಯಾವುದೇ ಸಂದರ್ಭದಲ್ಲೂ ಕರೆಕ್ಟ್ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈಗ ಅವರು ಹೇಳಿದ್ದನ್ನು ನೀವು ಕೇಳಬೇಕು, ನೀವು ಹೇಳಿದ್ದನ್ನು ಅವರು ಕೇಳಬೇಕು, ಮಧ್ಯೆ ಇಂಟರ್‌ಫಿಯರ್ ಮಾಡುವುದು ಬೇಡ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಇನ್ನು ಹೌಸಿಂಗ್ ವಿಚಾರದಲ್ಲಿ ಸೈಟುಗಳನ್ನು ಕೊಟ್ಟಿರುವುದನ್ನು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಈಗ ೧೪,೫೭,೩೪೩ ಕುಟುಂಬಗಳನ್ನು ನಿವೇಶನರಹಿತ ಕುಟುಂಬಗಳೆಂದು ಗುರುತಿಸಲಾಗಿದೆ, ಇವುಗಳ ಪೈಕಿ ೧೩,೨೯,೫೧೯ ಕುಟುಂಬಗಳಿಗೆ ನಿವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದರು. ಇವರ ಲೆಕ್ಕ ಹಾಕಿದರೆ ಇನ್ನು ೧,೨೭,೮೨೪ ಕುಟುಂಬಗಳು ಹಾಗೆಯೇ ಉಳಿಯುತ್ತವೆ. ಇವರು ನಿಜವಾಗಿಯೂ ಕೊಟ್ಟಿದ್ದಾರೆಯೇ ? ಅಂದರೆ ಕೊಟ್ಟಿಲ್ಲ ಏತಕ್ಕೆ ಅಂದರೆ, ಎಷ್ಟೋ ಅಕ್ವೈರ್ ಮಾಡಿಕೊಂಡಿರತಕ್ಕ ಲ್ಯಾಂಡ್ ಕೋರ್ಟಿನಲ್ಲಿರುವುದರಿಂದ, ಅವರಿಗೆ ಹಂಚಲಿಕ್ಕೆ ಆಗಿಲ್ಲ. ಇವರು ಅದನ್ನು ವೆಕೇಟ್ ಮಾಡಿಸಲಿಕ್ಕೆ ಪ್ರಯತ್ನಪಟ್ಟಿಲ್ಲ. ಆದ್ದರಿಂದ ಮನೆಗಳನ್ನು ಕಟ್ಟಲಿಕ್ಕೆ ಆಗಿಲ್ಲ. ಈಗ ಒಂದು ವರ್ಷಕ್ಕೆ ೫೦ ಸಾವಿರ ಮನೆಗಳನ್ನು ಪೂರ್ಣಗೊಳಿಸಲಾಗುತ್ತಿದೆ. ಅಂದರೆ ಇನ್ನು ಎಷ್ಟು ವರ್ಷಗಳಲ್ಲಿ ಇದು ಆಗುತ್ತದೆ. ಮನೆಗಳನ್ನು ಕಟ್ಟುವ ವ್ಯವಹಾರದಲ್ಲಿ ಎಷ್ಟೋ ಕುಟುಂಬಗಳು ತಯಾರಾಗುತ್ತಿವೆ. ಆದಷ್ಟು ಬೇಗ ತಾವು ಅವರಿಗೆ ಮನೆಗಳನ್ನು ಕಟ್ಟಿ ಕೊಟ್ಟರೆ ಈಗ ಇರುವ ಎಷ್ಟೋ ಕುಟುಂಬಗಳು ಚೆನ್ನಾಗಿ ಬೆಳೆಯುತ್ತವೆ. ಇನ್ನು ಸೈಟುಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಹೇಳಬೇಕೆಂದರೆ, ಈಗ ಸ್ಟೇ ಆಗಿರತಕ್ಕದ್ದು ಆದಷ್ಟು

ಬೇಗ ವೆಕೇಟ್ ಮಾಡಿಸಲಿಕ್ಕೆ ಪ್ರಯತ್ನ ಮಾಡಬೇಕು. ಇನ್ನು ಮನೆಗಳನ್ನು ಕಟ್ಟಿಸುತ್ತಿರುವ ವಿಚಾರ ಹೇಳಬೇಕೆಂದರೆ, ಐರನ್‌ರಾಡ್, ಆಸ್‌ಬೆಸ್ಟೋಸ್ ಷೀಟ್ ಹಾಕಿ ಕಟ್ಟಿಸುತ್ತಿದ್ದಾರೆ. ಮೊನ್ನೆ ಪ್ರಕಾಶ್‌ರವರು ಮಾತನಾಡುವಾಗ ಮೌಲ್ಡ್ ಮನೆಗಳನ್ನು ಮಾಡಿಕೊಡುತ್ತೇವೆಂದು ಹೇಳಿದರು, ಅದರ ಬದಲು ಹೆಚ್ಚು ಜನರಿಗೆ ಈ ಮನೆಗಳಿಂದಲೇ ಉಪಯೋಗವಾಗುತ್ತದೆ ಎಂದು ಸೂಚನೆ ಮಾಡುತ್ತೇನೆ.

ಇನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಬಗ್ಗೆ ಹೇಳುವುದಾದರೆ, ಈ ಪ್ರೋಗ್ರಾಮ್ ಒಳ್ಳೆಯದು ಇರುತ್ತದೆ. ಯಾವುದು ಒಳ್ಳೆಯದು ಇರುತ್ತದೋ ಅದನ್ನು ಒಳ್ಳೆಯದೆಂದು ಹೇಳಲೇ ಬೇಕಾಗುತ್ತದೆ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಪ್ರೋಗ್ರಾಮ್‌ನಲ್ಲಿ ವಾಟರ್ ಷೆಡ್ ಏರಿಯಾ, ಆರ್ಟಿಕಲ್ಚರ್ ಇದಕ್ಕೆಲ್ಲಾ ಮಾನ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ವಾಟರ್ ಷೆಡ್ ಏರಿಯಾದಲ್ಲಿ ರಿಸಲ್ಟ್ ಯಾವಾಗ ಬರುತ್ತದೆ ಎಂದರೆ ಇನ್ನು ಒಂದು ಒಂದೂವರೆ ವರ್ಷದಲ್ಲಿ ಬರುತ್ತದೆ. ಇದು ಇನ್ನೂ ಎಕ್ಸ್‌ಪರಿಮೆಂಟಲ್ ಪ್ರೋಸೆಸ್‌ನಲ್ಲಿಯೇ ಇದೆ. ಆರ್ಟಿಕಲ್ಚರ್ ಪ್ರೋಗ್ರಾಮ್ ತೆಗೆದುಕೊಂಡಿರುತ್ತೇವೆಂದು ಹೇಳಿದಿರಿ. ಇದರಲ್ಲಿ ಸ್ಪ್ರಿಂಕ್ಲರ್ಸ್ ಇರಿಗೇಷನ್‌ಗೆ ಸಬ್ ಸಿಡಿ ಸಹಾಯ ಮಾಡುವಂತೆ ಆರ್ಟಿಕಲ್ಚರ್ ವ್ಯವಸಾಯ. ರೇಷ್ಮೆ ಮತ್ತು ಹಣ್ಣು, ತೆಂಗು ಮತ್ತು ತೋಟಗಾರಿಕೆ ವ್ಯವಸಾಯಕ್ಕೂ ಸಹಾಯವನ್ನು ಕೊಟ್ಟರೆ ಬೇಕಾದಷ್ಟು ಅನುಕೂಲವಾಗುತ್ತದೆ ಆದ್ದರಿಂದ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್‌ನಲ್ಲಿ ಇವುಗಳನ್ನು ಕೂಡ ತೆಗೆದುಕೊಂಡು ಆದ್ಯತೆಯನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಎನ್.ಆರ್‌ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ ವಿಚಾರಗಳ ಬಗ್ಗೆ ಹೇಳಿದ್ದೀರಿ. ಇದನ್ನು ಹೇಳಿದರೆ ಸ್ವಲ್ಪ ತಮ್ಮ ಮನಸ್ಸಿಗೆ ಕಷ್ಟವಾಗಬಹುದು. ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ.ಗೆ ೫೦–೫೦ ಪರ್ಸೆಂಟ್ ಎಂದರೆ ಕೇಂದ್ರ ಸರ್ಕಾರದವರು ಅರ್ಧ ಹಣವನ್ನು ಕೊಟ್ಟರೆ ರಾಜ್ಯ ಸರ್ಕಾರದವರು ಅರ್ಧ ಹಣವನ್ನು ಕೊಡತಕ್ಕಂಥ ಒಂದು ಯೋಜನೆಯಾಗಿರುತ್ತದೆ. ಇದನ್ನು ನಮಗೆ ನಿಮಗೆ ಬೇಕಾದವರಿಗೆ ಕೆಲಸವನ್ನು ಕೊಟ್ಟು ಹಣವನ್ನು ಖರ್ಚು ಮಾಡತಕ್ಕಂಥದ್ದಲ್ಲ. ಈ ರೀತಿಯಾಗಿ ಇದರಲ್ಲಿ ಬಹಳ ಅನ್ಯಾಯದ ಕೆಲಸ ನಡೆಯುತ್ತಿದೆ. ಮೆಷರ್‌ಮೆಂಟ್ ಮಾಡುವುದು ಇವರು ನಮ್ಮವರು ಹಣವನ್ನು ಕೊಟ್ಟುಬಿಡಿ ಎಂದು ಮೇಲ್‌ನವರಿಂದ ಆದೇಶ ಬರತಕ್ಕಂಥದ್ದು ಇರುತ್ತದೆ. ಬಿ.ಡಿ.ಓ ಪಾಪ ಕೊಟ್ಟುಬಿಡುತ್ತಾರೆ. ಎಷ್ಟೋ ಸಲ ಹೇಳಿದ್ದೇನೆ ಅವರಿಗೆ ಆ ರೀತಿ ಮಾಡಬೇಡಿ ಎಂದು ನಿಮ್ಮ ಪಕ್ಷದ ರಾಮಯ್ಯನವರು ಹೇಳಿದರು. ನಮ್ಮ ಪಕ್ಷದ ಹಣ, ಯಾರಿಗೆ ಬೇಕಾದರೂ ಖರ್ಚು ಮಾಡಬಹುದೆಂದು ಯಾರಿಗೆ ಹಣವನ್ನು ಖರ್ಚು ಮಾಡಬೇಕು ಅವರಿಗೆ ಖರ್ಚುಮಾಡಿ. ಅದನ್ನು ಬಿಟ್ಟು ನಮ್ಮವರು ನಿಮ್ಮವರು ಇಬ್ಬರೂ ಸೇರಿಕೊಂಡು ಹಂಚಿಕೊಳ್ಳತಕ್ಕಂಥ ಹಣವಲ್ಲ. ಎನ್.ಆರ್.ಇ.ಪಿಗೆ ಮತ್ತು ಆರ್.ಎಲ್.ಇ.ಪಿ.ಗೆ ಬರತ್ಕಕ್ಕಂಥ ಹಣ ಕೇಂದ್ರ ಸರ್ಕಾರದ ಹಣ ಗರೀಬಿ ಹಠಾವೋ ಮಾಡುತ್ತೇವೆಂದು ಹೇಳಿ ಮಾಡಿಬಿಟ್ಟಿರೊ ಎಂದು ಪ್ರಶ್ನೆಯನ್ನು ಕೇಳಿದದರು. ಶ್ರೀಮತಿ ಇಂದಿರಾ ಗಾಂಧಿಯವರು ಗರೀಬಿ ಹಠಾವೋ ಚೂ ಮಂತ್ರ ಹಾಕಿಬಿಟ್ಟು ಮಾಡಿಬಿಡುತ್ತೇವೆಂದು ಎಂದೂ ಹೇಳಿರಲಿಲ್ಲ. ಯಾವ ಮಾರ್ಗದಲ್ಲಿ ಹೋಗಬೇಕೆಂದು ಹೇಳಿದ್ದರು ಬ್ಯಾಂಕ್‌ಗಳನ್ನು ನ್ಯಾಷನಲೈಸ್ ಮಾಡಿ ಆ ದಾರಿಯಲ್ಲಿ ಹೋಗಲಿಕ್ಕೆ ಪ್ರಯತ್ನ ಪಡುತ್ತೇವೆಂದು ಹೇಳಿದರೇ ಹೊರತು ಯಾವತ್ತೂ ಅವರು ಘರೀಬಿ ಹಠಾವೋ ಮಾಡಿಬಿಡುತ್ತೇವೆಂದು ಹೇಳಿ ಅವರೇನೂ ಶಾಸನವನ್ನು ಬರೆದುಕೊಟ್ಟಿರಲಿಲ್ಲ.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈವತ್ತು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ಗೆ ಒಳಪಟ್ಟಿರುತ್ತಾರೋ ಅಂಥವರಿಗೆ ನ್ಯಾಷನೆಲ್ ಸರ್ಟಿಫಿಕೇಟ್‌ನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅನೇಕರಿಗೆ ಇದುವರೆವಿಗೂ ಒಂದು ಪೈಸೆ ಕೂಡ ಸಿಕ್ಕಿಲ್ಲ. ಎಷ್ಟೋ ಜನರು ಒಂದೂ ಪೈಸೆಯನ್ನು ನೋಡದೆ ಸತ್ತುಹೋಗಿದ್ದಾರೆ. ನ್ಯಾಷನಲ್ ಸರ್ಟಿಫಿಕೇಟ್‌ಗಳನ್ನು ಕೊಡಬೇಕೆಂದು ಇದ್ದರೆ, ಎಷ್ಟು ಹಣವನ್ನು ಕೊಡುತ್ತೀರೋ ಅಷ್ಟನ್ನು ತೆಗೆದುಕೊಂಡು ನಮಗೆ ಬರತಕ್ಕಂಥದ್ದು ಇಷ್ಟೇ ಎಂದು ತಿಳಿದುಕೊಂಡು ನೆಮ್ಮದಿಯಿಂದ ಇರುತ್ತಾರೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಬಹಳಷ್ಟು ಸಂಬಂಧಪಟ್ಟ ಮಂತ್ರಿಗಳು ಇರತಕ್ಕಂಥದ್ದು ಸಂಪ್ರದಾಯವಿರುತ್ತದೆ. ಅದರಲ್ಲೂ ಮುಖ್ಯವಾಗಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗಿರುತ್ತದೆ. ಮಾನ್ಯ ವೀರಣ್ಣ

ಒಬ್ಬರನ್ನು ಬಿಟ್ಟರೆ ಯಾರೊಬ್ಬ ಮಂತ್ರಿಗಳೂ ಕೂಡ ಇಲ್ಲಿ ಹಾಜರಿಲ್ಲ. ಆಫೀಸರ್ ಗ್ಯಾಲರಿಯಲ್ಲಿ ಆಯಾ ಖಾತೆಗೆ ಸಂಬಂಧಪಟ್ಟ ಆಫೀಸರ್‌ಗಳೂ ಕೂಡ ಇಲ್ಲ. ವಿರೋಧ ಪಕ್ಷದ ನಾಯಕರಿಗೆ ಈವತ್ತಿನ ದಿವಸ ಯಾವ ರೀತಿ ಗೌರವವನ್ನು ಕೊಡಬೇಕೋ ಆ ರೀತಿ ಗೌರವವನ್ನು ಇವರು ಕೊಡುತ್ತಿಲ್ಲ. ಈ ರೀತಿ ನಡೆದುಕೊಳ್ಳುವುದು ಸದನಕ್ಕೆ ಗೌರವ ತರತಕ್ಕಂಥ ವಿಷಯವಲ್ಲ ನಾವು ಏತಕ್ಕಾದರೂ ಮಾತನಾಡ ಬೇಕು. ಯಾರು ನಾವು ಹೇಳಿದ್ದನ್ನು ಬರೆದುಕೊಳ್ಳುವುದು ಯಾರು ಉತ್ತರವನ್ನು ಕೊಡುವುದು ಗೌವರ್ನರ್ ಅಡ್ರೆಸ್‌ಗೆ ಉತ್ತರವನ್ನು ಕೊಡಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳೇ ಕೊಡಬೇಕಾಗಿ ರುತ್ತದೆ.

ಅಧ್ಯಕ್ಷರು.—ಮಾನ್ಯ ಸಚಿವರು ಇಲ್ಲೇ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಎಲ್ಲಿದ್ದಾರೆ ಎಲ್ಲಿದ್ದಾರೆ ಅಲ್ಲಿಗೆ ನಾವೇ ಹುಡುಕಿಕೊಂಡು ಹೋಗಬೇಕೆ ? ಈ ಸದನದಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡಬೇಕಾದರೆ ನಾನು ೧೪ ವರ್ಷ ಗಳಿಂದ ಸದನದ ಸದಸ್ಯನಾಗಿ ನೋಡುತ್ತಿದ್ದೇನೆ, ಶ್ರೀ ದೇವೇಗೌಡರು, ಮಾನ್ಯ ಲಕ್ಷ್ಮೀಸಾಗರ್‌ರವರು, ಮಾನ್ಯ ಎಸ್.ಆರ್. ಬೊಮ್ಮಾಯಿಯವರು ವಿರೋಧಪಕ್ಷದಲ್ಲಿದ್ದಾಗ ನಾವೆಲ್ಲರೂ ನಮ್ಮ ಸ್ಥಾನದಲ್ಲಿ ಯಾವಾಗಲೂ ಕುಳಿತುಕೊಂಡಿರುತ್ತಿದ್ದೆವು, ನಮ್ಮ ಖಾತೆಗೆ ಸಂಬಂಧಪಟ್ಟ ಹಾಗೆ ಏನು ಹೇಳುತ್ತಾರೋ ಎಂದು ಕೇಳುವುದಕ್ಕೆ ಇರುತಿದ್ದೆವು. ಒಬ್ಬರು ಮಂತ್ರಿಗಳೂ ಎಲ್ಲಿಗೂ ಎದ್ದು ಹೋಗುತ್ತಿರಲಿಲ್ಲ. ಈಗ ನೋಡಿದರೆ ಆಫೀಸರ್‌ಗಳೂ ಇಲ್ಲ, ಮಂತ್ರಿಗಳೂ ಇಲ್ಲವೆಂದರೆ You are insulting this House.

(Opposition Members shouted SHAME, SHAME)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇವತ್ತಿನ ದಿವಸ ಮಂತ್ರಿಗಳು ಇಲ್ಲವೆಂದು ನೀವು ನಮಗೆ ಇನ್‌ಸಲ್ಟ್ ಮಾಡಿದ ಹಾಗೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಸರ್ಕಾರ ಇಲ್ಲವೆಂದು ಭಾವನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ರೀತಿ ಸಮಾಧಾನಪಡುವುದು ಬೇಡ. ಅವರು ಉತ್ತರಿಸುವಾಗ ಯಾವಾಗಲೂ ವಿರೋಧ ಪಕ್ಷದ ನಾಯಕರು ಇದ್ದೇ ಇರುತ್ತಿದ್ದರು. ಹಿಂದೆ ಕಾಂಗ್ರೆಸ್ ಪಕ್ಷದವರು ಅಧಿಕಾರದಲ್ಲಿದ್ದಾಗ ಇದೇ ರೀತಿ ಮಾಡುತ್ತಿದ್ದರೆ ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಅವರದ್ದೂ ಕರ್ತವ್ಯ ಇದೆ.

SHRI. M. MALLIKARJUNA KHARGE.—There is no Government and no resposible people here to take note of our discussion.

ಶ್ರೀ ರಾಜವರ್ಧನ್.—ಮುಖ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಬಹಳ ಮುಖ್ಯವಾದ ಸ್ಟೇಟ್ ಮೆಂಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ನೀವು ಮಂತ್ರಿಗಳಾಗಿ ನೋಡಿದ್ದೀರಿ. ಇಲ್ಲಿ ಏನು ರೆಕಾರ್ಡ್ ಆಗುತ್ತಿದೆ ಅದನ್ನು ತರಿಸಿಕೊಳ್ಳುತ್ತಾರೆ ಉತ್ತರ ಕೊಡುವ ಮುನ್ನ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಗಾದರೆ ನಾವು ಯಾರೂ ಇಲ್ಲಿರುವುದು ಬೇಕಾಗಿಲ್ಲ. ಟೇಪ್ ಮಾಡಿ ಕೊಡಿ, ಅವರು ಉತ್ತರಿಸಲಿ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಉತ್ತರಿಸುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ನೀವು ಟೇಪ್ ರೆಕಾರ್ಡ್ ಮಾಡಿಕೊಳ್ಳಿ. ಮತ್ತೆ ಅವರು ಹೇಳಿದ್ದನ್ನು ರೆಕಾರ್ಡ್ ಮಾಡಿ ನಮಗೆ ಕೊಡಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಪ್ರಕಾಶ್‌ರರು, ರಾಮಯ್ಯನವರು ಮಾತನಾಡಿದಾಗ ನಾವು ಶ್ರದ್ಧೆಯಿಂದ ಕೇಳಿದೆವು. ನಮಗೆ ಎಷ್ಟೇ ಕೆಲಸಗಳಿದ್ದರೂ ಅವರು ಮಾತನಾಡಿದಾಗ ಕೇಳುವುದು ನಮ್ಮ ಧರ್ಮವಾಗಿತ್ತು ಈಗ ವಿರೋಧ ಪಕ್ಷದ ನಾಯಕರು ಮತ್ತಿತರರು ಮಾತನಾಡ ಬೇಕಾದರೆ ಅದೇ ಶ್ರದ್ಧೆಯನ್ನು ತೋರಿಬೇಕಾದುದು ಅವರ ಕರ್ತವ್ಯ. You have to pull up the Government to safeguard the interests of the House. You are the custodian of the interests of the House and duty rests on your Office to pull up the Government proprely.

ಅಧ್ಯಕ್ಷರು.—ತಾವು ಕೂರಿ.

ಶ್ರೀ ಎಸ್. ಜಿ. ನಂಜಯ್ಯನ ಮಠ.—ರೆಕಾರ್ಡ್ ತರಿಸಿಕೊಂಡು ನೋಡುವುದಾದರೆ ನಾವು ಏಕೆ ಇಲ್ಲಿ ಕುಳಿತಿರಬೇಕು. ಸದಸ್ಯರಿಗೆ ಏಕೆ ದಿನಕ್ಕೆ ೫೦ ರೂಪಾಯಿ ಭತ್ಯೆ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಅವರಿಗೆ ಹೇಳದೆ ಹೋದರೆ ಕಷ್ಟವಾಗುತ್ತದೆ. ಈ ಸದನವನ್ನು ಬಹಳ ಲಘುವಾಗಿ ತೆಗೆದುಕೊಂಡಿದ್ದಾರೆ. ಐದು ನಿಮಿಷಕ್ಕಿಂತ ಜಾಸ್ತಿ ಮುಖ್ಯ ಮಂತ್ರಿಗಳಾಗಲಿ, ಯಾವ ಮಂತ್ರಿಗಳಾಗಲಿ ಇಲ್ಲಿ ಕೂರುವುದಿಲ್ಲ. ಜನರ ಪರವಾಗಿ ಅವರ ಗೋಳನ್ನು ಹೇಳುವುದಕ್ಕೆ ಅವರ ಸಮಸ್ಯೆಗಳು ಬಗೆಹರಿಯಬೇಕೆಂದು ನಾವು ಬರುತ್ತೇವೆ, ಇಲ್ಲಿ ಅದನ್ನು ಕೇಳುವ ವರೂ ಇಲ್ಲ, ಉತ್ತರ ಕೊಡುವವರೂ ಇಲ್ಲವೆಂದರೆ ನಾವು ಏಕೆ ಬರಬೇಕು. ನೀವು ಹೇಳಿದ ಹಾಗೆ ರೆಕಾರ್ಡ್ ನೋಡಿ ಉತ್ತರಿಸುತ್ತಾರೆಂದರೆ......

ಅಧ್ಯಕ್ಷರು.—ನಿಮ್ಮ ನಮ್ಮ ಕಾಲದಿಂದ ಬಂದ ಸಂಪ್ರದಾಯವನ್ನು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಕಾಲದಲ್ಲಿ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಈ ತರಹ ಯಾವಾಗಲೂ ನಡೆದುಕೊಂಡು ಬಂದಿಲ್ಲ.

ಅಧ್ಯಕ್ಷರು.—ಮಂತ್ರಿಗಳಿಗೆ ಹೇಳಿ ಕಳುಹಿಸಿದ್ದೇನೆ, ಬರುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸದನದ ಪರಂಪರೆ ಏನಿದೆ ಎಂಬುದು ತಮಗೆ ಗೊತ್ತಿದೆ. ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅದನ್ನು ಬರೆದುಕೊಳ್ಳುತ್ತಾರೆ, ತರಿಸಿಕೊಳ್ಳುತ್ತಾರೆ, ನೋಡುತ್ತಾರೆಂದರೆ. ಈ ರೀತಿ ತಾವು ಹೇಳಬಾರದು.

ಅಧ್ಯಕ್ಷರು.—ಸಂಪ್ರದಾಯವನ್ನು ಹೇಳಿದೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಏನು ಹೇಳಿದರೂ ನಡೆದುಕೊಂಡು ಹೋಗುತ್ತದೆಂಬ ಭಾವನೆ ಸರ್ಕಾರಕ್ಕೆ ಇದ್ದರೆ ಅದು ತಪ್ಪು. ಅವರು ಏನು ಹೇಳುತ್ತಾರೆ ಹೇಳಲಿ, ಆಮೇಲೆ ನಾವು ನೋಡುತ್ತೇವೆಂದರೆ ಅದಕ್ಕೆ ಪಾಟೀಲರ ಒಂದು ಗಾದೆ ಇದೆ. ಆ ತರಹ ಆಗುತ್ತದೆ ಸರ್ಕಾರಕ್ಕೆ ತಾವು ಛೀಮಾರಿ ಹಾಕಬೇಕು. ಅಧಿಕಾರಿಗಳು ಕೂಡ ಯಾರೂ ಇಲ್ಲ. ಈ ರೀತಿ ಉದಾಸೀನ ಭಾವನೆಯನ್ನು ಯಾವುದೇ ಸರ್ಕಾರ ೧೫–೨೦ ವರ್ಷದಿಂದ ಇದುವರೆಗೆ ತಾಳಿದ್ದನ್ನು ನೋಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರಾಮಯ್ಯನವರು, ಪ್ರಕಾಶ್‌ರವರು ಮಾತನಾಡುವಾಗ ಒಬ್ಬರಾದರೂ ಇರಬೇಕೆಂದು ಇದ್ದು ಅಟೆಂಟೀವ್ ಆಗಿ ಕೇಳಿದ್ದೇವೆ. ಅನೇಕ ಸದಸ್ಯರು ಕೇಳಿದ್ದಾರೆ. ಇವತ್ತಿನ ದಿವಸ ಒಬ್ಬ ಮಂತ್ರಿಗಳೂ ಇಲ್ಲವಲ್ಲ. ರೂರಲ್ ಡೆವಲಪ್‌ಮೆಂಟ್, ಹೋಂ, ಸೋಷಿಯಲ್ ವೆಲ್‌ಫೇರ್, ಎಜುಕೇಷನ್ ಹೀಗೆ ಎಲ್ಲಾ ಇಲಾಖೆಗಳ ಮೇಲೆ ಮಾತನಾಡುತ್ತಿದ್ದಾರೆ. ಅದನ್ನು ಸರಿಯಾಗಿ ಬರೆದುಕೊಂಡು ಅಥವಾ ಕೇಳಿಕೊಂಡು ಉತ್ತರ ಕೊಡಬೇಕಾಗುತ್ತದೆ. ಅದನ್ನು ಬಿಟ್ಟು ಅವರು ಏನು ಹೇಳುತ್ತಾರೆ ಅದನ್ನು ಬರೆದುಕೊಂಡಿರುತ್ತಾರೆ ಆಮೇಲೆ ಉತ್ತರಿಸೋಣ ಎಂದರೆ, ಇಷ್ಟು ಲಘುವಾಗಿ ಟ್ರೀಟ್ ಮಾಡಿದರೆ ಸದನಕ್ಕೆ ಅಗೌರವ ತೋರಿಸುತ್ತಿದ್ದಾರೆಂದು ಹೇಳಬೇಕಾಗುತ್ತದೆ.

೨–೩೦ ಪಿ. ಎಂ.

ಶ್ರೀ ರಾಜವರ್ಧನ್.—ಮುಖ್ಯಮಂತ್ರಿಗಳು ಕೌನ್ಸಿಲ್‌ನಲ್ಲಿ ಬಹಳ ಮುಖ್ಯವಾದ ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ.

ಶ್ರೀ ಡಿ. ಎ. ಚಿನ್ನಪ್ಪ.—೧೭ ಜನ ಮಂತ್ರಿಗಳಲ್ಲಿ ಇಬ್ಬರೇ ಇದ್ದಾರೆ.

ಅಧ್ಯಕ್ಷರು.—ಕೂಡ್ರಿ. ನಿಮ್ಮ ಲೀಡರ್ ಮಾತನಾಡಲಿಕ್ಕೆ ಹತ್ತಿದ್ದಾರೆ.

ಶ್ರೀ ಪಟವಂಕ್ಕಿ ರತ್ನಾಕರ್.—ಏಕೆ ಮಾತನಾಡಬೇಕು ಎಂದು ಹೇಳುವುದಕ್ಕೆ ಚರ್ಚೆ ಮಾಡುತ್ತಿರುವುದು ಗಂಭೀರವಾದ ವಿಚಾರ. ಕುಳಿತುಕೊಳ್ಳುವ ವಿಚಾರ ಅಲ್ಲ.

ಅಧ್ಯಕ್ಷರು.—ನಿಮ್ಮ ನಾಯಕರು ಮಾತನಾಡಲಿಕ್ಕೆ ಹತ್ತಿದ್ದಾರೆ. ನೀವೂ ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಅವರೆಲ್ಲಾ ಹೇಳಿದ್ದು ತಪ್ಪು ಎಂದು ಹೇಳುವುದಿಲ್ಲ. ಆದರೆ ನಾನು ಏತಕ್ಕೆ ಎದ್ದು ಭಾಷಣ ಮುಂದುವರೆಸುತ್ತಿದ್ದೇನೆ ಎಂದರೆ ನಮ್ಮ ಪಾರ್ಟಿಯವರಿಗೆಲ್ಲ ಮಾತನಾಡುವುದಕ್ಕೆ ನೀವು ಟೈಂ ಕೊಡುವುದಿಲ್ಲವಲ್ಲ, ಅದಕ್ಕೆ ಬೇಗ ಮುಗಿಸೋಣ ಎಂದು ನಿಂತಿದ್ದೇನೆ. ಮಾನ್ಯ ಅಧ್ಯಕ್ಷರೆ, ರಾಮಯ್ಯನವರು ಫ್ಯಾಮಿಲಿ ಪ್ಲಾನಿಂಗ್ ವಿಚಾರ ಮಾತನಾಡುವಾಗ ಬಹಳ ಸಂತೋಷವಾಗಿ ಬಹಳ ದೊಡ್ಡ ಕೆಲಸ ಮಾಡಿದ್ದೇವೆಂದು ತಿಮ್ಮೇಗೌಡರನ್ನು ಜ್ಞಾಪಿಸಿಕೊಂಡು ಒಂದು ಕೋಟಿ ರೂಪಾಯಿ ಪ್ರೈಜ್ ಬಂದಿದೆ ಎಂದು ಹೇಳಿದರು. ಏನು ಶಹಬಾಸ್‌ಗಿರಿ ಕೊಟ್ಟರು. ಒಂದು ಕೋಟಿ ರೂಪಾಯಿ ಪ್ರೈಜ್ ಬಂದಿರುವುದು ನಿಜ. ಆದರೆ ಈ ಹೆಣ್ಣು ಮಕ್ಕಳೇ ಎಷ್ಟು ದಿವಸ ಗೋಳಾಡಬೇಕು ? ಅವರನ್ನೇ ಎಷ್ಟು ದಿವಸ ಗೋಳಿಡಿಸಬೇಕು ? ಅವರ ಪ್ರಾಣದ ಮೇಲೆ ನಿಮಗೆ ಅಕ್ಕರೆ ಇದೆಯೋ ? ಹೆಣ್ಣು ಮಕ್ಕಳ ಪ್ರಾಣದ ಮೇಲೆ ಸ್ವಲ್ಪವಾದರೂ ಅಕ್ಕರೆ, ಕಳಕಳಿ ಇದಯೆ ನಿಮಗೆ ? ಏತಕ್ಕೆ ಹೆಣ್ಣು ಮಕ್ಕಳಿಗೇ ಟೂಬೆಕ್ಟಮಿ ಆಪರೇಷನ್ ಮಾಡಿಸಬೇಕು ? ಅವರೇ ಏತಕ್ಕೆ ಮಾಡಿಸಿಕೊಳ್ಳಬೇಕು ? ಇದು ನಗುವ ವಿಚಾರವೂ ಅಲ್ಲ, ಹಾಸ್ಯದ ವಿಚಾರವೂ ಅಲ್ಲ. ನಾನು ಖಡಾಖಂಡಿತವಾಗಿ ಈ ಪ್ರಶ್ನೆ ಕೇಳುತ್ತಿದ್ದೇನೆ. ಬರೀ ಹೆಣ್ಣು ಮಕ್ಕಳೇ ಏತಕ್ಕೆ ಮಾಡಿಸಿಕೊಳ್ಳಬೇಕು ? ಅದು ಸೀರಿಯಸ್, ಮೇಜರ್ ಆಪರೇಷನ್. ಗಾಣಗಿತ್ತಿ ಅಯ್ಯೋ ಎಂದರೆ ಮಗುವಿನ ನೆತ್ತಿ ತಣ್ಣಗಾಗುವುದಿಲ್ಲ. ಹೆಣ್ಣುಮಕ್ಕಳಿಗೆ ಹೆಚ್ಚು ಅಪರೇಷನ್ ಮಾಡಿಸಿದರು ಒಂದು ದೊಡ್ಡ ಪ್ರೈಜ್ ಬಂತಂತೆ. ಮೊನ್ನೆ ಹಾಸನದಲ್ಲಿ ನಡೆದ ಘಟನೆ. ಕೇರ್‌ಲೆಸ್ ಡಾಕ್ಟರುಗಳನ್ನು ಕಳುಹಿಸಿಬಿಡುತ್ತೀರಿ. ಎರಡೆರಡು ದಿನ ಟ್ರೈನಿಂಗ್ ಕೊಟ್ಟು ಕಳುಹಿಸುತ್ತೀರಲ್ಲ ಹಾಸನ ಕ್ಯಾಂಪ್‌ನಲ್ಲಿ ಏನಾಯಿತು ಗೊತ್ತಾ ? ಇಬ್ಬರು ೧೦-೨೨ ವರ್ಷದ ಹೆಣ್ಣುಮಕ್ಕಳು ಅಲ್ಲಿಗೆ ಹೋಗಿದ್ದರು. ಅವರಿಗೆ ಕಾಂಪೋಸ್ ಇಂಜೆಕ್ಷನ್ ಕೊಟ್ಟು, ಬೀಡಿ, ಚುಟ್ಟ ಸೇದುವುದಕ್ಕೆ ಹೋದರು. ಬಂದಾಗ ಮತ್ತೆ ಜ್ಞಾನ ಬಂದಿತ್ತು. ತಿರುಗಿ ಇನ್ನೊಂದು ಇಂಜೆಕ್ಷನ್ ಕೊಟ್ಟು ಹೋದರು. ಬೇಗ ಆಪರೇಷನ್ ಮಾಡುವುದಕ್ಕಾಗಲಿಲ್ಲ. ಮತ್ತೆ ಇಂಜೆಕ್ಷನ್ ಕೊಟ್ಟರು. ಕಲ್ಲುಗುಂಡಾಗಿ ನಡೆದುಕೊಂಡು ಹೋದವರು ಹೊರಗಡೆ ಹೆಣವಾಗಿ ಬಂದರು. ಎಂಥ ಪ್ರೈಜ್ ಬಂತು ನಿಮಗೆ ? ಎಷ್ಟು ದಿವಸ ಹೀಗೆ ಗೋಳಾಡಿಸಬೇಕು ಹೆಣ್ಣುಮಕ್ಕಳನ್ನು.

ಶ್ರೀ ವೈ. ಕೆ. ರಾಮಯ್ಯ.—ನಾನು ಇಂಟರಪ್ಟ್ ಮಾಡುತ್ತಿಲ್ಲ. ನಾನು ಮಾತನಾಡುವಾಗ ಗಂಭೀರವಾಗಿ ಮಾತನಾಡಿದ್ದೇನೆ. ಅವರು ವ್ಯಂಗ್ಯವಾಗಿ ಉತ್ತರವನ್ನು ನಿರೀಕ್ಷಣೆ ಮಾಡುವುದಾದರೆ ವ್ಯಂಗವಾಗಿಯೇ ಉತ್ತರ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೊಟ್ಟೆ ಉರಿಯುತ್ತಿದೆ. ಎಷ್ಟು ದಿವಸ ಹೆಣ್ಣು ಮಕ್ಕಳನ್ನು ಆಪರೇಷನ್‌ಗೆ ತಳ್ಳುವುದು ? ವ್ಯಾಸೆಕ್ಟಮಿ ಬಹಳ ಸಿಂಪ್ಲೆಸ್ಟ್ ಆಪರೇಷನ್.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೆ.........

ಶ್ರೀ ವೈ. ಕೆ. ರಾಮಯ್ಯ.—ಹೊರಗಡೆ ನನ್ನ ಅಭಿಪ್ರಾಯ ಏನು ಎಂದು ನಾಗರತ್ನಮ್ಮನವರಿಗೆ ಗೊತ್ತಿದ್ದರೆ ಈ ರೀತಿ ಹೇಳುತ್ತಿರಲಿಲ್ಲ. ಹೆಣ್ಣುಮಕ್ಕಳಿಗೇ ಏತಕ್ಕೆ ಆಪರೇಷನ್ ಮಾಡಿಸಬೇಕು ಎಂದು ಸಾವಿರ ಸಾರಿ ಹೇಳಿದ್ದೇನೆ. ನನ್ನ ಕ್ಷೇತ್ರದಿಂದ ಬೇಕಾದರೆ ವರದಿ ತರಿಸಿಕೊಳ್ಳಲಿ. ಅಲ್ಲಿ ಆಪರೇಷನ್ ಆಗಿರುವವರ ಅಂಕಿಸಂಖ್ಯೆಯಲ್ಲಿ ಹೆಂಗಸರು ಮತ್ತು ಗಂಡಸರು ಇಬ್ಬರದ್ದೂ ಇದೆ. ಗಂಡಸರಿಗೆ ಆಪರೇಷನ್ ಮಾಡಿಸುವುದು ಸುಲಭ, ಆದ್ದರಿಂದ ಗಂಡಸರೂ ಮಾಡಿಸಿಕೊಳ್ಳಬೇಕು ಎಂದು ನಾನು ಭಾಷಣಗಳಲ್ಲಿ ಹೇಳಿದ್ದೇನೆ. ಶ್ರೀಮತಿ ನಾಗರತ್ನಮ್ಮನವರ ಅಭಿಪ್ರಾಯವನ್ನೇ ನಾನೂ ಹೊಂದಿದ್ದೇನೆ. ಆದ್ದರಿಂದ ನನ್ನ ಹೆಸರು ಹೇಳುವುದು ಬೇಡ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರದ ನೀತಿ ಟ್ಯೂಬೆಕ್ಟಮಿಗಿಂತ ವ್ಯಾಸೆಕ್ಟಮಿ ಮಾಡಿಸಬೇಕೆಂಬುದೇ ಆಗಿದೆ. ಆದ್ದರಿಂದಲೇ ೫೦ ರೂಪಾಯಿ ಹೆಚ್ಚಿಗೆ ಗಂಡಸರಿಗೆ ಕೊಡುತ್ತೇವೆ. ಹಾಗಿದ್ದರೂ ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳಿಗೇ ಮಾಡಿಸುತ್ತಿದ್ದಾರೆ ರಾಮಯ್ಯನವರು ತುಮಕೂರು ಜಿಲ್ಲಾ ಮಂತ್ರಿಗಳಾಗಿದ್ದಾಗ ಒಂದು ಕ್ಯಾಂಪಿನಲ್ಲಿ ಹೋಗಿದ್ದಾಗ ಗಂಡಸರು ೧೫೦ ಜನ ಇದ್ದರೆ ಹೆಂಗಸರು ೫೦ ಜನ ಆಪರೇಷನ್ ಮಾಡಿಸಿಕೊಂಡಿದ್ದರು. ಕೆಲವು ಕಡೆ ಆ ರೀತಿ ಆಗಿದೆ. ಟ್ಯೂಬೆಕ್ಟಮಿ ಮೇಜರ್ ಆಪರೇಷನ್ ಮಾಡಿಸಿಕೊಂಡಿದ್ದರು. ಟ್ಯೂಬೆಕ್ಟಮಿ ಮೇಜರ್ ಆಪರೇಷನ್. ಇದನ್ನು ಹೆಚ್ಚಾಗಿ ನಮ್ಮಲ್ಲೇ ಮಾಡುವಂತಹ ಆಪರೇಷನ್. ಲ್ಯಾಪ್ರೋಸ್ಕೋಪ್ ೫ ನಿಮಿಷದಲ್ಲಿ ಮಾಡುತ್ತಾರೆ. ಅದರಲ್ಲಿ ಹೆಚ್ಚು ರಿಸ್ಕ್ ಇರುವುದಿಲ್ಲ. ಆದರೂ ಹೆಚ್ಚಾಗಿ ಇದನ್ನೇ ಮಾಡುತ್ತಿದ್ದಾರೆ. ಅವರ ಅಭಿಪ್ರಾಯವನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಗಂಡಸರು ಮಾಡಿಸಿಕೊಳ್ಳುವುದೇ ಒಳ್ಳೆಯದು. ಆದಕ್ಕಾಗಿ ನಾನು ನನ್ನ ಹೆಂಡತಿಯನ್ನು ಮಾಡಿಸದೆ ನಾನೇ ಮಾಡಿಸಿ ಕೊಂಡಿದ್ದೇನೆ. ಕೇಂದ್ರ ಸರ್ಕಾರದವರು ಇದಕ್ಕೋಸ್ಕರ ಗಂಡಸರು ಮಾಡಿಸಿಕೊಂಡರೆ ಹೆಂಗರಿಗಿಂತ ೫೦ ರೂ. ಗಳನ್ನು ಹೆಚ್ಚಿಗೆ ಕೊಡುತ್ತಾರೆ. ನಮ್ಮ ಸರ್ಕಾರದ ನೀತಿ ಕೂಡ ಅದೆ. ಆದರೆ ಸಮಾಜದಲ್ಲಿ ಆ ನೀತಿ ಇನ್ನೂ ಜಾರಿಗೆ ಬಂದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಪುರುಷ ಪ್ರಧಾನ ವಾದ ಈ ದೇಶದಲ್ಲಿ ಇವತ್ತಿನ ಗಂಡಸರಿಗಿಂತ ಹೆಂಗಸರೇ ಈ ಆಪರೇಷನ್‌ನನ್ನು ಮಾಡಿಸಿಕೊಳ್ಳಬೇಕೆಂದು ಹೇಳಿ ಅವರನ್ನೇ ಹೆಚ್ಚಾಗಿ ಆಪರೇಷ್ ಮಾಡಿಸುತ್ತಿದ್ದಾರೆ. ಇದು ಶ್ರೀಮತಿ ನಾಗರತ್ನಮ್ಮನವರಿಗೆ ಗೊತ್ತಿದೆ ಎಂಬುದಾಗಿ ನಾನು ಭಾವಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದನ್ನು ಹಾಸ್ಯ ಮಾಡಬೇಕು ಅಂತ ಹೇಳುತ್ತಿಲ್ಲ. ಹಾಸ್ಯಮಾಡಬೇಕಾದ ವಿಚಾರವೂ ಇದಲ್ಲ. ನಿಜವಾಗಿಯೂ ಹೆಚ್ಚಾಗಿ ಗಂಡಸರು ಆಪರೇಷನ್ ಅನ್ನು ಮಾಡಿಸಿಕೊಳ್ಳುವುದು ಒಳ್ಳೆಯದು. ಹೆಣ್ಣುಮಕ್ಕಳಿಗೆ ಲ್ಯಾಪ್ರೋಸ್ಕೋಪ್ ನಡೆಯುತ್ತಿಲ್ಲ. ಅದಕ್ಕೆ ಸಾಕಷ್ಟು ತರಬೇತಿ ಸಿಕ್ಕುತ್ತಿಲ್ಲ. ಈ ರೀತಿ ಹೆಂಗಸರು ಆಪರೇಷನ್ ಮಾಡಿಸಿಕೊಂಡಂತಹವರು ನಮಗೆ ಪೆನ್ಷನ್ ಕೊಡಿಸಿಕೊಡಿ ಎಂಬುದಾಗಿ ಕೇಳುತ್ತಿದ್ದಾರೆ. ಅದು ಬೇರೆ ನಡೆಯುತ್ತಿದೆ. ಟ್ಯೂಬೆಕ್ಟಮಿ ಆಪರೇಷನ್ ಮಾಡಿಸಿಕೊಂಡ ಹೆಣ್ಣುಮಕ್ಕಳು ಒಂದು ರೀತಿಯಲ್ಲಿ ಸೈಕಾಲಜಿಕಲ್ ಆಗಿ ಸೊಂಟ ನೋವು, ನೀರನ್ನು ತರುವುದಕ್ಕಾಗುವುದಿಲ್ಲ, ನಮಗೆ ಪೆನ್ಷನ್ ಕೊಡಿಸಿಕೊಡಿ ಎಂಬುದಾಗಿ ಹೇಳುತ್ತಿದ್ದಾರೆ. ಇದೊಂದು ರೀತಿಯಲ್ಲಿ ಶೋಷಣೆ ಪ್ರಾರಂಭವಾಗುತ್ತಿದೆ. ಹೋಗು ಫೋಟೋ ತೆಗೆದುಕೊಂಡು ಬಾ, ಅಪ್ಲಿಕೇಷನ್ ಬರೆದುಕೊಡುತ್ತೇನೆ, ಇದಕ್ಕೆಲ್ಲಾ ೨೫ ರೂಪಾಯಿಗಳಾಗುತ್ತವೆ ಎಂಬುದಾಗಿ ತಿನೆಯುವರು ತಿನ್ನುವುದಕ್ಕೆ ಅವಕಾಶವಾಗುತ್ತಿದೆ. ಆದ್ದರಿಂದ ಇದೆನ್ನೆಲ್ಲಾ ನೋಡಿದ ಮೇಲೆ ಗಂಡಸರೇ ಮಾಡಿಸಿಕೊಳ್ಳಲಿ. ಅವರು ಯಾರಿಗೂ ಗೊತ್ತಾಗದ ಹಾಗೆ ಮಾಡಿಸಿಕೊಳ್ಳಲಿ. ಹೆಂಗಸರಿಗೆ ಆಪರೇಷನ್ ಮಾಡಿಸುವುದನ್ನು ದಯಮಾಡಿ ಬಿಟ್ಟುಬಿಡಿ. ಕುಟುಂಬ ಯೋಜನೆಯ ಬಗ್ಗೆ ಅಂಕಿ ಅಂಶಗಳನ್ನು ಏನು ಕೊಟ್ಟಿದ್ದಾರೆ ಅದು ಬರೀ ತಪ್ಪು ತಪ್ಪು ಅಂಕಿ ಅಂಶಗಳನ್ನು ಕೊಟ್ಟು ಬಹಳ ದೊಡ್ಡ ಕೆಲಸ ಮಾಡಿದ್ದಾರೆ, ಎಂಬುದಾಗಿ ಕೇಂದ್ರ ಸರ್ಕಾರದವರು ತಿಳಿದುಕೊಂಡು ನಿಮಗೆ ಪ್ರೈಜ್ ಕೊಟ್ಟಿದ್ದಾರೆ. ಹೆಣ್ಣುಮಕ್ಕಳಿಗೆ ಈ ರೀತಿಯ ತೊಂದರೆ ಬೇಡ ಎಂಬುದು ನನ್ನ ಅಭಿಪ್ರಾಯ. ಇದನ್ನು ತಾವೂ ಒಪ್ಪಿಕೊಳ್ಳುತ್ತೀರೆಂದು ನನ್ನ ಆಸೆ.

ಔಷದಿಗಳ ವಿಚಾರದಲ್ಲಿ ಹೇಳಿದ್ದಾರೆ. ಎಷ್ಟು ತಪ್ಪು ತಪ್ಪು ಔಷದಿಗಳನ್ನು ತರುವುದಕ್ಕೆ ಸಹಾಯ ಮಾಡುತ್ತಿದ್ದಾರೆ ಮೇಲಿನವರು. ಎಲ್ಲಿ ನೋಡಿದರೂ ಬ್ಯಾಂಡೇಜ್ ಬಟ್ಟೆ ಇಲ್ಲ. ಆಯಿಂಟ್‌ಮೆಂಟ್ ಇಲ್ಲ. ಸ್ಪಿರಿಟ್ ಇಲ್ಲ. ಟಿಂಚರ್ ಕೂಡ ಇಲ್ಲ. ವರ್ಷಕ್ಕೆ ಔಷದಿಗಳನ್ನು ತೆಗೆದುಕೊಳ್ಳುವುದಕ್ಕೆ ಕೊಡುತ್ತಾರೆ ಆ ಹಣವನ್ನು ಸಂಬಂಧಪಟ್ಟವರಿಗೇ ಮೇಲಿನವರು ಕೊಡುವುದೇ ಇಲ್ಲ. ಸ್ಥಳೀಯವಾಗಿ ಬೇಕಾಗಿರುವಂತಹ ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ಮೇಲಿನವರು ಬಿಡುವುದೇ ಇಲ್ಲ. ಅವರಿಗೆ ಬೇಕಾದ ಔಷಧಿಯಾಗಿರಲಿ, ಬೇಡವಾದ ಔಷದಿಯಾಗಿರಲಿ ತಂದು ಡಂಪ್ ಮಾಡುವುದು. ಎಲ್ಲ ಕಮಿಷನ್ ಇವರು ಹೊಡೆದುಕೊಳ್ಳುವುದು. ಅವರಿಗೆ ಬೇಕಾದ ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಅವಕಾಶವನ್ನೇ ಕೊಡದೆ, ಬೇಡವಾದ ಔಷದಿಗಳನ್ನು ಇಲ್ಲಿಂದಲೇ ನೇರವಾಗಿ ಅಲ್ಲಿಗೆ ತೆಗೆದುಕೊಂಡು ಡಂಪ್ ಮಾಡಿದ್ದಾರೆ. ಅಲ್ಲಿ ಜನಗಳಿಗೆ ಬೇಕಾದ ಔಷಧಿ ಇಲ್ಲ. ಇದರಿಂದಾಗಿ ಇವತ್ತು ಈ ರಾಜ್ಯದಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ಸ್‌ಗಳು ಏನು ಇವೆ, ಅವು ಪ್ರಿಸ್ ಕ್ರೈಬಿಂಗ್ ಹೆಲ್ತ್ ಸೆಂಟರ್ಸ್‌ಗಳಾಗಿವೆ. ಅರ್ಬನ್ ಆಸ್ಪತ್ರೆಗಳೆಲ್ಲಾ ಇವತ್ತು ಗೌರ್ನಮೆಂಟ್ ನರ್ಸಿಂಗ್ ಹೋಮ್‌ಗಳಾಗಿವೆ. ಆರೋಗ್ಯ ಮಂತ್ರಿಗಳು ಇಲ್ಲಿ ಇಲ್ಲ. ಅವರಿಗೆ ಚೆನ್ನಾಗಿ ಹೇಳಬಹುದಾಗಿತ್ತು ಅವರು ಇಲ್ಲದೇ ಇರುವ

ದರಿಂದ ಇದನ್ನು ಇಲ್ಲಿರುವಂತಹ ಶ್ರೀಮಾನ್ ವೀರಣ್ಣ ನವರು ತಿಳಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊನೆಯದಾಗಿ ಶ್ರೀಮಾನ್ ಲಕ್ಷ್ಮಿ ಸಾಗರ್‌ರವರು ಮೊನ್ನೆ ದಿವಸ ಆಸ್ತಿ ತೆರಿಗೆ ಬಗ್ಗೆ ಹೇಳುತ್ತಿದ್ದರು. ದುಡ್ಡು ಎಲ್ಲಿಂದ ಬರುತ್ತದೆ ? ದುಡ್ಡು ಹೇಗೆ ಬರುತ್ತದೆ ? ಸೀರಿನ ಮೇಲೆ ೨ ಪೈಸೆ ತೆರಿಗೆಯನ್ನು ಹಾಕಿದರೆ ಗಲಾಟೆ ಮಾಡುತ್ತಾರೆ. ದುಡ್ಡು ಎಲ್ಲಿಂದ ಬರುತ್ತದೆ ಎಂಬುದಾಗಿ ಹೇಳುತ್ತಿದ್ದರು. ಅದಕ್ಕೆ ಒಂದು ತಮಾಷೆ ಕೇಸನ್ನು ಹೇಳುತ್ತೇನೆ. ನಗರ ಪಾನ ಪ್ರಿಯರ ಸಂಘ ಅಂತ ಒಂದು ಇದೆ. ಅದರಲ್ಲಿ ಶಿವಾನಂದಂ ಎಂಬವರು ಒಬ್ಬ ಸಮಾಜ ಸೇವಾ ಕರ್ತರು. ಅವರು ಒಂದು ಕೇಸನ್ನು ಹಾಕಿದ್ದಾರೆ. ದಾಸಪ್ಪ ಅಂಡ್ ಸನ್ಸ್ ಅವರ ಮೇಲೆ ಒಂದು ರಿಟ್ ಪಿಟಿಷನ್ ಹಾಕಿದ್ದಾರೆ. ಕೋರ್ಟು ಅವರಿಗೆ ಡಿಕ್ರಿ ಕೊಟ್ಟಿದೆ. ಅವರು ೧೯೮೬–೮೭ ರಲ್ಲಿ ಬಿಡ್ ಮಾಡಿದ್ದಾರೆ. ಅವರು ಬಿಡ್ ಮಾಡುವುದಕ್ಕೆ ಲಾಯಕ್ ಇಲ್ಲ. ಯಾಕೆಂದರೆ, ೮ ಕೋಟಿ ರೂಪಾಯಿ ಸರ್ಕಾರಕ್ಕೆ ಡ್ಯೂ ಇದೆ. ಅವರು ಬಿಡ್ ಮಾಡಲು ಅಧಿಕಾರ ಇಲ್ಲ. ಅವರಿಗೆ ಬ್ಯಾಂಕ್ ಗ್ಯಾರಂಟಿ ಇಲ್ಲ. It is very very essential. ಅವರಿಗೆ ಬ್ಯಾಂಕ್ ಗ್ಯಾರಂಟಿ ಇಲ್ಲ. ಅವರು ಬಿಡ್ ಮಾಡಿದ್ದಾರೆ. ಅವರಿಗೆ ಆಕ್ಷನ್‌ನಲ್ಲಿ ಕೊಟ್ಟಿದ್ದಾರೆ. ಬಲ್ಕ್ ಸಾರಾಯಿ ಅವರಿಗೆ ರೂ. ೬.೨೫ ರಂತೆ ಸರಬರಾಜು ಆಗುತ್ತದೆ. ಅವರು ಬಲ್ಕ್‌ನಲ್ಲಿ ಮಾರಬೇಕಾಗಿರುವುದು ರೂ. ೨೪.೮೦ಕ್ಕೆ. ಆದರೆ ೩೬ ರೂಪಾಯಿಗಳಿಗೆ ಅವರು ಮಾರುತ್ತಿದ್ದಾರೆ. ಅವರು ೧.೮ ಎಂ.ಎಲ್. ಸಾರಾಯಿಯನ್ನು ರೂ. ೪.೫೦ಕ್ಕೆ ಮಾರಾಟ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದು ಅವರು ಅದನ್ನು ರೂ. ೬.೫೦ಕ್ಕೆ ಮಾರಾಟ ಮಾಡುತ್ತಿದ್ದಾರೆ. ಪ್ರತಿಯೊಂದು ೧.೮ ಎಂ.ಎಲ್.ಗೆ ಎರಡು ರೂಪಾಯಿ ಅವರಿಗೆ ಸಿಗುತ್ತಿದೆ. ಇವತ್ತು ಬೆಂಗಳೂರಿನಲ್ಲಿ ಒಂದು ದಿನಕ್ಕೆ ೧ ಲಕ್ಷ ಬಾಟಲ್‌ಗಳು ಮಾರಾಟವಾಗುತ್ತಿವೆ. ಎಂದರೆ ಇವನ ಪ್ರಾಫಿಟ್ ೨ ಲಕ್ಷ ರೂಪಾಯಿ. ನಗರದಲ್ಲಿ ಇಷ್ಟಾದರೆ ಡಿಸ್ಟ್ರಿಕ್ಟ್‌ಗೇ ಇವರು ಏಜೆಂಟ್ ಇರುವುದರಿಂದ ಇನ್ನೂ ಒಂದು ಲಕ್ಷ ರೂಪಾಯಿ ಸಿಗುತ್ತದೆ. ಹೀಗೆ ಅವರಿಗೆ ೩ ಲಕ್ಷ ರೂಪಾಯಿ ಪ್ರತಿದಿನ ಸಿಗುತ್ತದೆ. ಕೋರ್ಟ್ ಇವತ್ತು ಅವರ ಮೇಲೆ ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ. ಈ ೩ ಲಕ್ಷ ರೂ. ಎಲ್ಲಿ ಹೋಗುತ್ತದೆ? ಇದು ಯಾರ ಹತ್ತಿರ ಹೋಗುತ್ತಿದೆ? ಸರ್ಕಾರ ಇದನ್ನು ಹಿಡಿಯುವುದು ಕಷ್ಟವೇ? ಸರ್ಕಾರಕ್ಕೆ ಹಣ ಎಲ್ಲಿಂದ ಬರುತ್ತದೆ ಎಂದು ಅವರು ಹೇಳುವುದಾದರೆ ಈ ೩ ಲಕ್ಷ ರೂಪಾಯಿ ಯಾರ ಕಿಸೆಗೆ ಹೋಗುತ್ತಿದೆ? ಯಾರ ಅನುಕೂಲಕ್ಕೆ ಹೋಗುತ್ತಿದೆ? ಈ ಹಣದಿಂದ ಬಡವರಿಗೆ ಉಪಯೋಗ ಆಗುವುದಿಲ್ಲವೇ? ಇಲ್ಲಿ ನಾನು ಕೋರ್ಟ್ ಸ್ಟ್ರಿಕ್ಚರ್ಸ್‌ನ್ನು ಸ್ವಲ್ಪ ಓದಿ ಹೇಳುತ್ತೇನೆ.

> "Coming to the facts of the case in hand, we find that the Ist Writ Petitioner (Respondent) has claimed himself to be a social worker coming from a family of philanthropist of Bangalore and Bellary District, while Writ Petitioner No. 2 is the businessman. Both these petitioners have admittedly been able to show that the appellent was in arrears and owes to the State an amount approximately to the tune of 8 crores of rupees both as shop rental and sales tax. As has been held by the learned Single Judge, the mandatory Rule 7(iii) does not permit the State to enter into a contract or part with the right of retail vending of liquor in favour of a person who is in arrears. The acceptance of bid of the contesting respondent ignoring the mandate of Rule 7 is not only iilegal but arbitrary and snacks favouritism."

ಹೀಗೆಂದು ಕೋರ್ಟಿನಲ್ಲಿ ಜಡ್ಜ್‌ಮೆಂಟ್ ಆಗಿದೆ. ಹೀಗಿದ್ದರೂ ಸಹ ರೀಆಕ್ಷನ್ ಇಲ್ಲ. ಇವತ್ತು ಅಲ್ಲಿ ದಿನಕ್ಕೆ ೩ ಲಕ್ಷ ಹೋಗುತ್ತಿದೆ. ಈ ೩ ಲಕ್ಷವನ್ನು ಸರ್ಕಾರ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಇದು ಎಲ್ಲಿ ಹೋಗುತ್ತಿದೆ? ಯಾರಿಗೆ ಹೋಗುತ್ತಿದೆ? ಇದು ಭಗವಂತನಿಗೇ ಗೊತ್ತು. ಇದನ್ನು ಮಾನ್ಯ ಲಕ್ಷ್ಮೀಸಾಗರ್ ಅವರು ಮನಸ್ಸಿನಲ್ಲಿ ಇಟ್ಟುಕೊಂಡರೆ, ಹಣ ಎಲ್ಲಿಂದ ಬರುತ್ತದೆ

ಹೇಗೆ ಬರುತ್ತದೆ ಎಂಬುದನ್ನು ಬಿಡಬೇಕೆಂದು ಹೇಳಿ ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಯಾರೇ ಆಗಲಿ ಚೆಂಡನ್ನು ಗೋಡೆಗೆ ಬಲವಾಗಿ ಹೊಡೆಯುವುದಕ್ಕೆ ಹೋಗಬಾರದು. ನಮಗೇ ಅದು ವಾಪಸ್ಸು ಬಂದು ತಗಲುತ್ತದೆ. ಚೆಂಡನ್ನು ಹೊಡೆಯುವುದಿದ್ದರೆ ಮೆತ್ತಗೆ ಹೊಡೆಯಬೇಕು. ಆ ರೀತಿ ಎಲ್ಲರಿಗೂ ಸರಿಹೋಗುವ ಹಾಗೆ ರಿಪೇರಿ ಮಾಡಬೇಕು. ನಾನು ಇನ್ನೊಂದು ತಮಾಷೆಯನ್ನು ಇಲ್ಲಿ ಹೇಳುವುದನ್ನು ಮರೆತೆ. ಮೊನ್ನೆ ದಿವಸ ಮೇಳ ಆಯಿತು. ಅಲ್ಲಿ ಎಸ್.ಕೆ. ಡೇ ಅವರು, ನರಸಿಂಹನ್ ಅವರು ಮತ್ತು ಮುಖ್ಯಮಂತ್ರಿಯವರು ಬಹಳ ಮಾತನಾಡಿದರು. ಅವರು ಮಾತನಾಡುವ ಸಂದರ್ಭದಲ್ಲಿ ಪಕ್ಷ ಪಲ್ಲಂಗ ಎಲ್ಲಾ ಮರೆಯಬೇಕು, ಎಲ್ಲರೂ ಒಳ್ಳೆಯ ಕೆಲಸ ಮಾಡಬೇಕು, ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದರು. ಇವತ್ತು ಬಿತ್ತಿರತಕ್ಕ ವಿಷಬೀಜ ಎಷ್ಟು ಆಳಕ್ಕೆ ಸೇರಿಹೋಗುತ್ತದೆಯೋ ಗೊತ್ತಿಲ್ಲ. ಪಕ್ಕದ ಮನೆಯಲ್ಲೇ ಇರುವ ಅಣ್ಣ ತಮ್ಮಂದಿರು ಒಬ್ಬ ಸತ್ತಾಗ ಮುಖ ನೋಡಲು ಇನ್ನೊಬ್ಬ ಹೋಗದೇ ಇರುವುದನ್ನು ನೋಡಿದರೆ ಇನ್ನೂ ಎಷ್ಟು ದೂರ ಬೆಳೆಯುತ್ತದೆಂದು ನನಗೆ ಅರ್ಥ ಆಗುತ್ತಾ ಇಲ್ಲ. ಇದು ಹೋಗುವುದಕ್ಕೆ ನಾವೆಲ್ಲರೂ ಒಟ್ಟಾಗಿ ಪ್ರಯತ್ನ ಪಡಬೇಕು. ಒಟ್ಟಾಗಿ ಪ್ರಯತ್ನಪಡಬೇಕೆನ್ನುವ ಬಗ್ಗೆ ಅವತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು ಇದ್ದ ಹಾಗೆ ಎಂದು ಹೇಳಿದ್ದಾರೆ. ನಮ್ಮ ಜೊತೆಯಲ್ಲಿ ನಿಮಗೆ ಕಾನ್ಫಿಡೆನ್ಸ್ ಇರಬೇಕು. ತಾವು ಮಾಡತಕ್ಕ ಕೆಲಸಗಳಲ್ಲಿ ನಮ್ಮನ್ನು ನಿಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋದರೆ ನಮ್ಮ ಕೋಆಪರೇಷನ್ ಇರುತ್ತದೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಅಧ್ಯಕ್ಷರೆ, ದಿನಾಂಕ ೨೯—೧—೮೭ರಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಎರಡೂ ಸಭೆಗಳ ಸದಸ್ಯರನ್ನು ಉದ್ದೇಶಿಸಿ ಮಾಡಿದಂತಹ ಭಾಷಣಕ್ಕೆ ವಂದನೆಯನ್ನು ಸಲ್ಲಿಸಿ ನಾನು ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಜನತಾ ಸರ್ಕಾರ ೧೯೮೩ರಲ್ಲಿ ಸರ್ಕಾರವನ್ನು ರಚಿಸಿದ ಮೇಲೆ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಹೇಗಿತ್ತು ಎಂಬುದನ್ನು ವಿವರಣೆ ಮಾಡತಕ್ಕ ಅವಶ್ಯಕತೆ ಇಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ರಾಜ್ಯಸರ್ಕಾರ ಬಹಳ ಪ್ರಯತ್ನಪಟ್ಟು ಜನರಿಗೆ ಅಂದರೆ ರೈತರಿಗೆ ರೈತ ಕಾರ್ಮಿಕರಿಗೆ, ಕೂಲಿಕಾರರಿಗೆ ಕೆಲಸ ಕೊಡತಕ್ಕ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡಿದೆ ನಮ್ಮ ಸರ್ಕಾರ ೪ ವರ್ಷ ಸತತವಾಗಿ ಬರಗಾಲ ಪರಿಸ್ಥಿತಿಯನ್ನು ಎದುರಿಸಿದೆ. ರೈತರಿಗೆ, ಬಡವರಿಗೆ, ಕೂಲಿಕಾರರಿಗೆ ಕೃಷಿ ಕಾರ್ಮಿಕರಿಗೆ ಕಷ್ಟ ಬರಕೂಡದು ಎನ್ನುವ ರೀತಿಯಲ್ಲಿ ಕೆಲಸ ಮಾಡಿದೆ. ಯಾವರೀತಿ ಕೆಲಸ ಮಾಡಿದೆ ಎನ್ನುವುದು ನನ್ನ ಮಿತ್ರರಾದ ವಿರೋಧಪಕ್ಷದವರಿಗೆ ಗುರುತು ಇದೆ. ಅದು ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಗಳಲ್ಲಿ, ಜಿಲ್ಲಾಧಿಕಾರಿಗಳವರ ಕಛೇರಿಗಳಲ್ಲಿ ನಡೆದಂತಹ ಮೀಟಿಂಗ್‌ಗಳಲ್ಲಿ ಕೆಲಸಗಳ ವಿತರಣೆ ತಮಗೆ ಗುರುತು ಆಗಿದೆ. ಸರ್ಕಾರ ಈ ರೀತಿ ಕೆಲಸ ಮಾಡಿಕೊಂಡು ಬಂದಿದೆ ಅದಕ್ಕೆ ಉತ್ತರ ಕೊಡತಕ್ಕ ಅವಶ್ಯಕತೆ ಇಲ್ಲ, ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ಕೋಮುವಾರು ಗದ್ದಲ ಬೆಂಗಳೂರಿನಲ್ಲಿ ಮತ್ತು ಇತರ ಕಡೆಗಳಲ್ಲಿ ಆಗಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಈ ತರಹ ಕೋಮುವಾರು ಜಗಳ ಆಗಿರಲಿಲ್ಲ. ಶಾಂತಿಯುತ ಸ್ಥಳದಲ್ಲಿ ಯಾವುದೋ ಒಂದು ಕಾರಣದಿಂದ, ಅದೇನೆಂದರೆ ಪತ್ರಿಕೆಯಲ್ಲಿ ಬಂದಂತಹ ಒಂದು ಸಣ್ಣ ಕತೆಯನ್ನು ಆಧಾರವಾಗಿಟ್ಟುಕೊಂಡು ದೊಡ್ಡ ಪ್ರಮಾಣದಲ್ಲಿ ಜಗಳವಾಯಿತು. ಅದರಿಂದ ಸಾರ್ವಜನಿಕರ ಆಸ್ತಿಪಾಸ್ತಿಗಳು ಲೂಟಿಯಾಯಿತು. ಬೆಂಕಿ ಹಚ್ಚಿದರು. ನಷ್ಟಕ್ಕೆ ಒಳಗಾದವರು ಬಡವರಾಗಿರಬಹುದು, ಶ್ರೀಮಂತರಾಗಿರಬಹುದು ಒಟ್ಟಿನಲ್ಲಿ ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾನಿ

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಯಾಯಿತು. ಯಾವರೀತಿ ಜಗಳವಾಯಿತು ಎನ್ನುವುದನ್ನು ವಿಚಾರ ಮಾಡಿದಾಗ, ಕೋಮುವಾರು ಗದ್ದಲ ರಾಜ್ಯದಲ್ಲಿಯೇ ಅಲ್ಲ ರಾಷ್ಟ್ರದಲ್ಲಿಯೂ ಆಗುತ್ತಾ ಇವೆ. ನಡೆದಂತಹ ಗಲಭೆ ನನಗೆ ಗೊತ್ತಿರುವ ಹಾಗೆ ಒಂದು ಧಾರ್ಮಿಕ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಗಲಭೆಯಾಗಿದೆ. ಬೇರೆ ಯಾವುದೇ ಕಾರಣದಿಂದ ಗಲಭೆಯಾಗಿಲ್ಲ. ರಾಜಕೀಯವಾಗಿ ಆಗಲಿ, ಕಾರ್ಮಿಕರ ಚಳುವಳಿಯಿಂದ ಆಗಲಿ ಅಥವಾ ಇನ್ನಾವುದೇ ಕಾರಣಗಳಿಂದ ಆಗಲಿ ಆದಂತಹ ಗಲಭೆಗಳು ಏನಿವೆ ಅವು ಇಷ್ಟರ ಮಟ್ಟಿಗೆ ನಡೆದದ್ದನ್ನು ನಾನು ನೋಡೇ ಇಲ್ಲ. ಯಾವುದೇ ಕೋಮುವಾರು ಗಲಭೆ ನಡೆದರೆ ಇವತ್ತಿನ ದಿವಸ ಲೂಟಿ, ಗದ್ದಲ, ಜೀವ ತೆಗೆಯತಕ್ಕ ಕೆಲಸ ಆಗುತ್ತಿದೆ. ಇದಕ್ಕೆ ಕಾರಣ ಏನೆಂದರೆ ಯಾವುದೋ ಜನರು ಯಾವುದೋ ಕಾರಣಕ್ಕೆ ಜಗಳ ಪ್ರಾರಂಭಮಾಡಿ ಅವರು ಹೊರಟುಹೋಗು

ತ್ತಾರೆ. ಸಾಯುತಕ್ಕ ಜನರು ಪಾಪ ಬಡಜನರು ಹೊಡೆಯುವವರು ಹೊಡಿಸಿಕೊಳ್ಳುವವರು ಇಬ್ಬರೂ ಸಹ ಬಡವರ ಮಕ್ಕಳೇ. ಪೋಲೀಸ್ ಕೆಲಸದಲ್ಲಿರತಕ್ಕವರು ಕೂಡ ಬಡವರ ಮಕ್ಕಳೇ. ಆದರೆ ಸಾಹುಕಾರರ ಮಕ್ಕಳು ಪೋಲೀಸರಾಗುವುದಿಲ್ಲ. ಅದೇರೀತಿ ರಸ್ತೆಬದಿಯಲ್ಲಿ ಅಂಗಡಿಹಾಕಿ ಜೀವನ ಮಾಡುತ್ತಿರಬಹುದು, ಆಟೋರಿಕ್ಷಾ ನಡೆಸುತ್ತಿರಬಹುದು, ಅಥವಾ ಸೈಕಲ್ ರಿಕ್ಷಾ ನಡೆಸು ವವರು, ಏನಾದರೂ ಕೆಲಸ ಮಾಡಿಕೊಂಡಿರತಕ್ಕಂಥ ಇಂಥ ಬಡವರೇ ಗೋಲಿ ತಾಕಿ ಸತ್ತುಬಿಡುತ್ತಾರೆ. ನಾನು ಮುಖ್ಯವಾಗಿ ಹೇಳತಕ್ಕದ್ದು ಏನೆಂದರೆ, ನಾವು ಇಲ್ಲಿ ಯಾವುದೇ ಕೋಮು ಜಗಳವನ್ನು ನೋಡುತ್ತಿದ್ದಾಗ, ಅದು ಕೋಮು ಗಲಭೆಯಾಗಲೀ, ರಾಜಕೀಯ ಪ್ರದರ್ಶನವಾಗಲೀ, ಅಥವಾ ಜಗಳವಾಗಲೀ, ಇಂಥಾದ್ದರಲ್ಲಿ ಮಡಿಯುತಕ್ಕಂಥ ಸಾರ್ವಜನಿಕ ಆಸ್ತಿಪಾಸ್ತಿಗಳ ನಷ್ಟವಾಗುವಂತಾ ದ್ದನ್ನು ನೋಡಿಲ್ಲ. ಆದರೆ ಇವತ್ತಿನ ದಿವಸ ಈ ಕೋಮುವಾರು ಜಗಳದಿಂದ ಯಾವರೀತಿ ಘರ್ಷಣೆ ಆಗುತ್ತದೆ, ಇದಕ್ಕೆ ಎಲ್ಲರೂ, ಸಾರ್ವಜನಿಕರು ಇದಕ್ಕೆ ಜವಾಬ್ದಾರರು. ಇದನ್ನು ಸುವ್ಯಸ್ಥಿತವಾಗಿ ನಿಲ್ಲಿಸತಕ್ಕ ಕೆಲಸವನ್ನು ನಾವು ಎಲ್ಲರೂ ಮಾಡಬೇಕು. ಅದಕ್ಕಾಗಿ ಬೆಂಗಳೂರು ಮತ್ತು ಇತರ ಪ್ರದೇಶಗಳಲ್ಲಿ ಇರತಕ್ಕಂಥ ಜನರು ಕೂಡ ಏನು ಗದ್ದಲ ಆಗುತ್ತಿತ್ತು, ಅದನ್ನು ಶಾಂತರೀತಿಯಿಂದ ನಿಲ್ಲಿಸಿದ್ದಾರೆ. ಆದ್ದರಿಂದ ಇವತ್ತಿನ ದಿವಸ ಯಾವ ರಾಜ್ಯದಲ್ಲಿ ಆಗಲಿ, ದೇಶದಲ್ಲಿ ಆಗಲಿ ಎಲ್ಲಿ ಶಾಂತಿ ಇರುವುದಿಲ್ಲ, ಅಲ್ಲಿ ಸಮೃದ್ಧಿ ಇರುವುದಿಲ್ಲ. ಪ್ರಗತಿಯಾಗಲೀ, ಅಭಿವೃದ್ಧಿ ಕೆಲಸವಾಗಲೀ ಆಗಲಿಕ್ಕೆ ಸಾಧ್ಯ ಇಲ್ಲ- ಇವತ್ತು ಹೊರಗಡೆ ಹೊರಡಬೇಕಾದರೆ. ಹೊರಗೆ ಏನಾಗುತ್ತಿದೆ, ಜೀವಕ್ಕೆ ಆಸ್ತಿಪಾಸ್ತಿಗೆ ಅಪಾಯ ಇದೆಯೇ, ಇಲ್ಲವೇ ಎಂದು ಯೋಚನೆ ಮಾಡಿ ಹೊರಡಬೇಕಾದಂಥ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ, ಇಂತಹ ಪರಿಸ್ಥಿತಿಯಲ್ಲಿ ಶಾಂತಿಯನ್ನು ಕಾಪಾಡಬೇಕಾಗಿದ್ದರೆ, ಸಾರ್ವಜನಿಕರು, ರಾಜಕೀಯ ಪಕ್ಷ ಮತ್ತು ಕಾರ್ಮಿಕ ಮುಖಂಡರು ಮತ್ತು ಧಾರ್ಮಿಕ ಜನರು ಕೂಡ ಅದಕ್ಕೆ ಅಷ್ಟೇ ಜವಾಬ್ದಾರರು ಇದ್ದಾರೆ ಎಂದು ಹೇಳಿ. ಇದನ್ನು ಶಾಂತರೀತಿಯಿಂದ ತಪ್ಪಿಸಬೇಕೆಂದು ಹೇಳಿ, ಈ ಗಲಭೆ ಮುಂದುವರೆದು ಉತ್ತರ ಕನ್ನಡ ಜಿಲ್ಲೆಯಾಗಲೀ, ಅಥವಾ ದಕ್ಷಿಣ ಕನ್ನಡ ಜಿಲ್ಲೆಯಾಗಲಿ ಅಲ್ಲಿಗೆ ತಲುಪಲಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ, ವಿರೋಧಪಕ್ಷದವರು ಮತ್ತು ಜನತಾಪಕ್ಷದವರಿಗೆ ಎಲ್ಲರಿಗೂ ಈ ಬಗ್ಗೆ ನನ್ನ ಧನ್ಯವಾದಗಳನ್ನು ಸಲ್ಲಿಸಬೇಕಾಗಿದೆ.

ಇದಲ್ಲದೆ, ಇವತ್ತಿನ ದಿವಸ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ಸಂಬಂಧ ಪಟ್ಟಂತೆ ಸಾಕಷ್ಟು ಮಾತುಗಳನ್ನು ಆಡಿದ್ದಾರೆ. ಇದೇನೂ ಹೊಸತಲ್ಲ, ಇಂತಹ ಒಂದು ಚುನಾವಣೆ ನಮ್ಮ ದೇಶದಲ್ಲಿ ಅಥವಾ ಈ ರಾಜ್ಯದಲ್ಲಿ ಮೊದಲು ಆಗುತ್ತಿತ್ತು ಎಂಬ ಮಾತನ್ನು ವಿರೋಧಪಕ್ಷದ ಮಾನ್ಯ ನಾಯಕರು ಈಗತಾನೆ ಹೇಳಿದರು, ಹಿಂದೆ ಗ್ರೂಪ್ ಪಂಚಾಯತಿ, ತಾಲ್ಲೂಕು ಬೋರ್ಡ್ ಇತ್ತು. ಆವಾಗ ಗ್ರೂಪ್ ಪಂಚಾಯತಿಗೆ ೨೦ ರೂಪಾಯಿ ಒಂದು ಚೆಕ್ ಹರಿಯುವುದಕ್ಕಿಂತ ಹೆಚ್ಚಿನ ಯಾವುದೂ ಕೂಡ ಹೆಚ್ಚಿನ ಕೆಲಸ ಮಾಡಲು ಸಾಧ್ಯವಿರಲಿಲ್ಲ, ಜಿಲ್ಲಾಪರಿಷತ್ ಮತ್ತು ಮಂಡಲುಪಂಚಾಯತ್ ಚುನಾವಣೆ ಬಗ್ಗೆ ಕೆಲವು ಮಾತುಗಳನ್ನು ಆಡಿದ್ದಾರೆ. ಇಲ್ಲಿ ಪಕ್ಷದ ಚಿಹ್ನೆ ಗಳನ್ನು ತೆಗೆದುಕೊಂಡು ಏನು ಚುನಾವಣೆ ನಡೆಯಿತು ಇದರಿಂದ ಹಳ್ಳಿಗಳಲ್ಲಿ ಸಾಮರಸ್ಯ ಕೆಟ್ಟುಹೋಗಿ ಗದ್ದಲ ಉಂಟಾಗಿದೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಆದರೆ ನಮಗೆ ಗೊತ್ತಿದೆ, ಮೊದಲು ಏನು ತಾಲ್ಲೂಕು ಬೋರ್ಡ್ ಮತ್ತು ಗ್ರೂಪ್ ಪಂಚಾಯಿತಿಗಳಿಗೆ ಚುನಾವಣೆ ಆಗುತ್ತಿತ್ತು, ಅವಾಗ ರಾಜಕೀಯ ಪಕ್ಷಗಳನ್ನು ಬಿಟ್ಟು ಚುನಾವಣೆಗೆ ಆಗುತ್ತಿತ್ತೇನು ? ರಾಜಕೀಯ ಪಕ್ಷಗಳು, ಜನತಾ ಪಕ್ಷದವರು, ಕಾಂಗ್ರೆಸ್ ಪಕ್ಷದವರು, ಕಮ್ಯುನಿಸ್ಟ್ ಪಕ್ಷದವರು ತಮ್ಮ ತಮ್ಮ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ನಿಲ್ಲಿಸುತ್ತಿದ್ದರು. ಇದು ರಾಜಕೀಯ ಪಕ್ಷಗಳ ಪರವಾಗಿ ಅಲ್ಲವೆ ? ಅದೂ ಅಲ್ಲದೆ ಎ.ಪಿ.ಎಂ.ಸಿ. ಮತ್ತು ಟಿ.ಎ.ಪಿ.ಸಿ.ಎಂ.ಎಸ್.ಗಳ ಚುನಾವಣೆಗಳಲ್ಲೂ ನಮ್ಮ ಪಕ್ಷದವರು ನಿಮ್ಮ ಪಕ್ಷದವರು ಎಂದು ರಾಜಕೀಯ ಪಕ್ಷಗಳುವಾಗಿ ಅಭ್ಯರ್ಥಿಗಳನ್ನು ನಿಲ್ಲಿಸುತ್ತಿದ್ದರು. ಮಾನ್ಯ ಬಂಗಾರಪ್ಪನವರಿಗೂ ಗೊತ್ತಿರಬಹುದು ಈ ರಾಜಕೀಯ ಪ್ರಜ್ಞೆ ಮೊದಲು ಜನರಲ್ಲಿ ಆಗಲಿ, ರಾಜಕೀಯ ವಿಚಾರ ಎಲ್ಲಾ ಜನರಲ್ಲೂ ಹರಡಲಿ. ಜನರಲ್ಲಿ ರಾಜಕೀಯ ವಿಚಾರ ಪ್ರಧಾನವಾದ ಪ್ರಜ್ಞೆ ಬಾರದೇ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ರಾಜಕೀಯವಾಗಿ ಯಾವರೀತಿ ಕೆಲಸ ಮಾಡಬೇಕು, ಎನ್ನುವ ಪ್ರಶ್ನೆಯನ್ನು ಬೆಳೆಸಿಕೊಳ್ಳದಿದ್ದರೆ, ರಾಜಕೀಯ ಅರಿವನ್ನು ಪಡೆಯ ದಿದ್ದರೆ ಸಾಧ್ಯವಿಲ್ಲ. ಈ ರಾಜಕೀಯ ವಿಚಾರವನ್ನು ಹುಟ್ಟಿಸುವ, ರಾಜಕೀಯ ಮಂಚದ ಅವಶ್ಯಕತೆ ಅತಿಯಾಗಿ ಇದೆಯೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯ್ತಿ ಎನ್ನುವ ಒಂದು ಕ್ರಾಂತಿಕಾರಕವಾದ ಕಾನೂನನ್ನು ನಮ್ಮ ಸರ್ಕಾರ ಗಳಿಗೆಯಲ್ಲಿ ತಂದು. ಈ ಕಾನೂನು ಜಾರಿಗೆ ಬಂದ ಮೇಲೆ ಮೊಟ್ಟ ಮೊದಲನೇ ಸಲ ಚುನಾವಣೆಯಾಯಿತು. ಅಧಿಕಾರ ವಿಕೇಂದ್ರೀಕರಣ ಆಗಬೇಕೆಂಬ ದೃಷ್ಟಿಯಿಂದ

ಇವತ್ತಿನದಿವಸ ಚುನಾವಣೆಯಾಗಿದೆ. ಅಧಿಕಾರ ವಿಕೇಂದ್ರೀಕರಣ ಹೇಗೆ ಆಯಿತು ಎನ್ನುವ ವಿಷಯ ವಿರೋಧ ಪಕ್ಷದವರಿಗೂ ಗೊತ್ತಿದೆ. ಏಕೆಂದರೆ ನಾವು ಯಾವಾಗಲೂ ಏನು ಹೇಳುತ್ತಿದ್ದೇವೆ. ಅಧಿಕಾರ ಒಂದೇಕಡೆ ಕೇಂದ್ರೀಕೃತವಾಗಿ ಇರಬಾರದು, ಅದು ಎಲ್ಲಾ ಕಡೆ ಹರಿದು ಹೋಗಬೇಕು; ಎಲ್ಲಾ ಕಡೆ ಹರಡಬೇಕು, ಜನರಿಗೆ ಅನುಕೂಲ ಆಗಬೇಕು ಎಂಬ ದೃಷ್ಟಿಯಿಂದ ಈ ಕಾನೂನು ಆಗಿದೆ. ಇಲ್ಲಿ ಹಣ ಹೋಗುತ್ತದೆ ಎನ್ನುವ ಮಾತಲ್ಲ. ಇವತ್ತಿನ ದಿವಸ ಯಾವುದೇ ಒಂದು ಯೋಜನೆಯನ್ನು ತೆಗೆದುಕೊಳ್ಳಿ. ಉದಾಹರಣೆಗೆ ಎನ್.ಆರ್.ಇ.ಪಿ.ಯನ್ನೇ ತೆಗೆದುಕೊಳ್ಳಿ. ಇದರಲ್ಲಿ ಯಾವರೀತಿ ಹಣ ಬಿಡುಗಡೆಯಾಗುತ್ತದೆ, ಯಾವ ರೀತಿ ಉಪಯೋಗವಾಗುತ್ತದೆ ಎಂಬುದನ್ನು ನೋಡಿದರೆ, ೧೦೦ಕ್ಕೆ ೬೦ ರೂ. ಕೆಲಸ ಆಗುತ್ತದೆ, ಬಾಕಿ ೪೦ ರೂಪಾಯಿ ಹಾಳಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಜನರ ಕೈಗೆ ಅಧಿಕಾರ ಹೋಗಬೇಕು, ಒಂದೇ ಕಡೆ ಉಳಿಯಬಾರದು ಎಂಬುದೇ ತಮ್ಮ ಅರ್ಥ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ. ಏಕೆಂದರೆ ತಾವು ಹೃದಯ ಮುಟ್ಟಿಕೊಂಡು ಭಾಷಣ ಮಾಡಿ, ಏನು ನಡೆದಿದೆ ಎಂಬುದು ನೋಡಿಕೊಂಡು ಹೇಳಬೇಕು. ಪಕ್ಷ ಪಂಗಡ ಮರೆಯಿರಿ. ಶಕ್ತಿವಂತ ಸಂಪೂರ್ಣವಾಗಿ ವೋಟನ್ನು ಖರೀದಿ ಮಾಡುವಂಥ ಉಚ್ಚ ಮಟ್ಟಕ್ಕೆ ಹೋಗಿದೆ. ಜನರ ಕೈಗೆ ಅಧಿಕಾರ ಹೋಗಿಲ್ಲ. ಶಕ್ತಿವಂತರ ಕೈಗೆ ಅಧಿಕಾರ ಬಡವರ ಕೈಗೆ ಬಾಟಲಿಗಳು ಮತ್ತು ಹಣ ಹೋಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ತಾವು ಏನಾದರೂ ಮಾತನಾಡಿ.

ಶ್ರೀ ಹೆಚ್.ಜಿ. ಚಿನ್ನಪ್ಪ.—ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದನ್ನು ತಪ್ಪಿಸುವುದಕ್ಕೆ ಯಾರ ಕೈಲೂ ಆಗಿಲ್ಲ.

ಉಪಾಧ್ಯಕ್ಷರು.—ಈಗ ವಾದ ವಿವಾದ ಬೇಡ, ಅವರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ನಾನು ಹಿಂದೆಯೂ ಕೂಡ ಈ ಮಾತನ್ನು ಹೇಳಿದ್ದೇನೆ, ೪೦ ವರ್ಷಗಳಲ್ಲಿ ಅಲ್ಲಲ್ಲಿ ಏನಾದರೂ ನಡೆದಿದ್ದರೂ, ನೀವು ಒಂದೇ ವರ್ಷದಲ್ಲಿ ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯಿತಿ ಚುನಾವಣೆಯಲ್ಲಿ ವ್ಯಾಪಕವಾಗಿ ಮುಗಿಸಿಬಿಟ್ಟಿದ್ದೀರಿ. ನಿಮ್ಮನ್ನು ಏನಾದರೂ ೮–೧೦ ವರ್ಷಗಳು ಇಟ್ಟುಬಿಟ್ಟರೆ, ಬಾಟಲ್‌ಗಳು ಮತ್ತು ಹಣದ ಚೀಲಗಳು ಇಲ್ಲದೇ ನೀವು ಚುನಾವಣೆ ಮಾಡುವುದಕ್ಕೆ ಆಗುವುದೇ ಇಲ್ಲ.

ಶ್ರೀ ಹೆಚ್.ಜಿ. ಚಿನ್ನಪ್ಪ.—ಇದನ್ನು ಮಾಡಿದವರು ಕಾಂಗ್ರೆಸ್‌ನವರು, ಜನತಾದವರಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಗ ನೀವು ಎಲ್ಲಿದ್ದೀರಿ. ಮಾನ್ಯ ಹೆಗಡೆಯವರು ಕಾಂಗ್ರೆಸ್‌ನಲ್ಲಿ ಇರಲಿಲ್ಲವೇ ? ಹಾಗಾದರೆ ಈ ಬಾಟಲಿ ಮತ್ತು ಹೆಂಡ, ಹಣ ಇವನ್ನೆಲ್ಲಾ ಅವರೇ ತಂದರೆಂದು ಹೇಳಬಹುದು. ನೀವು ಈಗ ಒಂದು ಚುನಾವಣೆ ಮುಗಿಸಿದ್ದೀರಿ. ನಿಮ್ಮನ್ನು ೧೦ ವರ್ಷ ಅಲ್ಲಿಯೇ ಇಟ್ಟರೆ, ಎಲ್ಲರೂ ಹಣ, ಹೆಂಡ ಕೊಟ್ಟೇ ಚುನಾವಣೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಎಚ್ಚರ ಇರಲಿ.

ಶ್ರೀ ಎಸ್.ಕೆ. ಕಾಂತಾ.—ಈ ಮಾತು ಏಕೆ ಹೇಳುತ್ತಿದ್ದೇನೆಂದರೆ, ಯಾವುದೇ ಚುನಾವಣೆಯಲ್ಲಿ ಸಮರ್ಥ ಅಸಮರ್ಥತೆ ಬಗ್ಗೆ ಇಲ್ಲಿ ವಿಶೇಷವಾಗಿ ಹೇಳುವುದಕ್ಕೆ ತಯಾರಿಲ್ಲ. ಏಕೆಂದರೆ, ಇದು ನಡೆದು ಬಂದಿರುವ ದಾರಿ. ಇದನ್ನು ವಿಚಾರ ಮಾಡತಕ್ಕಂಥಾದ್ದು, ಸುಧಾರಣೆ ಆಗತಕ್ಕಂಥಾದ್ದಕ್ಕೆ ಹೋಗಬೇಕೇ ಹೊರತು, ಯಾವುದಾದರೂ ಅನಾವಶ್ಯಕವಾಗಿ ಯಾವುದೇ ರೀತಿಯಿಂದ, ಯಾವುದೇ ಕೋಮಿನ ಒಂದು ದೊಡ್ಡ ಶಕ್ತಿಯ ಕೈಯಲ್ಲಿ ಅಧಿಕಾರ ಹೋಗಬಾರದು ಎನ್ನುವ ವಿಚಾರ ನಮಗೂ ಇದೆ, ನಿಮಗೂ ಇದೆ. ಇದನ್ನು ಉದ್ದೇಶಿಸಿ ಒಳ್ಳೆಯ ಕೆಲಸ ಮಾಡುವುದಕ್ಕೆ ಹೊರಟಿದ್ದೇವೆ, ಇದರಲ್ಲಿ ಎಲ್ಲರ ಸಹಕಾರ ಅತೀ ಅಗತ್ಯ.

೩–೦೦ ಪಿ. ಎಂ.

ಈ ಚುನಾವಣೆಯ ಮೂಲ ಉದ್ದೇಶ ಏನಿದೆ ಎಂಬುದು ತಮಗೆಲ್ಲಾ ಗೊತ್ತಿರತಕ್ಕಂಥಾದ್ದು. ತಾವೂ ಕೂಡಾ ಈ ಕಾನೂನು ಮಾಡುವುದಕ್ಕೆ ಸಹಕಾರ ಕೊಟ್ಟಿದ್ದೀರಿ, ತಮ್ಮಿಂದ ಕೂಡಾ ಸಹಕಾರ ಸಿಕ್ಕಿದೆ ಇಲ್ಲ ಎಂದು ಹೇಳುವುದಿಲ್ಲ. ಆದರೆ ಚುನಾವಣೆಯ ಕಾಲದಲ್ಲಿ ಕೆಲವು ಗಲಭೆಗಳಾಗಿವೆ ಕೆಲವು ಸಾಮರ್ಥ್ಯವುಳ್ಳ ಜನರನ್ನು ಎಲ್ಲ ಪಕ್ಷದವರು ನಿಲ್ಲಿಸಿದ್ದರೆ ತಮಗೆ ಗುರುತಿಲ್ಲವೇ? ನಿಮ್ಮ ಪಕ್ಷ

ದಲ್ಲೂ ಕೂಡಾ ಇಂತಹ ಸಾಮರ್ಥ್ಯವನ್ನುಳ್ಳ ಜನರ ಹತೋಟಿಯಲ್ಲಿ ಕೆಲವೊಂದು ಪಂಚಾಯತಿಗಳು ಬಂದಿರಬಹುದು. ಆದರೆ ನಾವೂ ನೀವೂ ಕೂಡಾ ಇಂತಹ ಸಾಮರ್ಥ್ಯವನ್ನುಳ್ಳ ಜನರೇ? ಅವರನ್ನು ಕಡಿಮೆ ಸಾಮರ್ಥ್ಯವುಳ್ಳವರನ್ನಾಗಿ ಮಾಡುವುದಕ್ಕೆ ಎರಡೂ ಪಕ್ಷದವರೂ ಸಹ ಕೂಡಿ ವಿಚಾರ ಮಾಡುತ್ತಿದ್ದೇವೆ. ಸಮರ್ಥರಾದ ಹಾಗೂ ಬೇಜವಾಬ್ದಾರಿ ಜನರ ಕೈಯಲ್ಲಿ ಅಧಿಕಾರ ಹೋಗಬೇಕೆನ್ನತಕ್ಕಂಥ ದೃಷ್ಟಿ ನಮ್ಮ ಪಕ್ಷದಲ್ಲೂ ಇಲ್ಲ, ನಮ್ಮ ಸರಕಾರಕ್ಕೂ ಇಲ್ಲ. ಈ ಚುನಾವಣೆಯ ಮುಖ್ಯ ಉದ್ದೇಶ ಭ್ರಷ್ಟಾಚಾರದಿಂದ ಯಾವರೀತಿ ಕೆಲಸ ಆಗುತ್ತಿತ್ತು ಅದು ಕಡಿಮೆಯಾಗಬೇಕೆನ್ನುವುದು. ಒಂದು ಸಣ್ಣ ಕೆಲಸ ಆಗಬೇಕಾಗಿದ್ದರೂ ಕೂಡಾ ಇಲ್ಲಿಯವರೆಗೆ ಅಂದರೆ ಬೆಂಗಳೂರಿಗೆ ಬರಬೇಕಾಗುತ್ತಿತ್ತು. ಒಂದು ರಸ್ತೆ ನನ್ನ ಕ್ಷೇತ್ರದಲ್ಲಿ ಆಗಬೇಕಾಗಿದ್ದರೂ ಅದರ ಮಂಜೂರಾತಿ ತೆಗೆದುಕೊಳ್ಳಬೇಕಾಗಿದ್ದರೆ ಎಲ್ಲೆಲ್ಲಿಗೆ ಹೋಗಬೇಕಾಗುತ್ತಿತ್ತು. ಮಂತ್ರಿಗಳ ಹತ್ತಿರ ಹೋಗಬೇಕು, ಸೆಕ್ರೆಟರಿ ಹತ್ತಿರ ಹೋಗಬೇಕು, ಪ್ಲಾನ್ ಅಪ್ರೂವಲ್ ಆಗಬೇಕು, ಮತ್ತೆ ನನ್ನ ಜಿಲ್ಲೆಗೆ ಹೋಗಬೇಕು, ಆಮೇಲೆ ನನ್ನ ಊರಿಗೆ ಹೋಗಬೇಕು, ಇದೆಲ್ಲಾ ಆಗಬೇಕಾದರೆ ಎರಡು ಮೂರು ವರ್ಷಗಳಾಗಬೇಕಾಗುತ್ತಿತ್ತು. ಜನರ ಕೆಲಸ ಜನರಿಂದಲೇ ಆಗಲಿ, ಜನರಿಂದ ಅಧಿಕಾರ ಪಡೆದಿರತಕ್ಕಂಥ ವ್ಯಕ್ತಿಗಳಿಂದ ಆಗಲೀ ಎಂಬ ದೃಷ್ಟಿಯಿಂದ, ಅಧಿಕಾರ ಕೇಂದ್ರಿಕೃತ ಆಗದೇ ಇರಲಿ ಎಂಬ ದೃಷ್ಟಿಯಿಂದ ಜನತಾಪಕ್ಷದ ಸರಕಾರ ಇಪತ್ತಿನದಿವಸ ಚುನಾವಣೆಗಳನ್ನು ಮಾಡಿ ಜನರ ಅಧಿಕಾರವನ್ನು ಜನರ ಕೈಯಲ್ಲೇ ಕೊಟ್ಟಿದೆ. ಇದರಲ್ಲಿ ಸ್ವಲ್ಪ ಮಟ್ಟಿಗೆ ಜಾತೀಯ ಗದ್ದಲ ಆಗಿದೆ, ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಚುನಾವಣೆಯಲ್ಲಿ ಯಾವುದೇ ಪಕ್ಷ ತಮ್ಮ ತಮ್ಮ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸುತ್ತಾರೆ, ಆಗ ಅವರು ಇಂತಹ ಅಭ್ಯರ್ಥಿಗಳನ್ನೇ ನೋಡಿ ಚುನಾವಣೆಗೆ ನಿಲ್ಲಿಸುತ್ತಾರೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸಿ, ಪಕ್ಷಗಳು ಬೇರೆ ಚಿತ್ರ ಕೊಡಬಹುದು, ಆದರೆ, ಇಂತಹ ಜಾತಿಯ ಅಭ್ಯರ್ಥಿನೇ ಎಂದು ಹೇಳಿ ಚುನಾವಣೆಗೆ ನಿಲ್ಲಿಸುತ್ತಾರೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ.

ಶ್ರೀ ಯು. ಭೂಪತಿ.—ಮಾನ್ಯ ಕಾಂತಾರವರೇ, ಒಂದು ವಿಚಾರ, ಯಾವುದೇ ಒಂದು ಗುಂಪಿಗೆ ಅಧಿಕಾರ ಹೋಗಬೇಕೆನ್ನತಕ್ಕಂಥಾ ಭಾವನೆ ನಮ್ಮ ಪಕ್ಷಕ್ಕೆ ಇರಲಿಲ್ಲ, ನಮ್ಮ ಸರಕಾರಕ್ಕೂ ಇರಲಿಲ್ಲ ಎಂಬ ಮಾತನ್ನು ಹೇಳಿದಿರಿ. ಮೊನ್ನೆ ನಡೆದ ಜಿಲ್ಲಾ ಪರಿಷತ್ ಚುನಾವಣೆಗಳ ಫಲಿತಾಂಶಗಳನ್ನು ವಿವರವಾಗಿ ನೋಡಿದರೆ, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಮಹಿಳೆಯರಿಗೆ ಮೀಸಲಾಗಿರ, ತಕ್ಕಂಥ ಸ್ಥಾನಗಳನ್ನು ಬಿಟ್ಟರೆ ಉಳಿದಂತೆ ಎಲ್ಲಾ ಸ್ಥಾನಗಳು ಯಾವ ಗುಂಪಿನವರಿಗೆ ಸಂದಿದ್ದಾವೆ ಎಂಬುದನ್ನು ನೋಡಿ ಈ ಮಾತನ್ನು ಹೇಳಿ.

ಶ್ರೀ ಎಸ್. ಕೆ. ಕಾಂತಾ.—ಅಧ್ಯಕ್ಷರೇ, ತಮಗೆ ಗುರುತಿದೆ, ಈ ಕಡೆ ಪಕ್ಷದವರು ಆ ಕಡೆ ಪಕ್ಷದವರು ಯಾರು ಮತ್ತು ಯಾವ ಗುಂಪಿನವರನ್ನು ನಿಲ್ಲಿಸಿದ್ದರೆಂಬುದು ಮತ್ತು ಯಾರು ಆರಿಸಿ ಬಂದಿದ್ದಾರೆಂದು. ಕನ್ನಡಿ ನಿಮ್ಮ ಕೈಯಲ್ಲೇ ಇದೆ, ನೋಡಿಕೊಳ್ಳಿ, ನಾನು ಮಾನ್ಯ ಶಾಣಪ್ಪನವರಿಗೆ ಹೇಳುತ್ತಿದ್ದೇನೆ. ಕನ್ನಡಿ ವಿರೋಧ ಪಕ್ಷದವರ ಕೈಯಲ್ಲಿದೆ, ಕಮ್ಯೂನಿಸ್ಟ್ ಪಕ್ಷದವರ ಕೈಯಲ್ಲೂ ಇದೆ, ಬಿ. ಜೆ. ಪಿ. ಯವರ ಕೈಯಲ್ಲೂ ಇದೆ, ಯಾರು ಯಾರು ಕ್ಯಾಂಡಿಡೇಟ್ಸ್ ತಾವು ನಿಲ್ಲಿಸಿದ್ದಿರಿ ಅವರು ಯಾರು ಆರಿಸಿಬಂದಿದ್ದಾರೆಂಬುದು.

ಶ್ರೀ ಯು. ಭೂಪತಿ.—ಇಲ್ಲಿ ಏತಕ್ಕೆ ಹೇಳಿದೆ ಎಂದರೆ, ಜನತೆಯ ಕೈಗೆ ಅಧಿಕಾರ ಎಂಬ ತತ್ವ ಸರಿ. ಆದರೆ ಅದು ಸಾಮಾನ್ಯ ಜನತೆಯ ಕೈಗೆ ಹೋಗಿಲ್ಲ, ಅದನ್ನು ಯೋಚನೆ ಮಾಡಿ.

ಶ್ರೀ ಎಸ್. ಕೆ. ಕಾಂತಾ.—ಹೋಗುತ್ತದೆ, ನಾವೂ ನೀವೂ ಸಾಮಾನ್ಯ ಜನರಲ್ಲವೇ. ಕೆ. ಬಿ. ಶಾಣಪ್ಪನವರಾಗಲೀ, ಭೂಪತಿಯವರಾಗಲೀ, ನಾನಾಗಲೀ ಸಾಮಾನ್ಯ ಜನರಲ್ಲವೇ, ನೀವು ಸಾಮಾನ್ಯ ಜನರಲ್ಲವೇ?

SRI U. BHUPATHI.—It is an exception.

ಶ್ರೀ ಎಸ್. ಕೆ. ಕಾಂತಾ.—ಇದನ್ನು ಬರೀ ಪೇಪರ್‌ನಲ್ಲಿ ನೋಡಿ ಹೇಳುವುದಕ್ಕೆ ಸಾಧ್ಯ ಇಲ್ಲ. ಯಾರು ಇದ್ದಾರೆ ಎನ್ನತಕ್ಕಂಥಾದ್ದು ಬೇರೆ ವಿಚಾರ, ಅವರವರ ಜಿಲ್ಲೆಯಲ್ಲಿ ಅವರವರ ತಾಲ್ಲೂಕಿನಲ್ಲಿ ಯಾರು ಸೇವೆ ಮಾಡಿದ್ದಾರೆ, ಯಾರು ಸೇವೆ ಮಾಡುತ್ತಿರತಕ್ಕಂಥವರು ಇದ್ದಾರೆ, ಅಂತಹವರು ಆರಿಸಿ ಬಂದಿದ್ದಾರೆ. ನಮ್ಮ ಪಕ್ಷವಾಗಲೀ ನಿಮ್ಮ ಪಕ್ಷವಾಗಲೀ ಬೇರೆ ಯಾವುದೇ ಪಕ್ಷವಾಗಲೀ ಜನರಿಗೆ ಬೇಕಾದವರು ಆರಿಸಿಬಂದಿದ್ದಾರೆ. ಜಿಲ್ಲಾ ಪರಿಷತ್ ಚುನಾವಣೆ ಆಯಿತು, ಜನರು ಇವುಗಳಿಂದ

ಯಾವರೀತಿ ಕೆಲಸ ತೆಗೆದುಕೊಳ್ಳುತ್ತಾರೆ ಎಂದು ಹೇಳಬೇಕಾಗಿದ್ದರೆ. ಭ್ರಷ್ಟಾಚಾರ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ. ಏತಕ್ಕೆಂದರೆ ಮಂಡಲ ಪಂಚಾಯತ್‌ನಲ್ಲಿ ೨೦೦–೩೦೦ ಜನಕ್ಕೆ ಒಬ್ಬರು ಪ್ರತಿನಿಧಿಗಳು ಆರಿಸಿ ಬಂದಿರುತ್ತಾರೆ. ಸಾಕಷ್ಟು ಜನರು ಪ್ರತಿನಿಧಿಸುತ್ತಾರೆ.

ಕನಿಷ್ಟ ಪಕ್ಷ ೨೦೦–೩೦೦ ಜನರಿಗೊಬ್ಬ ಮಂಡಲ್ ಪಂಚಾಯಿತಿ ಸದಸ್ಯರು ಚುನಾಯಿತರಾಗಿ ಬಂದಿರುತ್ತಾರೆ. ಅವರು ಆ ಸ್ಥಳದ ಕೆಲಸಕಾರ್ಯಗಳ ಬಗ್ಗೆ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಯಾವ ರಸ್ತೆ ಎಲ್ಲಿ ಮಾಡುತ್ತಿದ್ದಾರೆ? ಯಾವ ಮಣ್ಣು ಎಲ್ಲಿ ಹಾಕುತ್ತಿದ್ದಾರೆ ಎನ್ನುವುದನ್ನು ಇನ್ನು ಮುಂದೆ ಅಲ್ಲಿನ ಜನತೆಯೇ ಕೇಳಬಹುದು. ಇದರಿಂದ ಆಡಳಿತದಲ್ಲಿ ಭ್ರಷ್ಟಾಚಾರ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು. ಇದರಲ್ಲಿ ಯಾರಿಗೂ ಸಂಶಯವಿಲ್ಲ. ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅದರಲ್ಲಿ ಬಹಳ ಮುಖ್ಯವಾದಂಥ ಕೆಲವು ಕಾರ್ಯಕ್ರಮಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು ೩೧ ಲಕ್ಷ ಕುಟುಂಬಗಳಿಗೆ ಕಡಿಮೆ ದರದಲ್ಲಿ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವಂತಹ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಇದರಿಂದ ಹಳ್ಳಿಗಳಲ್ಲಿರತಕ್ಕಂಥ ಬಡಜನತೆಗೆ ಅನುಕೂಲವಾಗಿದೆ. ಇದರಿಂದ ಯಾರಿಗೂ ಯಾವುದೇ ರೀತಿಯ ಭ್ರಷ್ಟಾಚಾರ ಆಗಿಲ್ಲ. ಈ ಒಂದು ದೃಷ್ಟಿಯನ್ನು ಜನತೆ ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಕಳೆದ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳಲ್ಲಿ ಜನತಾ ಪಕ್ಷಕ್ಕೆ ಮತ ಕೊಟ್ಟು ಜಯಶಾಲಿಯನ್ನಾಗಿ ಮಾಡಿದೆ. ಇನ್ನು ಹಳ್ಳಿಗಾಡಿನಲ್ಲಿ ವ್ಯಾಸಂಗ ಮಾಡತಕ್ಕಂಥ ಬಡಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಿಂದ ಪಠ್ಯಪುಸ್ತಕಗಳನ್ನು ಜನತಾ ಸರ್ಕಾರ ವಿತರಣೆ ಮಾಡಿತು. ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕಿಯಾದ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾ ಹೇಳಿದರು ಹಳ್ಳಿಗಳಲ್ಲಿ ಮಕ್ಕಳಿಗೆ ಕೊಟ್ಟರತಕ್ಕಂತ ಪಠ್ಯ ಪುಸ್ತಕ ಹರಿದು ಹೋದರೆ ಮತ್ತೆ ಆ ಮಕ್ಕಳು ವ್ಯಾಸಂಗ ಮಾಡುವುದಕ್ಕೆ ಪಠ್ಯಪುಸ್ತಕಗಳು ಇಲ್ಲ ಹೊಸ ಪಠ್ಯಪುಸ್ತಕಗಳನ್ನು ಕೊಂಡುಕೊಡತಕ್ಕಂಥ ನಿಯಮ ಹಾಕಿಲ್ಲವೆಂದು ಸಹ ಹೇಳಿದರು. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ರಾರಂಭಿಕವಾಗಿ ಯಾವುದಾದರೊಂದು ಅಭಿವೃದ್ಧಿ ಕೆಲಸ ಪ್ರಾರಂಭಿಸಿದರೆ ಸಾಕಷ್ಟು ತೊಂದರೆಗಳು ಬರುತ್ತವೆ. ಆ ಎಲ್ಲಾ ಕಷ್ಟ ನಿವಾರಣೆ ಮಾಡಿಕೊಂಡು ಎರಡನೇ ವರ್ಷ ಪಠ್ಯಪುಸ್ತಕಗಳ ವಿತರಣೆ ಕೆಲಸ ಸುಸೂತ್ರವಾಗಿ ನಡೆಸಿದ್ದಾರೆ. ಇನ್ನು ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಕೊಡುವ ಕಾರ್ಯಕ್ರಮ. ಇವತ್ತಿನ ದಿವಸ ನಾವೆಲ್ಲ ಮಾತನಾಡುತ್ತೇವೆ ಸಮತಾವಾದದ ಬಗ್ಗೆ, ಸಮಾಜವಾದದ ಬಗ್ಗೆ, ಆದರೆ ಅದನ್ನು ಆಚರಣೆಗೆ ಯಾರೂ ತರುತ್ತಿಲ್ಲ. ಇದನ್ನು ಮನಗಂಡು ನಮ್ಮ ಸರ್ಕಾರ ಸಮವಸ್ತ್ರಗಳನ್ನು ಶಾಲಾ ಮಕ್ಕಳಿಗೆ ಕೊಟ್ಟಿದ್ದಾರೆ. ಈ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಇನ್ನು ನೀರಾವರಿ ಯೋಜನೆಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ನೀರಾವರಿ ಯೋಜನೆಗಳಿಗೆ ನಮ್ಮ ಸರ್ಕಾರ ಹೆಚ್ಚು ಗಮನ ಕೊಟ್ಟಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಆ ಯೋಜನೆಗೆ ಕಾಂಗ್ರೆಸ್ ಸರ್ಕಾರವಿದ್ದಾಗ ೨೦–೨೫ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿಕೊಡುತ್ತಿತ್ತು. ಆದರೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸುಮಾರು ೫೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ವರ್ಷ ಇನ್ನೂ ಹೆಚ್ಚು ಹಣವನ್ನು ಒದಗಿಸಿಕೊಡುತ್ತಾರೆನ್ನುವ ನಿರೀಕ್ಷೆ ನನಗೆ ಇದೆ. ನಮ್ಮ ಭಾಗದಲ್ಲಿ ನೀರಾವರಿ ಸೌಕರ್ಯಗಳು ಇರಲಿಲ್ಲ. ಈಗ ಸ್ವಲ್ಪ ಮಟ್ಟಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದ್ದಾರೆ. ಅದಕ್ಕೆ ನಾನು ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಇನ್ನು ಕಾರ್ಮಿಕರ ಬಗ್ಗೆ ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಸರಿಯಾಗಿ ಕೆಲಸ ಆಗಿದೆ, ಕಾರ್ಮಿಕ ವಿವಾದಗಳು ಹೆಚ್ಚಿಗೆ ಆಗಲಿಲ್ಲ ಎನ್ನತಕ್ಕಾಂತದ್ದನ್ನು ಇಲ್ಲಿ ಮಾತನಾಡಿದ್ದೇವೆ. ಇದರ ಬಗ್ಗೆ ಮಾತನಾಡುವಾಗ, ಅಧ್ಯಕ್ಷರೇ, ಅಸಂಘಟಿತ ಕಾರ್ಮಿಕರ ಬಗ್ಗೆ ಹೆಚ್ಚು ಪ್ರಮಾಣದಲ್ಲಿ ಇಲ್ಲಿಯ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ ಎನ್ನತಕ್ಕಾಂತಾದ್ದು ನನ್ನದೇ ಆದ ಒಂದು ವಿಚಾರ ಇದೆ. ನನ್ನ ಜಿಲ್ಲೆಯಲ್ಲಿ ಆಳಂದ್ ತಾಲ್ಲೂಕಿನಲ್ಲಿ ಸುಮಾರು ಒಂದು ನೂರು ಜನ ಕೆಲಸ ಮಾಡುವ ಒಂದು ಫ್ಯಾಕ್ಟರಿ ಇತ್ತು. ಅಲ್ಲಿ ಬರೀ ಹೆಣ್ಣು ಮಕ್ಕಳೇ ಕೆಲಸ ಮಾಡುತ್ತಿದ್ದರು. ಆ ಹೆಣ್ಣು ಮಕ್ಕಳಿಗೆ ಯಾವುದೇ ರೀತಿಯಲ್ಲೂ ಸಹ ಸೌಲಭ್ಯಗಳನ್ನು ಆ ಫ್ಯಾಕ್ಟರಿಯವರು ಕೊಟ್ಟಿರಲಿಲ್ಲ. ಲೇಬರ್ ಇನ್ಸ್‌ಪೆಕ್ಟರ್ ಕೂಡ ಇನ್ಸ್‌ಪೆಕ್ಷನ್ ಮಾಡಿರಲಿಲ್ಲ. ಒಂದು ದಿವಸ ಆ ಫ್ಯಾಕ್ಟರಿಯ ಮಾಲೀಕ ಫ್ಯಾಕ್ಟರಿಯನ್ನು ಮುಚ್ಚಿಕೊಂಡು ಹೊರಟು ಹೋದ. ಅಲ್ಲಿ ಕೆಲಸ ಮಾಡುತ್ತಿದ್ದ ೧೦೦ ಜನರಿಗೆ ಇದ್ದಕ್ಕಿದ್ದ ಹಾಗೆ ಕೆಲಸ ಇಲ್ಲದಂತಾಯಿತು. ಅವರಿಗೆ ರಿಟ್ರೆಂಚ್ ಕಾಂಪನ್‌ಸೇಷನ್ ಇಲ್ಲ ಏನೂ ಇಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ನಾವುಗಳು ಪಟ್ಟಣಗಳಲ್ಲಿರುವ

ಫ್ಯಾಕ್ಟರಿ ನೌಕರರುಗಳ ಅಥವಾ ಸಂಘಟಿತ ನೌಕರರುಗಳ ಕೆಲಸಕ್ಕೋಸ್ಕರ ಮತ್ತು ಪಟ್ಟಣಗಳಲ್ಲಿರುವ ಫ್ಯಾಕ್ಟರಿಗಳಿಗೋಸ್ಕರ ಮಾತ್ರ ವಿಚಾರ ಮಾಡುತ್ತಿದ್ದೇವೆಯೇ ಹೊರತು ಅಸಂಘಟಿತ ಕಾರ್ಮಿಕರ ಬಗ್ಗೆ ಮತ್ತು ಅವರ ಅಟೆಂಡೆನ್ಸ್ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ವಿಚಾರ ಮಾಡುತ್ತಿಲ್ಲ. ಲೇಬರ್ ಡಿಪಾರ್ಟ್‌ಮೆಂಟಿನ ಇನ್‌ಸ್ಪೆಕ್ಟರ್‌ಗಳು ಹಾಗೂ ಆಫೀಸರ್‌ಗಳು ಸಹ ಇದರ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿಲ್ಲ. ಗುಲ್ಬರ್ಗಾ, ಬೀದರ್, ಮುಂತಾದ ಜಿಲ್ಲೆಗಳಲ್ಲಿ ಖಂಡಸಾರಿ ಫ್ಯಾಕ್ಟರಿಗಳು ಸಾಕಷ್ಟು ನಡೆಯುತ್ತವೆ. ಅಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ಮಿನಿಮಮ್ ವೇಜಸ್ ಕೂಡ ಕೊಡುತ್ತಿಲ್ಲ. ಈ ರೀತಿ ಬಹಳ ಮಂದಿಗೆ ಅನ್ಯಾಯವಾಗುತ್ತಿದೆ. ಅಂಥ ಕಡೆ ಲೇಬರ್ ಇನ್‌ಸ್ಪೆಕ್ಟರ್ ಆಗಲೀ ಲೇಬರ್ ಆಫೀಸರ್ ಆಗಲಿ ಚೆಕ್ ಮಾಡುತ್ತಿಲ್ಲ. ಲೇಬರ್ ಡಿಪಾರ್ಟ್‌ಮೆಂಟ್‌ನ್ನು ನಾವು ಚುರುಕು ಮಾಡಬೇಕಾಗುತ್ತವೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇದೂ ಅಲ್ಲದೆ, ಬೇಸಾಯದ ಬಗ್ಗೆ, ಆ ಕಡೆಯ ಪಕ್ಷದವರೂ ಕೂಡ ಇದನ್ನು ಒಳ್ಳೆಯ ಕೆಲಸವೆಂದು ಹೇಳಿದ್ದಾರೆ. ಒಣ ಬೇಸಾಯವನ್ನು ಅಭಿವೃದ್ಧಿ ಮಾಡುತ್ತಿರುವುದರಿಂದ ನಮ್ಮ ಭಾಗದ ಜನರಿಗೆ ಅನುಕೂಲವಾಗುತ್ತದೆ. ನಮ್ಮ ಭಾಗದಲ್ಲಿ ಮಳೆಯು ಕಡಿಮೆ ಬರುವುದರಿಂದ ಯಾವಾಗಲೂ ಬರಗಾಲ ಪರಿಸ್ಥಿತಿಯನ್ನು ನಾವು ಎದುರಿಸುತ್ತಿರುತ್ತೇವೆ. ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ ಜಿಲ್ಲೆಗಳು ಒಣ ಭೂಮಿಯನ್ನು ಹೊಂದಿವೆ. ಈ ಒಣ ಭೂಮಿಯನ್ನು ಸರ್ಕಾರದವರು ಅಭಿವೃದ್ಧಿಪಡಿಸುವುದಕ್ಕೆ ಯೋಜನೆಗಳನ್ನು ಹಾಕಿಕೊಂಡಿದೆ. ಈ ಯೋಜನೆಗೆ ಕೇಂದ್ರ ಸರ್ಕಾರವು ಸಹ ಸಹಾಯ ಮಾಡಬೇಕು. ಕೇಂದ್ರ ಸರ್ಕಾರದ ಸಹಾಯ ಬರದಿದ್ದರೆ ಸ್ವಲ್ಪ ಕಷ್ಟವಾಗುತ್ತದೆ. ಈಗಾಗಲೇ ಈ ಯೋಜನೆಗೆ ರಾಜ್ಯ ಸರ್ಕಾರವು ಎನ್. ಆರ್. ಇ. ಪಿ. ಹಾಗೂ ಆರ್. ಎಲ್. ಇ. ಜಿ. ಪಿ. ಯೋಜನೆಯಿಂದ ಹಣವನ್ನು ಕೊಟ್ಟಿದೆ, ಇದರ ಜೊತೆಗೆ ಕೇಂದ್ರದವರೂ ಹಣವನ್ನು ಕೊಟ್ಟರೆ ಇನ್ನೂ ಹೆಚ್ಚು ಚುರುಕಾಗಿ ಕೆಲಸವನ್ನು ಮಾಡಿಸಬಹುದು. ಹಣ ಬರದೇ ಇದ್ದರೆ ಒಳ್ಳೆಯ ಅಭಿವೃದ್ಧಿ ಕೆಲಸಗಳು ಆಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳುತ್ತಿದ್ದೇನೆ. ಮೊನ್ನೆ ದಿವಸ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ, ಏನೆಂದರೆ, ನಮ್ಮ ಕಡೆಯ ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್. ರಾಯಚೂರು, ಬಳ್ಳಾರಿಗಳಲ್ಲಿ ತೊಗರಿಬೇಳೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ತೊಗರಿ ಬೇಳೆ ಬೆಳೆಯುವುದಕ್ಕೆ ಈ ಜಿಲ್ಲೆಗಳು ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿವೆ. ಈ ತೊಗರಿ ಬೇಳೆಗೆ ಮಾನ್ಯತೆ ಸಿಕ್ಕಿ ಒಳ್ಳೆಯ ಬೆಲೆ ಸಿಗುವಂತಾಗಬೇಕು. ತೊಗರಿ ಬೆಳೆಗೆ ಸಿಂಪಡಿಸುವುದಕ್ಕೆ ಸರಿಯಾದ ಔಷಧಗಳು ಇವತ್ತಿನ ದಿವಸ ರೈತರಿಗೆ ಸಿಗುತ್ತಿಲ್ಲ, ತೊಗರಿ ಬೇಳೆ ಬೆಳೆಯತಕ್ಕ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ ಇದರಿಂದ ಸಾಕಷ್ಟು ರೈತರು ಹಾಳಾಗುತ್ತಿದ್ದಾರೆ. ಅದಕ್ಕೋಸ್ಕರ ಒಂದು ರಾಜ್ಯದಲ್ಲಿ ಮಂಡಳಿಯನ್ನು ರಚಿಸಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಬೇಳೆ ಕಾಳುಗಳ ಅಭಿವೃದ್ಧಿಗೆ ಒಂದು ಮಂಡಳಿ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಯೋಜನೆ ಮಾಡಿದ್ದು, ಆ ಯೋಜನೆಯ ಕರಡನ್ನು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅಷ್ಟೇ ಅಲ್ಲ ಬೇಳೆಕಾಳುಗಳನ್ನು ಪರಿಷ್ಕರಣ ಮಾಡುವಂಥ ಸಂಸ್ಥೆಗಳನ್ನು ಸ್ಥಾಪನೆ ಮಾಡಬೇಕಾದರೆ ಒಂದು ಯೂನಿಟ್‌ಗೆ ೩೭ ಲಕ್ಷ ರೂಪಾಯಿಗಳು ಬೇಕಾಗುತ್ತವೆ ಇಂಥ ೫ ಯೂನಿಟ್‌ಗಳಿಗೆ ಹಣವನ್ನು ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರವು ಹಣದನ್ನು ಇಟ್ಟಿದೆ. ದುರ್ದೈವದಿಂದ ರಾಜ್ಯ ಸರ್ಕಾರವು ಆ ಹಣವನ್ನು ವಿನಿಯೋಗ ಮಾಡಲಿಕ್ಕೆ ಅಸಮರ್ಥವಾಗಿದೆ. ಆದ್ದರಿಂದ ಮಾನ್ಯ ಕಾಂತಾರವರು ಸಂಬಂಧಪಟ್ಟ ಮಂತ್ರಿಯವರ ಮನ ಒಲಿಸಿ ಇದನ್ನು ಮಾಡಿಸಬೇಕು.

ಶ್ರೀ ಎಸ್. ಕೆ. ಕಾಂತಾ.—ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕಾಗಿ ಕೇಂದ್ರ ಸರಕಾರಕ್ಕೆ ಕೇಳಿ ವಿಚಾರ ಮಾಡುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ. ಕೇಂದ್ರ ಸರಕಾರದವರು ಮಾಡಿದ್ದಾರೆ. ಅವರು ಒಂದು ಸರ್ವೆ ಮಾಡಿ, ಗುಲ್ಬರ್ಗದಲ್ಲಿ ಸಂಶೋಧನ ಕೇಂದ್ರವನ್ನು ಮಾಡಬೇಕೆಂದು ಕೂಡ ವಿಚಾರವನ್ನು ಇಟ್ಟಿದ್ದರು. ನಾನು ಕೂಡ ಆ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸರಕಾರದವರು ಸೂಕ್ತ ಉತ್ತರವನ್ನು ಕೊಟ್ಟಿದ್ದಾರೆ. ಅಂತಹ ಒಂದು ಮಹಾಮಂಡಳವನ್ನು ರಚಿಸಿದರೆ, ರೈತರಿಗೆ ಒಳ್ಳೆಯ ಬೆಲೆ ಸಿಕ್ಕರೆ, ರೈತ ಕಾರ್ಮಿಕರಿಗೆ ಬಹಳ ಒಳ್ಳೆಯದಾಗುತ್ತದೆ, ಕಾರ್ಮಿಕರಿಗೂ ಹೆಚ್ಚು ಕೂಲಿ ಸಿಗುತ್ತದೆ. ಇದನ್ನು ಮಾಡದೇ ಹೋದರೆ ರೈತ ಕಾರ್ಮಿಕರು ಸಾಯುತ್ತಾರೆ. ಇದಕ್ಕೆಲ್ಲಾ ಕೇಂದ್ರ ಸರಕಾರದವರ ಸಹಕಾರ ಬೇಕು. ಅವರ ಸಹಕಾರ ಇಲ್ಲದೇನೆ ಇದನ್ನು ರಚನೆ ಮಾಡಬೇಕಾದರೆ ಕಷ್ಟವಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಕೇಂದ್ರದವರು ಕೊಟ್ಟಿದ್ದನ್ನು ನೀವು ಮಾಡಿದರೆ ಸಾಕು. ಆದರೆ ಮಾಡಬೇಕು ಅಷ್ಟೆ......

ಶ್ರೀ ಎಸ್. ಕೆ. ಕಾಂತಾ.—ಇನ್ನು ಒಣ ಬೇಸಾಯದ ಬಗ್ಗೆ ಹೇಳುವುದಾದರೆ, ಕಮರ್ಷಿಯಲ್ ಕ್ರಾಪ್ ಏನಿದೆ, ತೊಗರಿ ಬೇಳೆ, ಎಣ್ಣೆಕಾಳು, ಇವುಗಳು ಹೆಚ್ಚಾಗಿ ಗುಲ್ಬರ್ಗ, ರಾಯಚೂರು, ಬೀದರ್—ಈ ಪ್ರದೇಶಗಳಲ್ಲಿ ಬೆಳೆಯುತ್ತಿದ್ದಾರೆ. ಆದುದರಿಂದ ಆ ರೈತರ, ರೈತ ಕಾರ್ಮಿಕರ ಹಿತರಕ್ಷಣೆಗಾಗಿ ಸರಕಾರದವರು ಒಂದು ಮಹಾಮಂಡಳವನ್ನು ರಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ೧೨ನೇ ಖಂಡದಲ್ಲಿ ಉದ್ಯಮಗಳಿಗೆ ವಿದ್ಯುತ್‌ಚ್ಛಕ್ತಿ ಕಡಿತದ ಬಗ್ಗೆ ಹೇಳಿದ್ದಾರೆ. ಯಾವ ರೀತಿಯಿಂದು ನಾನು ಅದಕ್ಕೆ ವಿವರಣೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ದೊಡ್ಡ ಪ್ರಮಾಣದ ಉದ್ದಿಮೆಗಳು ಬರಬಾರದು ಎಂಬುದು ಸರಕಾರದ ಉದ್ದೇಶ ಇದೆ. ಸಣ್ಣ ಪ್ರಮಾಣದ ಕೈಗಾರಿಕೆಗಳು ಹೆಚ್ಚಿಗೆ ಆಗಬೇಕೆಂದು ಧೋರಣೆ ಇಟ್ಟುಕೊಂಡಿದ್ದಾರೆ ಆದರೆ ಈ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹಲವಾರು ಸಮಸ್ಯೆಗಳು ಇವೆ, ಅವುಗಳಲ್ಲಿ ದೊಡ್ಡ ಸಮಸ್ಯೆ ಎಂದರೆ ಮಾರ್ಕೆಟಿಂಗ್ ಸಮಸ್ಯೆ. ಉದಾಹರಣೆಗೆ ಗುಲ್ಬರ್ಗ ಜಿಲ್ಲೆಯಲ್ಲಿ ಹಲವು ಮಿನಿ ಸಿಮೆಂಟ್ ಪ್ಲಾಂಟ್ಸ್ ಇವೆ. ಇಂತಹ ಮಿನಿ ಪ್ಲಾಂಟ್ಸ್ ಬಂದ ಮೇಲೆ, ದೊಡ್ಡ ಪ್ರಮಾಣದ ಪ್ಲಾಂಟ್ಸ್ ಕೂಡ ಬರುತ್ತವೆ. ಅಲ್ಲಿ ವಾಸವಿ ಮತ್ತು ರಾಜೇಶ್ವರಿ ಎಂಬ ದೊಡ್ಡ ಪ್ಲಾಂಟ್ಸ್‌ಗಳು ಈಗ ಬಂದಿವೆ. ದೊಡ್ಡ ಪ್ಲಾಂಟ್‌ನಲ್ಲಿ ದಿವಸಕ್ಕೆ ಒಂದು ಸಾವಿರ ಐದು ನೂರು ಟನ್ ತನಕ ಉತ್ಪಾದನೆಯನ್ನು ೨೦೦ ಜನ ಕೆಲಸಗಾರರನ್ನು ನೇಮಿಸಿಕೊಂಡು ಮಾಡುತ್ತಾರೆ. ಆದರೆ ಮಿನಿ ಪ್ಲಾಂಟ್‌ನಲ್ಲಿ ಅದೇ ಕೆಲಸಕ್ಕೆ ೩೦೦ ಜನ ಕೆಲಸಗಾರರು ಬೇಕಾಗುತ್ತಾರೆ. ಅದಕ್ಕೆ ಒಂದು ಅಥವಾ ಎರಡು ಕೋಟಿ ರೂಪಾಯಿಗಳ ವೆಚ್ಚ ಬರುತ್ತದೆ. ದೊಡ್ಡ ಪ್ರಮಾಣದ ಫ್ಯಾಕ್ಟರಿಯವರೊಂದಿಗೆ ಇವರು ಕಾಂಪಿಟ್ ಮಾಡಬೇಕಾಗುತ್ತದೆ. ಸಣ್ಣ ಪ್ಲಾಂಟ್‌ನವರು ನೂರಾರು ಸಮಸ್ಯೆಗಳೊಂದಿಗೆ ಬದುಕ ಬೇಕಾಗುತ್ತದೆ. ಆರ್ಥಿಕ ಶಕ್ತಿಯೂ ಇವರಲ್ಲಿ ಕಡಿಮೆ ಇರುತ್ತದೆ. ಆದುದರಿಂದ ಇದಕ್ಕೆ ಒಂದು ಸಮಸ್ಯೆ ಪರಿಹಾರ ಅಂದರೆ, ದೊಡ್ಡ ಪ್ರಮಾಣದವರಿಗೆ ಕೊಡುತ್ತಿರುವ ವಿದ್ಯುತ್ ಪ್ರಮಾಣವನ್ನು ಕಡಿಮೆ ಮಾಡಿ, ಸಣ್ಣ ಪ್ಲಾಂಟ್‌ನವರಿಗೆ ಹೆಚ್ಚು ವಿದ್ಯುತ್‌ಚ್ಛಕ್ತಿಯನ್ನು ಒದಗಿಸಿ ಪ್ರೋತ್ಸಾಹಿಸಬೇಕು. ಉತ್ಪಾದನೆ ಸಣ್ಣ ಪ್ಲಾಂಟ್‌ಗಳಲ್ಲಿ ಹೆಚ್ಚುವಂತೆ ಮಾಡಬೇಕು. ಈ ದಿವಸಗಳಲ್ಲಿ ಅಷ್ಟು ಚೆನ್ನಾಗಿ ನಡೆಯದಿರುವ ಮಿನಿ ಪ್ಲಾಂಟ್‌ಗಳಿಗೆ ಹೆಚ್ಚಿಗೆ ಪ್ರೋತ್ಸಾಹವನ್ನು ಎಲ್ಲಾ ರೀತಿಯಲ್ಲಿಯೂ ಕೊಡುವ ಹಾಗೆ ಗಮನಹರಿಸಬೇಕು.

ಇವೊತ್ತಿನ ದಿವಸ ಸಕ್ಕರೆ ಕಾರ್ಖಾನೆಗಳಲ್ಲಿ, ಮತ್ತು ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ ಹೆಚ್ಚಿಗೆ ಜನ ಕೆಲಸ ಮಾಡುತ್ತಾರೆ. ಟೆಕ್ಸ್‌ಟೈಲ್ ಮಿಲ್‌ಗಳು ಇವೊತ್ತಿನ ದಿವಸ ಸಂಪೂರ್ಣವಾಗಿ ನಷ್ಟದಲ್ಲಿದ್ದಾವೆ. ಈ ಫ್ಯಾಕ್ಟರಿಗಳಲ್ಲಿ ವಿದ್ಯುಚ್ಛಕ್ತಿ ಕೊರತೆಯಿಂದಾಗಿ ಲೇ-ಆಫ್ ಆಗುತ್ತಾ ಇದೆ. ಆ ದೃಷ್ಟಿಯಿಂದ ಅಂತಹ ಕಡೆಗಳಲ್ಲಿ ಲೇ-ಆಫ್ ಆಗದ ಹಾಗೆ ನೋಡಿಕೊಂಡು, ಅವರಿಗೆ ವಿದ್ಯುಚ್ಛಕ್ತಿ ಇತ್ಯಾದಿಗಳನ್ನು ಸೂಕ್ತ ಪ್ರಮಾಣದಲ್ಲಿ ಒದಗಿಸಿ ಹೆಚ್ಚಿಗೆ ಕೆಲಸವಾಗುವಂತೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ.—ಇನ್ನು ೧೪ನೇ ಪುಟದಲ್ಲಿ ಸರ್ಕಾರಿ ನೌಕರರ ಸಂಬಳ ಶ್ರೇಣಿಗಳ ಬಗ್ಗೆ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಬಹಳ ಒಳ್ಳೆಯದು. ಕೆಲಸ ಮಾಡುವ ಜನರಿಗೆ ಹಣ ಸಿಗಬೇಕು, ಅವರಿಗೆ ಹೆಚ್ಚಿನ ಲಾಭವಾಗುವಂತಿರಬೇಕು ಎಂಬುದು ನಮಗೂ ಗೊತ್ತು ನಿಮಗೂ ಗೊತ್ತು. ಅಧ್ಯಕ್ಷರೇ ನಾನು ಒಂದು ಮಾತನ್ನು ಹೇಳಬೇಕೆಂದಿದ್ದೇನೆ: ಫ್ಯಾಕ್ಟರಿಗಳಲ್ಲಾಗಲೀ ಬೇರೆ ಯಾವುದೇ ಉದ್ಯಮದಲ್ಲಾಗಲೀ ಸಂಬಳ ಏರಿಸುವಾಗ ನೌಕರರಿಗಿರುವ ವರ್ಕ್‌ಲೋಡ್ ಅನ್ನು ನೋಡುತ್ತಾರೆ. ನಾವು ಮೂರನೇ ಪೇ ಕಮಿಷನ್ ಶಿಫಾರಸ್ಸನ್ನು ನಾವು ಒಪ್ಪಿದ್ದೇವೆ, ಬಹಳ ಸಂತೋಷ. ಆದರೆ ಸರ್ಕಾರಿ ನೌಕರರ ವರ್ಕ್‌ಲೋಡ್ ನೋಡಬೇಕಾದ್ದು ಅವಶ್ಯಕವಿದೆ. ಇವತ್ತು ಸರ್ಕಾರಿ ಕಚೇರಿಗಳಿಗೆ ಫೈಲ್ ಹೋದರೆ ರಿಪ್ಲೈ ಬರಬೇಕಾದರೆ ೬ ತಿಂಗಳು ಬೇಕು. ಇದನ್ನೆಲ್ಲ ತಪ್ಪಿಸಬೇಕಾದರೆ ಪೇ ಕಮಿಷನ್ ಅನ್ನು ನೇಮಿಸಿದಂತೆಯೇ ಸಿಬ್ಬಂದಿಯ ಕೆಲಸ ಕಾರ್ಯಗಳು ಎಷ್ಟಿವೆ ಎಂಬ ಬಗ್ಗೆ ಒಂದು ಕಮಿಷನ್ ಅನ್ನು ನೇಮಿಸಬೇಕು. ಏಕೆಂದರೆ ವರ್ಕ್‌ಲೋಡ್ ಕಡಿಮೆ ಇದ್ದರೆ ಫ್ಯಾಕ್ಟರಿಗಳಲ್ಲಿ ಪ್ರಶ್ನೆ ಏಳುವುದಿಲ್ಲ, ಇಲ್ಲಿ ಏರಿಕೆ ನಡೆದೇ ಇದೆ. ಡಿಯರ್ನೆಸ್ ಅಲೋಯನ್ಸ್ ಏರಿಕೆ ಬಗ್ಗೆ ನನ್ನ ಆಕ್ಷೇಪವಿಲ್ಲ.

ಉದಾಹರಣೆಗೆ ಪೋಲಿಸ್ ಇಲಾಖೆ ತೆಗೆದುಕೊಳ್ಳಿ. ಪೋಲೀಸ್ ಇಲಾಖೆಯಲ್ಲಿ ದಿನಕ್ಕೆ ೧೬-೧೭ ತಾಸು ಕೆಲಸ ಮಾಡಬೇಕು. ಅಷ್ಟಾದರೂ ಕೂಡ ಅವರಿಗೆ ಕೊಡುವ ಸಂಬಳ ತುಂಬಾ ಕಡಿಮೆ ಇದೆ. ಸಬ್ ಇನ್ಸ್‌ಪೆಕ್ಟರ್‌ಗೆ ಕೊಟ್ಟಿರುವ ಪೇ ಸ್ಕೇಲನ್ನು ತಹಸೀಲ್ದಾರ್, ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್‌ಗಳ ಸ್ಕೇಲ್‌ಗೆ ಹೋಲಿಸಿ ನೋಡಿದರೆ ಎಷ್ಟೊಂದು ತಾರತಮ್ಯ ಇದೆ ಎಂದು ಗೊತ್ತಾಗುತ್ತದೆ. ಪೋಲೀಸರೂ ಮನುಷ್ಯರೇ. ಅದೇ ಫ್ಯಾಕ್ಟರಿಗಳಲ್ಲಿ ನೋಡಿ: ಜಾಸ್ತಿ ಕೆಲಸ ಮಾಡುವ ಕಾರ್ಮಿಕನಿಗೆ

ಇನ್ಸೆಂಟಿವ್ ಎಂದು ಸಿಗುತ್ತದೆ. ಸರ್ಕಾರ ಏನು ಕೊಡುತ್ತದೆ ? ಸರ್ಕಾರಿ ಮುದ್ರಣಾಲಯದಲ್ಲಿ ವರ್ಕ್‌ಲೋಡೇ ಇಲ್ಲ. ಬರೀ ೩೦-೪೦ ಪರ್ಸೆಂಟ್ ಮಾತ್ರ ಕೆಲಸ ಆಗುತ್ತದೆ. ಎಫಿಶಿಯನ್ಸಿ ಕಾಡು ಸೇರಿದೆ, ಆದ್ದರಿಂದ ಎಷ್ಟೆಷ್ಟು ಕೆಲಸ ಮಾಡುವ ಯಾವ್ಯಾವ ನೌಕರರಿಗೆ ಎಷ್ಟೆಷ್ಟು ಪೇ ಫಿಕ್ಸ್ ಮಾಡಬೇಕು ಎಂಬ ಬಗ್ಗೆ ಒಂದು ಸಮಿತಿಯನ್ನು ಸರ್ಕಾರ ನೇಮಿಸಲಿ ಎಂದು ನಾನು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಕಡೇ ವಿಚಾರ. ನಗರ ಪ್ರದೇಶಗಳಲ್ಲಿ ಮುನಿಸಿಪಾಲಿಟಿ ನೌಕರರು ಸ್ಟ್ರೈಕ್ ಮಾಡುವುದನ್ನು ನಾವು ದಿನನಿತ್ಯ ನೋಡುತ್ತಿರುತ್ತೇವೆ. ಕಾರಣ ಅವರಿಗೆ ಸಂಬಳವೇ ಸಿಗುತ್ತಿಲ್ಲ ಎಂಬುದು. ಮುನಿಸಿಪಾಲಿಟಿಗಳಿಗಿರುವ ಗ್ರಾಂಟ್ ಸಂಬಳಕ್ಕೆ ಸಾಕಾಗುವುದಿಲ್ಲ ಎಂಬುದು ನಮಗೆಲ್ಲ ಗೊತ್ತಿರುವ ವಿಷಯ. ನೆರೆರಾಜ್ಯಗಳಲ್ಲಿ ಅಕ್ಟ್ರಾಯ್ ಅವರಿಗೇ ಉಳಿಯುವುದರಿಂದ ಅಲ್ಲೆಲ್ಲ ಇಷ್ಟು ಕಾರ್ಮಿಕ ಅಶಾಂತಿ ಇಲ್ಲ. ಆದರೆ ನಮ್ಮಲ್ಲಿ ಅಕ್ಟ್ರಾಯ್ ಕಿತ್ತುಹಾಕಿದ್ದೇವೆ. ಆದ್ದರಿಂದ ಮತ್ತೆ ಆಕ್ಟ್ರಾಯ್ ಸೌಲಭ್ಯವನ್ನು ಮುನಿಸಿಪಾಲಿಟಿಗಳಿಗೆ ಬಿಟ್ಟುಕೊಡುವುದರಿಂದ ಅವುಗಳು ರೋಡ್‌ಗಳ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ನೀರುಪೂರೈಕೆ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ. ಉದಾಹರಣೆಗೆ ಗುಲ್ಬರ್ಗ ಮುನಿಸಿಪಾಲಿಟಿ ಬಗ್ಗೆ ಹೇಳುತ್ತೇನೆ: ಅಲ್ಲಿ ಒಂದು ನಲ್ಲಿಗೆ ೫ ರೂ. ಟ್ಯಾಕ್ಸ್ ಕಲೆಕ್ಟ್ ಮಾಡುತ್ತಾರೆ. ಟೋಟಲ್ ಕಲೆಕ್ಷನ್ ೧೪ ಸಾವಿರ ಆಗುತ್ತದೆ. ಅಂದರೆ ಎಲ್ಲ ಸೇರಿ ಒಟ್ಟಿನಲ್ಲಿ ೭-೮ ಲಕ್ಷ ಆದಾಯ ಬರುತ್ತದೆ. ಆದರೆ ಟೋಟಲ್ ಎಕ್ಸ್‌ಪೆಂಡೀಚರ್ ೪೦ ಲಕ್ಷ ಆಗುತ್ತದೆ. ಅಲ್ಲಿ ಸಂಬಳ ಕೊಡಲಿಕ್ಕೆ ಹಣ ಇಲ್ಲ. ಇದರ ಬಗ್ಗೆ ಕೂಡ ಯಾವ ರೀತಿ ಮುನಿಸಿಪಾಲಿಟಿಗಳು ಆದಾಯ ರೂಢಿಸಿಕೊಳ್ಳಬೇಕು, ಹೇಗೆ ಕೆಲಸ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡುವುದು ಅತಿ ಅವಶ್ಯಕ. ಬೆಂಗಳೂರಿನಲ್ಲಿ ಪ್ರಾಪರ್ಟಿ ಟ್ಯಾಕ್ಸ್ ಏರಿಸಿದರೆ ಪ್ರಾಪರ್ಟಿ ಓನರ್ಸ್ ಜಗಳ ಮಾಡುತ್ತಾರೆ. ಟ್ಯಾಕ್ಸ್‌ಗಳಿಂದ ಮಾತ್ರ ನಗರಸಭೆಗಳು ಮತ್ತು ಮಹಾನಗರ ಸಭೆಗಳನ್ನು ನಡೆಸಬೇಕಾಗುತ್ತದೆ ಆದುದರಿಂದಾಗಿ ಅದನ್ನು ಬಿಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಸರಕಾರದವರಲ್ಲಿ ಮನವಿ ಮಾಡುವುದೇನೆಂದರೆ ಯಾವುದೇ ರೀತಿಯಿಂದ ಜನಗಳಿಗೆ ಅನ್ಯಾಯವಾಗಬಾರದು ಹಾಗೂ ಅವರಿಗೆ ಸಿಗತಕ್ಕಂತಹ ಸೌಲಭ್ಯಗಳು ಸಿಗಬೇಕು ಮತ್ತು ಕಾರ್ಮಿಕರಿಗೆ ಸರಿಯಾದ ಸಂಬಳ ಸಿಗಬೇಕು ಮತ್ತು ನಗರಸಭೆಗಳಿಗೆ ಮಹಾನಗರ ಸಭೆಗಳಿಗೆ ಹೆಚ್ಚಿನ ಗ್ರಾಂಟನ್ನು ಕೊಡಬೇಕು. ನಮ್ಮ ಸರಕಾರ ಹಿಂದಿನ ವರ್ಷ ಮಾಡಿರತಕ್ಕಂತಹ ಕೆಲಸವನ್ನು ಸಮರ್ಥನೆ ಮಾಡುತ್ತಾ ಮುಂದೆ ಕೂಡ ಇದೇ ರೀತಿ ಕೆಲಸ ಮಾಡುತ್ತಾರೆಂಬ ದೃಷ್ಟಿಯನ್ನು ಇಟ್ಟುಕೊಂಡು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರಿಗೆ ವಂದನೆಗಳು.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಈ ಜನತಾ ಸರಕಾರದವರು ರಾಜ್ಯಪಾಲರ ಭಾಷಣದ ಮೇಲೆ ಭಾಷಣ ಮಾಡಲು ಈ ಸದನದಲ್ಲಿ ಇಬ್ಬರು ಒಳ್ಳೆಯ ಮುಖವಾಡ ಭಾಷಣಕಾರರನ್ನಾಗಿ ನೇಮಿಸಿದ್ದಾರೆ, ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. But, they have argued a bad case. ರಾಜ್ಯಾಂಗದ ಪ್ರಕಾರ ಭಾಷಣದ ಉದ್ದೇಶ ಮತ್ತು ಗುರಿಯ ಬಗ್ಗೆ ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಮಾನ್ಯ ಎಂ.ಪಿ. ಪ್ರಕಾಶ್‌ರವರು ಬಹಳ ಚೆನ್ನಾಗಿ ಮಾತನಾಡಿದರು, ವಿದ್ವತ್‌ಪೂರ್ಣವಾಗಿ ಮಾತನಾಡಿದರು ಅವರಿಗೆ ಇತಿಹಾಸದಲ್ಲಿ ಶ್ರದ್ಧೆ ಇದೆ, ಅದನ್ನು ತಮ್ಮ ಭಾಷಣದಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಎಂ.ಪಿ. ಪ್ರಕಾಶ್‌ರವರ ಭಾಷಣದ ಮೇಲೆ, ಶ್ರೀ ರಾಮಯ್ಯನವರ ಭಾಷಣದ ಮೇಲೆ ಮಾತನಾಡುತ್ತೀರೋ ಇಲ್ಲವೇ ರಾಜ್ಯಪಾಲರ ಭಾಷಣದ ಮೇಲೆ ಮಾಡುತ್ತಿರುವ ಭಾಷಣವೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಉಪಾಧ್ಯಕ್ಷರೇ ಅವರೇ ಮುಖ್ಯ. They are the spokesmen of the Government. I would like to talk to them first before I go to other points. ರಾಮಯ್ಯನವರೂ ಕೂಡ ಚೆನ್ನಾಗಿ ಮಾತನಾಡಿದ್ದಾರೆ ಅಷ್ಟೇ ಕಾಮೆಂಟ್ಸ್ ಇಟ್ಟುಕೊಂಡು ಮಾತನಾಡಿದ್ದಾರೆ, ಶ್ರೀ ಎಂ. ಪಿ. ಪ್ರಕಾಶ್‌ರವರು ಮಾತನಾಡುವಾಗ ಒಳ್ಳೊಳ್ಳೇ ಪುಸ್ತಕಗಳನ್ನು ಓದಿದ್ದಾರೆ, ಅವುಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಜನತಾ ಪಕ್ಷದವರ ಕೆಲಸಗಳನ್ನು ಪ್ರಸ್ತಾವನೆ ಮಾಡಿದ್ದಾರೆ, ಚೆನ್ನಾಗಿ ಮಾತನಾಡಿದ್ದಾರೆ, ಏನೇನು ನಿದರ್ಶನಗಳನ್ನು ಹೇಳಿದ್ದಾರೆ ಅವು ಜನತಾ ಪಕ್ಷದ ಕಾರ್ಯಕ್ರಮಗಳೇನಿವೆ ಅದಕ್ಕೆ ಒಂದೂ ಸಂಬಂಧವಿಲ್ಲ. ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಾ ಇಂಗ್ಲೆಂಡ್‌ನಲ್ಲಿ ನಡೆಸತಕ್ಕಂತಹ ಒಂದು ನಿದರ್ಶನವನ್ನು ಉದಾಹರಣೆ ಮಾಡಿ ಹೇಳಿದ್ದಾರೆ ಅದು ಮಾತ್ರ ಅನ್ವಯಿಸುತ್ತದೆ.

೧೬ನೇ ಶತಮಾನದಲ್ಲಿ ಲಾಯರ್‌ಗಳು ವಾದ ಮಾಡುವಾಗ ಶಕ್ತಿ ಪ್ರದರ್ಶನ ಮಾಡಿ ವಾದ ಮಾಡುತ್ತಿದ್ದರು. ಯಾರು ಹೆಚ್ಚು ಶಕ್ತಿ ಪ್ರದರ್ಶನ ಮಾಡುತ್ತಿದ್ದರು, ಅದರ ಮೇಲೆ ನ್ಯಾಯಾಧೀಶರು ತೀರ್ಪು ಕೊಡುತ್ತಿದ್ದರು. ಅದರ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ. ೧೬ನೇ ಶತಮಾನದ ಬಗ್ಗೆ ಮಾನ್ಯ ಪ್ರಕಾಶ್‌ರವರು ಹೇಳಿದ್ದಾರೆ. ಅದನ್ನು ನಡೆಸುತ್ತಿದ್ದಾರೆ ಇದು ಸ್ಪಷ್ಟವಾಗಿರತಕ್ಕಂಥಾದ್ದು. ನಮ್ಮ ಕಡೆಯಿಂದ ಸದಸ್ಯರು ಮಾತನಾಡುವವರಿದ್ದಾರೆ ಇನ್ನು ಕೆಲವರು ಮಾತನಾಡಿದ್ದಾರೆ. ಪತ್ರಿಕೆಗಳಲ್ಲಿ ಹೇಳಿಕೆಗಳನ್ನೂ ಕೊಟ್ಟಿದ್ದಾರೆ ಆ ಹೇಳಿಕೆ ಪ್ರಕಾರ ಮೊನ್ನೆ ನಡೆದಂತಹ ಚುನಾವಣೆಯಲ್ಲಿ ಶಕ್ತಿ ಪ್ರದರ್ಶನವನ್ನು ಬಹಳ ಚೆನ್ನಾಗಿ ಮಾಡಿದ್ದೀರಿ, ಅದನ್ನು ಮಾಡದೇ ಹೋಗಿದ್ದರೆ ಜನತಾ ಪಕ್ಷದವರು ಗೆಲ್ಲತಕ್ಕಂತಹ ಪ್ರಶ್ನೆಯೇ ಬರುತ್ತಿರಲಿಲ್ಲ. ಜನಗಳ ಹತ್ತಿರ ಶಕ್ತಿ ಪ್ರದರ್ಶನ ಮಾಡಿ ನೀವು ಸ್ವಲ್ಪ ಮುಂದೆ ಹೋಗತಕ್ಕಂತಹ ಪ್ರಯತ್ನ ಮಾಡಿದ್ದೀರಿ. ಯಾರ್ಯಾರು ಮಹಾ ಪುರುಷರು ಹಿಂದೆ ಇದ್ದರು ನಮ್ಮ ದೃಷ್ಟಿಯಲ್ಲಿ, ನಿಮ್ಮ ದೃಷ್ಟಿಯಲ್ಲಿ ಅವರ ವಿಚಾರಗಳನ್ನು ನಾವು ಇಲ್ಲಿ ಹೇಳಿ ಅದು ಸರಿ ಎಂದು ಹೇಳಿದರೆ, ನಂಬಲಿಕ್ಕೆ ತಯಾರಿಲ್ಲ. ಹಿಂದಿನ ಮಾತುಗಳು ಹಿಂದೆ, ಅದು ಆ ಕಾಲಕ್ಕೆ ಸಂಬಂಧಪಟ್ಟಿರತಕ್ಕಂತಹ ಜನಗಳಿಗೆ ಸಂಬಂಧಪಟ್ಟಿದ್ದು, ನಾವು ಅನುಸರಿಸತಕ್ಕಂತಹ ಸಮಯದಲ್ಲಿ ಈಗಿರತಕ್ಕಂತಹವರಿಗೆ ಅದು ಅನ್ವಯಿಸುವುದಿಲ್ಲ, the thoughts of ancient men are not relevant to the present day society. These talks are relevant to those people who speak about those things. ಆ ಕಾಲಕ್ಕೆ ಇರಬಹುದು, ಈ ಕಾಲಕ್ಕೆ ಇರಬಹುದು. ಮಾನ್ಯ ಜೆ. ಕೃಷ್ಣಮೂರ್ತಿಯವರು ಒಂದು ಮಾತನ್ನು ಹೇಳಿದ್ದರು ಅದನ್ನು ತಾವೂ ಕೂಡ ಕೇಳಿರಬಹುದು, ಇವರಿಬ್ಬರಿಗೂ ಹೇಳುತ್ತಿದ್ದೇನೆ. ಈಗಿನ ಕಾಲದಲ್ಲಿ ನಮ್ಮದೇನು ವಿಚಾರಗಳು ಇವೆ, ಈ ವಿಚಾರಗಳು ನಮ್ಮದೇ ಆಗಿದೆ, ಬೇರೊಬ್ಬರ ವಿಚಾರ ಏನಿದೆ ಅದು ಅವರದು, ಅವರದ್ದೇ ಆದ ವಿಚಾರವಾದ ಅದನ್ನು ನಾವು ಅನುಕರಣೆ ಮಾಡುವುದು ಕೂಡದು. ನಮ್ಮ ವಿಚಾರಕ್ಕೆ ತಕ್ಕಂತಹ ಮತ್ತು ನಮ್ಮ ಸಮಾಜಕ್ಕೆ ತಕ್ಕಂತಹ ನಮ್ಮ ಅಭಿಪ್ರಾಯಗಳನ್ನು ರೂಢಿಸಿಕೊಂಡು ಮುಂದೆ ಹೋದರೆ ಈ ಸಮಾಜ ಬೆಳವಣಿಗೆಯಾಗುತ್ತದೆ ಎಂದು ಶ್ರೀ ಜೆ. ಕೃಷ್ಣಮೂರ್ತಿಯವರು ಹೇಳಿದರು.

೩-೩೦ ಪಿ. ಎಂ.

ಶ್ರೀ ಬಿ.ಬಸವಲಿಂಗಪ್ಪ.—ಈಗ ಈ ಹಿನ್ನೆಲೆಯಲ್ಲಿ ಅವರು ಏನು ಹೇಳಿದ್ದಾರೆ, ಅದು ವಾಸ್ತವಕ್ಕೆ ದೂರವಾಗಿರತಕ್ಕಂಥದ್ದು ಶ್ರೀ ಮಾನ್ ರಾಮಯ್ಯನವರು ಈ ಸಮಾಜದಲ್ಲಿರತಕ್ಕಂಥ ಬಡವರ ಬಗ್ಗೆ ಬಹಳ ಚೆನ್ನಾಗಿ ವರ್ಣನೆ ಮಾಡಿದ್ದಾರೆ. ಹರಿದ ಬಟ್ಟೆಯಲ್ಲಿ ಹೋಗತಕ್ಕಂಥ ಅಥವಾ ಇರತಕ್ಕಂಥ ಹೆಣ್ಣು ಮಕ್ಕಳ ಬಗ್ಗೆ, ಅವರ ಹಸಿವಿನ ಬಗ್ಗೆ, ಬಟ್ಟೆ ಇಲ್ಲದವರ ಬಗ್ಗೆ, ತಾಳಿ ಕಟ್ಟಿಸಿಕೊಳ್ಳುವವರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಇದೆಲ್ಲಾ ತಾವು ಏನು ಭಾಷಣ ಮಾಡಿದ್ದೀರಿ. ಒಳ್ಳೆಯ ಭಾಷಣ ಮಾಡಿದ್ದೀರೀ. ಇದಕ್ಕೆ ಕಾರಣ ವೇಂದರೆ ಬಡವರ ಕಣ್ಣಿನಲ್ಲಿ ಮಣ್ಣೆರಚಿ ಲಾಭ ಪಡೆಯಲು ಈ ಕೆಲಸ ಮಾಡಿದ್ದಾರೆ. ಪುರಂದರದಾಸರ ಕಾಲದಿಂದಲೂ ಬಲ್ಲಿದರ ಪ್ರಯತ್ನ ನಡೆಯುತ್ತಲೇ ಬಂದಿದೆ ಇದರ ಬಗ್ಗೆ ನನಗೆ ನಂಬಿಕೆ ಇಲ್ಲ. ವಚನಕಾರರು ಒಂದು ಮಾತು ಹೇಳಿದರು.

> “ ಹರಿಭಕ್ತರ ಕಂಡರೆ ವಿಷ್ಣು ನಾಮ ಜಪಿಸುವರಯ್ಯ ಹರಿಭಕ್ತರ ಕಂಡರೆ ಶಿವನಾಮ ಜಪಿಸುವರಯ್ಯ. ”

ಸಂಬಂಧಕ್ಕನು ಗುಣವಾಗಿ ಮಾತನಾಡಿ, ಬಡವರನ್ನು ಮರಳು ಮಾಡುವ ಪ್ರಯತ್ನ ಸಾಂಗವಾಗಿ ನಡೆದಿದೆ ಮತ್ತೆ ಅವರಿಗೆ ಕಾಂಗ್ರೆಸ್ ಪಕ್ಷದವರು ಏನು ಮಾಡಿದರು, ಬಿಟ್ಟರು ಅದು ಬೇರೆ ವಿಚಾರ. ಬಡವರ ಬಗ್ಗೆ ಕಾರ್ಯಕ್ರಮ ಹಾಕಿಕೊಂಡು ಅನುಷ್ಠಾನಕ್ಕೆ ತರುವವರಲ್ಲಿ ನಾನೂ ಒಬ್ಬ. ಹಳ್ಳಿಗಳಿಗೆ ಹೋಗಿ ಬಡವರು ಯಾವ ಜನಾಂಗಕ್ಕಾದರೂ ಸೇರಿರಲಿ, ಬಡವರು ಒಂದೇ ಎಂದು ಎದೆಸೆಟೆಸಿ ನಿಂತು ಕೊಂಡು ಅವರ ಪರವಾಗಿ ಕೆಲಸ ಮಾಡಿದ್ದು ಅವಶ್ಯವಾಗಿದೆ. ಶ್ರೀ ಮಾನ್ ರಾಮಯ್ಯನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ.—ನಿಮ್ಮ ಹಾಗೆ ನಾನೂ ಇದ್ದೇನೆ ಎಂದು ಏತಕ್ಕೆ ಭಾವಿಸ ಬಾರದು ?

ಶ್ರೀ ಬಿ. ಬಸವಲಿಂಗಪ್ಪ.—ಕಮಿಟ್‌ಮೆಂಟ್ ಇರತಕ್ಕಂಥವರು ಎಂದು ಹೇಳಿದ್ದೇನೆ. ಸ್ವಾಮಿ, ಇಲ್ಲಿಗೆ ಐದು ಸಾರ್ವಜನಿಕ ಚುನಾವಣೆಗಳನ್ನು ನೀವು ಮಾಡಿದ್ದೀರಿ. ಮೂರು ಸಾರ್ವಜನಿಕ ಚುನಾವಣೆ, ಎರಡನ್ನು ಮೊನ್ನೆ ಮಾಡಿದ್ದೀರಿ. ಮೊನ್ನೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟರು. ಎಷ್ಟು ಸಲ ರಾಜೀನಾಮೆ ಕೊಡುತ್ತಾರೆ. ಫೆಬ್ರುವರಿ ೮೬ ರಲ್ಲಿ ರಾಜೀನಾಮೆ

ಕೊಟ್ಟು ಸರ್ಕಾರವನ್ನು ಅತಂತ್ರ ಮಾಡಿದರು. ಸರ್ಕಾರ ಇದೆಯೋ ಇಲ್ಲವೋ ಎನ್ನುವ **ಭಾವನೆ** ಬರುವ ರೀತಿಯಲ್ಲಿ ವಾತಾವರಣ ಕಲ್ಪನೆ ಮಾಡಿಕೊಂಡರು. ಇದು ಆದ **ಮೇಲೆ ಮೊನ್ನೆ ಮದ್ರಾಸ್**ಗೆ ಹೋಗಿದ್ದರು. ೧೫ನೇ ಜನವರಿ ೧೯೮೭ರ ಪತ್ರಿಕೆ ಯಲ್ಲಿ ಈ ರೀತಿ ಬಂದಿದೆ.

> " Karnataka Chief Minister Mr. Ramakrishna Hegde said on wednesday that his mani task in the State is over after the creation of panchayat Raj. He would now do his duty for the consolidation of national opposition in future " he told newsmen here.

ಸ್ವಾಮಿ, ತಮಗೆ ವಿನಯಪೂರ್ವಕವಾಗಿ ಹೇಳುತ್ತೇನೆ. ಈವಾಗ ಜನತಾ ಪಾರ್ಟಿಯವರಿಗೆ ಏನಾಗಿದೆ ಎಂದರೆ ಕೆಮ್ಮಿದರೆ ಗಂಟಲು ಹೋಗುವ ಅಥವಾ ಶೀತವಾದರೆ ಮೂಗು ಹೋಗುವ ರೀತಿಯಾಗಿದೆ. ಇಂಥಾದ್ದನ್ನು ಇಟ್ಟುಕೊಂಡು ಕಾಲ ಕಳೆದರೆ ಏನು ಪ್ರಯೋಜನ ? ಸರ್ಕಾರದಲ್ಲಿರ ತಕ್ಕಂಥ ಜನರು ಇವರ ಒಂದು ಅನಿಶ್ಚಿತತೆಯ ಬಗ್ಗೆ ಯೋಜನೆಯನ್ನೇ ಮಾಡುವುದಿಲ್ಲ. ಸರ್ಕಾರೀ ಅಧಿಕಾರಿಗಳು ಹೇಗೆ ಇದ್ದಾರೆ ನನಗೆ ಗೊತ್ತು. ನಾನೂ ಬಹಳ ವರ್ಷ ಮಂತ್ರಿಯಾಗಿದ್ದೆ. ಅಧಿಕಾರಿಗಳು ಹೇಗೆ ಇರುತ್ತಾರೆ ಎಂದರೆ ಬಲವಾದ ಗಂಡ ಇದ್ದರೆ ಹೆಂಡತಿಯು ಹಾಗೇ ವರ್ತಿಸುತ್ತಾ. ಯಾರು ಅಶಕ್ತರಾಗಿರುತ್ತಾರೋ ಅವರ ಬಗ್ಗೆ ಹೇಗಿರುತ್ತಾರೆ ಎಂದರೆ ಅ ಅಧಿಕಾರಿಗಳು ತಮ್ಮ ಸ್ವೇಚ್ಛೆಯಂತೆ ತಮಗೆ ಇಷ್ಟಬಂದ ಹಾಗೆ ನಡೆದು ಕೊಳ್ಳುತ್ತಾರೆ ಮಾನ್ಯ ಎಸ್.ಕೆ. ಕಾಂತಾರವರು, ಮಾನ್ಯ ರಾಮಯ್ಯನವರು ಆ ಅಧಿಕಾರಿಗಳ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಆ ಅಧಿಕಾರಿಗಳಿಗೆ ಸಾರ್ವಜನಿಕರ ಹಿತರಕ್ಷಣೆ ಬೇಕಾಗಿಲ್ಲ, ಅವರಿಗೆ ಬಡವರ ಕಲ್ಯಾಣ ಬೇಕಾಗಿಲ್ಲ. ಯಾರಿಗೋಸ್ಕರವಾಗಿ ಈ ಎನ್ಆರ್ ಇ ಪಿ ಮತ್ತು ಆರ್ ಎಲ್ ಇ ಜಿ ಪಿ ಯೋಜನೆ ಇವೆ, ಅವಕ್ಕೆ ೧೦೦ ಕ್ಕೆ ೧೦೦ ಪರ್ಸೆಂಟ್ ಹಣ ಕೇಂದ್ರ ಸರ್ಕಾರದಿಂದ ಏನು ಬರುತ್ತದೆ ಈ ಹಣ ಯಾರಿಗಾಗಿ ಕೊಟ್ಟಿದ್ದಾರೆ ಅದರ ಬಗ್ಗೆ ಅವರು ಯೋಚನೆಯೇ ಹರಿಸುವುದಿಲ್ಲ. ಅಧಿಕಾರಿಗಳು ಬಡವರ ಕಲ್ಯಾಣವಾಗುವ ಹಾಗೆ ಧರ್ಮಬುದ್ಧಿಯಿಂದು, ದೇಶ ಭಕ್ತಿಯಿಂದ ಕೆಲಸ ಮಾಡಬೇಕು. ಅವರು ಹಾಗೆ ಮಾಡುತ್ತಾ ಇಲ್ಲ. ಬಂದಿರುವ ಹಣದಲ್ಲೇ ಅವರು ಅರ್ಧ, ಮುಕ್ಕಾಲು ಹಣವನ್ನು ತಿಂದುಬಿಡುತ್ತಾರೆ. ಅವರು ನಾಚಿಕೆ ಇಲ್ಲದೆ ಜೀವನ ಮಾಡುತ್ತಿದ್ದಾರೆ. ಅವರು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ದೊಡ್ಡ ದೊಡ್ಡ ಆಸ್ತಿಯನ್ನು ಮಾಡಿಕೊಂಡಿದ್ದಾರೆ. ನಾನು ನೋಡಿದ್ದೇನೆ. ಯಾರು ರಾಜ್ಯದ ಮುಖ್ಯ ಮಂತ್ರಿಗಳಾಗಿರುತ್ತಾರೋ ಅವರು ಸ್ಥಿರವಾಗಿರ ಬೇಕು. ಮುಖ್ಯ ಮಂತ್ರಿಯವರು ಏನು ಹೇಳಿದ್ದಾರೆ "My party is vere strong. I have done my job. I will go to centre to consolidate Opposition " ಅಂತ ಹೇಳಿದ್ದಾರೆ. Let him leave and go. we have no objection at all.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ತಾವು we have no objection ಅಂತ ಹೇಳಿದರಲ್ಲಾ ನಿಮ್ಮದು ಏನಾದರೂ ಅಬ್ಜಕ್ಷನ್ ಇತ್ತೇ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೋಗಿ ಸೂಜಿಯನ್ನು ಚುಚ್ಚಿ ಇಲ್ಲಿ ಬಂದಿದೀರಲ್ಲಾ. ನಿಮ್ಮ ಮುಖ್ಯಮಂತ್ರಿಗಳ ಸಮಾಚಾರ **ಹೇಳಿದರೆ ನಿಮಗೆ** ತಕ್ಷಣ ಸಿಟ್ಟು ಏತಕ್ಕೆ ಬರುತ್ತದೆ ? ನಮ್ಮ ಸಂಖ್ಯೆ, ಹೆಚ್ಚಾಗಿ, ಬಹುಮತ ಎಲ್ಲಿಯವರೆಗೆ ಬರುವುದಿಲ್ಲವೋ ಪ್ರತಿ ದಿವಸವೂ ಅನಿಶ್ಚಿತವಾಗಿರತಕ್ಕಂಥಾ ಈ ಸರ್ಕಾರ ಜನರ ಬಗ್ಗೆ ನಿಚ್ಚಳವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದು ನಿಮ್ಮ ಕರ್ತವ್ಯ, ಆ ಕೆಲಸವನ್ನು ನೀವು ಮಾಡಲೇ ಬೇಕು. ನಾನು ಅದರ ಬಗ್ಗೆ ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಅವರು ೧೨-೨-೧೯೮೬ ರಲ್ಲಿ ಏನು ರಾಜೀನಾಮೆ ಕೊಟ್ಟರು ಅದನ್ನು ನಾನು ಈಗ ಹೇಳುವುದಕ್ಕೆ ಹೋಗವುದಿಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ಮೊನ್ನೆತಾನೇ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳನ್ನು ತಾವು ಮಾಡಿದ್ದೀರಿ. ಬಹಳ ಗ್ರಾಮಗಳಿಗೆ ನಾವು ಹೋಗಿದ್ದೇವೆ. ಪ್ರಚಾರ ಮಾಡಿದ್ದೀರಿ " ನಿಮ್ಮ ಅಧಿಕಾರ ನಿಮಗೇ ಕೊಡುತ್ತೇವೆ " ಎಂದು ನೀವು ಏನು ಕೊಡುವುದು, ಅವರ ಅಧಿಕಾರ ಅವರ ಹತ್ತಿರವೇ ಇದೆ. ಈ ಪ್ರಜಾಪ್ರಭುತ್ವದ ಅರ್ಥ ಏನು ಅನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ. ಪ್ರಜಾಪ್ರಭುತ್ವ ಎಂದರೆ ಪ್ರಜೆಗಳೇ ಸಾರ್ವಭೌಮರು ವಾಸ್ತವಿಕವಾಗಿ ಸಾರ್ವಭೌಮತ್ವ ಇದೆ, ಅವರು ೫ ವರ್ಷಕ್ಕೊಂದು ಸಾರಿ ಸಾರ್ವಭೌಮತ್ವ ವನ್ನು **ಧಾರೆ ಎರೆಯುತ್ತಾರೆ.** ಅವರಿಂದ ಚುನಾಯಿತರಾದ ಪ್ರತಿನಿಧಿಗಳು ಜನರ ಪರವಾಗಿ ಸಾರ್ವಭೌಮರು, **ಅವರು ನಮಗೆಲ್ಲಾ** ಮತ್ತೆ ೫ ವರ್ಷದವರೆಗೆ **ನಾವು ಅವರನ್ನು**

ಕೇಳುವ ಹಾಗೆ ಇಲ್ಲ. ಅವರನ್ನು ಒಂದು ವೇಳೆ ವಾಪಸು ಕರೆಯಿಸುವುದ್ದರೆ. ಅವರೇ ನಮ್ಮನ್ನು ರೀಕಾಲ್ ಮಾಡಬೇಕು. ಇದನ್ನು ರಾಜಕೀಯವಾಗಿ ಉಪಯೋಗಿಸಿದ್ದೀರಿ. ಮೊನ್ನೇ ತಾನೇ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆ ಮಾಡಿದ್ದೀರಿ. ಅವರಿಗೆ ಏನು ಹೇಳಿದಿರಿ ಎಂದರೆ "ನಿಮ್ಮ ಅಧಿಕಾರ ನಿಮಗೇ ಕೊಟ್ಟಿದೆ" ನೀವು ಏನು ಕೊಟ್ಟದ್ದು ? ಅವರಿಗೆ ಕೊಡುವ ಅಧಿಕಾರ ನಿಮಗೇ ಇಲ್ಲವೇ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ಜನರಿಗೆ ಅಧಿಕಾರ ಕೊಡುವುದು ಏನಿದೆ ಜನರೇ ಸಾರ್ವಭೌಮರಿದ್ದಾರೆ. ಆದರೂ ಅವರಿಗೆ ನಿಮ್ಮ ಅಧಿಕಾರವನ್ನು ನಿಮಗೇ ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ಇವರು ಯಾರು ? ಇವರೇನು ಪೂಜಾರಿಗಳೇ ಅಥವಾ ಮಧ್ಯಸ್ಥಗಾರರೇ ? ನಿಮ್ಮ ಅಧಿಕಾರವನ್ನು ನಿಮಗೇ ಕೊಟ್ಟಿದ್ದೇವೆ ಅಂದರೆ ಯಾರಿಗೆ ಕೊಟ್ಟಿದ್ದಾರೆ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ಸಂಬಂಧಪಟ್ಟ ಮಸೂದೆಯನ್ನು ಇಲ್ಲಿ ಪಾಸ್ ಮಾಡುವಾಗ ಈ ಒಂದು ತತ್ವವನ್ನು ನೀವೆಲ್ಲರೂ ಒಪ್ಪಿದ್ದೀರಿ.

ಶ್ರೀ ಬಿ, ಬಸವಲಿಂಗಪ್ಪ.—ಈ ಒಂದು ಮಸೂದೆಯಿಂದ ಜನರ ಸಾರ್ವಭೌಮತ್ವವನ್ನು ಯಾರೂ ಸಹ ಕಿತ್ತುಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಡೋಂಗಿ ಭಾಷೆಯನ್ನು ಜನರ ಮುಂದೆ ಉಪಯೋಗಿಸಿದರೆ ಜನರು ನಿಮ್ಮನ್ನು ಹಿಂಬಾಲಿಸುತ್ತಾರೆಂದು ನೀವು ತಿಳಿದುಕೊಳ್ಳಬಾರದು. ಮಾನ್ಯ ಎಸ್. ಬಂಗಾರಪ್ಪನವರು ಈಗ ಇಲ್ಲಿ ಇಲ್ಲ. ಅವರು ಈಗ ಇದ್ದಿದ್ದರೆ ಏನಾದರೂ ಹೇಳುತ್ತಿದ್ದರು. ಚುನಾವಣೆ ಸಂದರ್ಭದಲ್ಲಿ ಇವರು ಜನರಿಗೆ ಹೆಂಡ ಕುಡಿಸಿದರೆಂದು ಎಲ್ಲರೂ ಹೇಳುತ್ತಿದ್ದಾರೆ. ನಾನು ಸಹ ಇದನ್ನು ಕಣ್ಣಿಂದ ನೋಡಿದ್ದೇನೆ. ಆದರೆ ನಾನು ಇದರ ವಿವರಕ್ಕೆ ಹೋಗುವುದಿಲ್ಲ. ಆದರೆ ಇವರು ಆ ಸಮಯದಲ್ಲಿ ತಮ್ಮ ಅಧಿಕಾರವನ್ನು ನಾನಾ ರೀತಿಯಿಂದ ದುರುಪಯೋಗಪಡಿಸಿಕೊಂಡಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಮಾನ್ಯ ರಾಮಯ್ಯನವರು ಹೇಳಿದಂತೆ ಜನರಿಗೆ ಹೆಂಡ ಕುಡಿಸುವ ಕೆಲಸ ಏನಿದೆ, ಅದನ್ನು ಯಾರು ಮಾಡಿದರೂ ತಪ್ಪೇ ಆಗುತ್ತದೆ. ಜನರೇ ಸಾರ್ವಭೌಮರಾಗಿರುವಾಗ ಅವರನ್ನು ಈ ರೀತಿಯಿಂದ ದಾರಿ ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದು ಸರಿಯಲ್ಲ ಜನರೇ ಸಾರ್ವಭೌಮರೆಂದು ಹೇಳುವಾಗ ಅವರ ಕೈಯಲ್ಲಿ ಇಂತಹ ಕೆಲಸ ಮಾಡಿಸುವುದು ಸರಿಯೇ ? ಇಂತಹ ಕೆಲಸಕ್ಕಾಗಿ ಹಣ ಖರ್ಚು ಮಾಡಿದ್ದು ಸರಿಯೇ ?

ಶ್ರೀ ಬಿ. ರಾಚಯ್ಯ.—ಸಾರ್ವಭೌಮ ಪ್ರಜೆಗಳು ಯಾರಿದ್ದಾರೆ, ಅವರ ಬಗ್ಗೆ ಈ ರೀತಿ ಮಾತನಾಡುವುದು ಮತ್ತು ಅವರ ಮೇಲೆ ಈ ರೀತಿ ಆಪಾದನೆ ಹೊರಿಸುವುದು ಸರಿಯಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗ ನಾನು ಹೇಳಿದ್ದೇ ಬೇರೆ, ಅವರು ಹೇಳುತ್ತಿರುವುದೇ, ಬೇರೆ ಆಗಿದೆ, ನಾನು ಇನ್ನೂ ತಮ್ಮ ಇಲಾಖೆಗೆ ಸಂಬಂಧಪಟ್ಟ ಲಾ ಅಂಡ್ ಆರ್ಡರ್ ವಿಷಯಕ್ಕೆ ಇನ್ನೂ ಬಂದಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳ ಸಮಯದಲ್ಲಿ ಇವರು ತಮ್ಮ ಅನುಕೂಲಕ್ಕೆ ತಕ್ಕಂತೆ ಅಧಿಕಾರಿಗಳನ್ನು ಬಳಸಿಕೊಂಡು ತಮ್ಮ ಕೆಲಸಗಳನ್ನು ಮಾಡಿಸಿಕೊಂಡಿರುವುದನ್ನು ನಾನು ನನ್ನ ಕಣ್ಣಿಂದ ನೋಡಿದ್ದೇನೆ. ಪೋಲೀಸರು ಮತ್ತು ರೆವಿನ್ಯೂ ಅಧಿಕಾರಿಗಳು ಇವರ ಏಜೆನ್ಸಿ ತರಹ ಕೆಲಸ ಮಾಡಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು ಈ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಆದ್ದರಿಂದ ಅದನ್ನೇ ನಾನು ತಿರುಗಿ ಹೇಳುವುದಿಲ್ಲ. ನಾಮಪತ್ರಗಳನ್ನು ಸಲ್ಲಿಸುವುದರಿಂದ ಹಿಡಿದು ಕೊನೆಯ ಹಂತದ ವರೆಗೂ ಇವರ ಒಂದು ಕೈವಾಡ ನಡೆದಿದೆ. ಶಕ್ತಿವಂತರು ಏನಾದರೂ ನಾಮಪತ್ರ ಸಲ್ಲಿಸಲು ಮುಂದೆ ಬಂದರೆ ಸಾಕು, ಅವರ ಮೇಲೆ ಯಾವುದಾದರು ಒಂದು ಸುಳ್ಳು ಕಂಪ್ಲೈಂಟನ್ನು ಪೋಲೀಸರಿಗೆ ಕೊಟ್ಟು, ಅವರ ನಾಮಪತ್ರ ದಾಖಲಾಗಬಾರದು, ಆ ರೀತಿಯೆಲ್ಲಾ ತೊಂದರೆ ಕೊಟ್ಟಿದ್ದಾರೆ. ನಾನಾ ರೀತಿಯ ಆತಂಕಗಳನ್ನು ಉಂಟು ಮಾಡಿದ್ದಾರೆ, ಈ ಸಮಯದಲ್ಲಿ ನೀವು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರಿ ಎಂದು ನಾನು ಹೇಳುವುದಿಲ್ಲ, ಆದರೆ ಅಧಿಕಾರವನ್ನು ನಿಮ್ಮ ಕೈಯಲ್ಲಿಟ್ಟುಕೊಂಡು, ಸರ್ಕಾರದ ಆಡಳಿತ ಯಂತ್ರವನ್ನು ನಿಮ್ಮ ಕೈಯಲ್ಲಿಟ್ಟುಕೊಂಡು ಅದರ ಒಂದು ಉಪಯೋಗವನ್ನು ಜಾಸ್ತಿ ಪಡೆದುಕೊಂಡಿದ್ದೀರಿ ಎಂದು ಮಾತ್ರ ಹೇಳುತ್ತೇನೆ. ನೀವು ಇಷ್ಟೆಲ್ಲಾ ಮಾಡಿದರೂ ಸಹ ಚುನಾವಣೆ ಫಲಿತಾಂಶದಲ್ಲಿ ಮಾತ್ರ ನಮಗಿಂತ ಸ್ವಲ್ಪ ಮುಂದೆ ಹೋಗಿದ್ದೀರಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ,—ಇಲ್ಲಿ ನಮ್ಮ ಪಕ್ಷದ ಸರ್ಕಾರವೇ ಅಧಿಕಾರದಲ್ಲಿದ್ದರೂ ಸಹ ವಿಧಾನಸೌಧದ ಹೊರಗಡೆ ಇವರಿಗೆ ಅನುಕೂಲ ಮಾಡಿಕೊಡುವ ಅಧಿಕಾರಿಗಳು ಸಹ ಇದ್ದಾರೆ. ಇವರ ಪಕ್ಷದವರು ಸಹ ಅಧಿಕಾರಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ನಾನು ಇದನ್ನು ಬೇಕಾದರೆ

ಸಾಬೀತು ಮಾಡುತ್ತೇನೆ. ನಾನು ನಮ್ಮ ತಾಲ್ಲೂಕ್ ಮಟ್ಟದಲ್ಲಿಯೇ ಇದನ್ನು ಸಾಬೀತು ಮಾಡುವುದಕ್ಕೆ ತಯಾರಿದ್ದೇನೆ. ಇವರು ಸಹ ಸರ್ಕಾರದ ಅಧಿಕಾರಿಗಳನ್ನು ಉಪಯೋಗಿಸಿಕೊಂಡಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಹಾಗಿದ್ದರೆ ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡಲಿ.

(ಗೊಂದಲ)

ಉಪಾಧ್ಯಕ್ಷರು.—ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರೀತಿ ಸರ್ಕಾರದ ಅಧಿಕಾರಿಗಳನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಪಡಿಸಿಕೊಳ್ಳುವಂತಹ ಶಕ್ತಿ ಆಡಳಿತ ಪಕ್ಷದವರಿಗೆ ಇದೆ ಎಂದು ಕಾಂಗ್ರೆಸ್ ಪಕ್ಷದವರು ಮತ್ತು ಕಾಂಗ್ರೆಸ್ ಪಕ್ಷದವರಿಗೆ ಇದೆ ಎಂದು ಜನತಾ ಪಕ್ಷದವರು ಹೇಳುತ್ತಿರಬೇಕಾದರೆ, ಈ ಎರಡೂ ಪಕ್ಷಗಳ ನಡುವೆ ಇರುವಂತಹ ನಮ್ಮಂತಹ ಸಣ್ಣಸಣ್ಣ ಪಕ್ಷಗಳ ಗತಿ ಏನು ?

† ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಚೆನ್ನಾಗಿದೆ. ಏಕೆಂದರೆ, ಹಿರಿಯ ಸದಸ್ಯರು, ಮೊನ್ನೆಮೊನ್ನೆವರೆಗೆ ಅಧಿಕಾರದಲ್ಲಿದ್ದವರಿಂದ ಅಂದರೆ ಟ್ರಜರಿ ಬೆಂಚನಿಂದ ಈ ಸೂಚನೆ ಬರುತ್ತಿದೆ. ಅಧಿಕಾರ ದುರುಪಯೋಗವಾಗಿದೆ, ಅಧಿಕಾರಿಗಳು ಜನತಾಪಕ್ಷದ ಪರವಾಗಿ ಕೆಲಸ ಮಾಡಿದ್ದಾರೆ ಎಂದು ನೇರವಾಗಿ ನಮ್ಮ ನಾಯಕರು, ನಮ್ಮ ಪಕ್ಷದವರು ಆಪಾದನೆ ಮಾಡಿದ್ದಾರೆ ಅದಕ್ಕೆ ಕೌಂಟರ್ ಚಾರ್ಜಸ್ ಆಗಿ ಟ್ರೆಜರಿ ಬೆಂಚಿನವರು ಅಧಿಕಾರಿಗಳನ್ನು ಕಾಂಗ್ರೆಸ್‌ನವರು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಹೀಗೆ ಅಧಿಕಾರಿಗಳ ಮೇಲೆ ಆಪಾದನೆ ಬಂದುಬಿಟ್ಟಿದೆ. ಅಧಿಕಾರಿಗಳು ದುರುಪಯೋಗ ಮಾಡಿದ್ದಾರೆ ಎನ್ನುವ ಆಪಾದನೆಯನ್ನು ಟ್ರೆಜರಿ ಬೆಂಚಿನಿಂದ ಮತ್ತು ಈ ಕಡೆಯಿಂದ ಏನು ಮಾಡಿದ್ದಾರೆ ಈ ಪ್ರಶ್ನೆಯ ಇತ್ಯರ್ಥವನ್ನು ಸರ್ಕಾರ ಮಾಡಬಾರದು. ಇದಕ್ಕೆ ಜುಡಿಶಿಯಲ್ ಕಮಿಷನ್ ಆಗಲಿ, ವಿಚಾರಣೆ ಮಾಡಲಿ. ಏಕೆಂದರೆ, ಅಧಿಕಾರಿಗಳು ದುರುಪಯೋಗ ಮಾಡಿದ್ದಾರೆ ಎನ್ನುವುದನ್ನು ಟ್ರಜರಿ ಬೆಂಚ್ ಒಪ್ಪಿದೆ. ಇದಕ್ಕೆ ಜುಡಿಶಿಯಲ್ ಕಮಿಷನ್ ಆಗಲಿ. ಇಲ್ಲದೇಹೋದರೆ ಅಧಿಕಾರಿಗಳ ಮೇಲೆ ಗೂಬೆ ಕೂರಿಸಿ ಅವರನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ನಾವು ಹೇಳಬೇಕಾಗುತ್ತದೆ. ಆದುದರಿಂದ ಸರ್ಕಾರಕ್ಕೆ ಈ ಬಗ್ಗೆ ನ್ಯಾಯ ಸಜ್ಜನಿಕೆ, ಪ್ರಾಮಾಣಿಕತೆ, ಸತ್ಯವನ್ನು ಹೊರಗಡೆ ತರತಕ್ಕಂಥ ಹೃದಯ ಶ್ರೀಮಂತಿಕೆ ಇದ್ದರೆ ಇದಕ್ಕೆ ಜುಡಿಶಿಯಲ್ ಕಮಿಷನ್ ಆಗಬೇಕು. ಏಕೆಂದರೆ, ಅಧಿಕಾರಿಗಳ ಮೇಲೆ ಆಪಾದನೆ ಕುಳಿತುಕೊಳ್ಳಬಾರದು. ಜುಡಿಶಿಯಲ್ ಕಮಿಷನ್ನಿನಿಂದ ಸತ್ಯಾಸತ್ಯತೆ ಹೊರಗಡೆ ಬರಲಿ. ಏಕೆಂದರೆ ಎರಡೂ ಪಕ್ಷದವರೂ ಆಪಾದನೆ ಮಾಡಿದ್ದಾರೆ. ಅಧಿಕಾರಿಗಳು ಇಲ್ಲಿ ಮಾತನಾಡಲಿಕ್ಕೆ ಇಲ್ಲ. ರಾಜ್ಯಾಂಗಬದ್ಧವಾಗಿ ಇಲ್ಲಿ ರಾಜಕೀಯ ಪಕ್ಷಗಳಿವೆ. ಇಲ್ಲಿ ಪಕ್ಷಗಳ ಮೇಲೆ ಆಪಾದನೆ ಬಂದರೆ ಅವರು ಮಾತನಾಡಿ ಆಪಾದನೆಗಳಿಂದ ವಿಮುಕ್ತರಾಗಬಹುದು. ಆದರೆ ಅಮಾಯಕ ಅಧಿಕಾರಿಗಳ ಮೇಲೆ ಆಪಾದನೆ ಮಾಡಿದರೆ ಅದು ಹಾಗೇ ಉಳಿದುಕೊಳ್ಳುತ್ತದೆ. ಅವರನ್ನು ಯಾರು ರಕ್ಷಣೆ ಮಾಡಬೇಕಾಗಿದೆ. ಅವರನ್ನು ರಕ್ಷಣೆ ಮಾಡಬೇಕಾದರೆ, ಸತ್ಯಾಸತ್ಯತೆ ಹೊರಗಡೆ ಬರಬೇಕಾದರೆ ಜುಡಿಶಿಯಲ್ ಕಮಿಷನ್ ಆಗಲಿ. ಅಧಿಕಾರಿಗಳ ಮನಸ್ಸು ನುಚ್ಚುನೂರು ಆಗಬಾರದು. ಏಕೆಂದರೆ ಇದರಲ್ಲಿ ಅಧಿಕಾರಿಗಳ ಪ್ರಾಮಾಣಿಕತೆ ಕೂಡ ಇದೆ. ಅನೇಕ ಅತ್ಯುತ್ತಮ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಈ ಆಪಾದನೆ ಹಾಗೇ ಉಳಿಯುತ್ತದೆ. ಆ ಆಪಾದನೆಯಿಂದ ಅವರು ಮುಕ್ತರಾಗಬೇಕು. ಕರ್ನಾಟಕ ರಾಜ್ಯದಲ್ಲಿ ಅತ್ಯುತ್ತಮ ಅಧಿಕಾರಿಗಳ ಪರಂಪರೆ ಇದೆಯೆಂದು ತೋರಿಸಿಕೊಳ್ಳಬೇಕಾದರೆ ಈ ವಿಚಾರಣೆ ಮಾಡಬೇಕು. ಇದಕ್ಕೆ ಸರ್ಕಾರ ಒಪ್ಪಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈಗ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿದೆಯೆಂದು ಈ ಕಡೆ—ಮತ್ತೊಂದುಕಡೆ ಹೇಳಿದ್ದಾರೆ. ಇದಕ್ಕೆ ಮಾರ್ಗ ಇದೆ. ಚುನಾವಣೆ ನಡೆದಂಥ ಕಾಲದಲ್ಲಿ ಎಲ್ಲಿ ಅಧಿಕಾರ ದುರುಪಯೋಗವಾಗಿದೆಯೋ, ಕಾನೂನು ಬಾಹಿರವಾಗಿ ಕೆಲಸ ಮಾಡಿದೆಯೋ ಅದಕ್ಕೆ ಚುನಾವಣಾ ತಕರಾರು ಅರ್ಜಿಗಳು ಬಂದಿದೆ. ಮತ್ತೆ ಅಧಿಕಾರಿಗಳ ಮೇಲೆ ಏನಾದರೂ ಆಪಾದನೆ ಬಂದರೆ ಅರ್ಜಿಗಳು ಬರುತ್ತವೆ. ಅವರು ಹೇಳುವ ಹಾಗೆ ಇದ್ದಿದ್ದರೆ *1982* ಕಾಂಗ್ರೆಸ್‌ನಲ್ಲಿ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದರಿ ಸೂಚಿಸುತ್ತದೆ.

ಅಭ್ಯರ್ಥಿಗಳು ಎಲ್ಲಿ ಬರುತ್ತಿದ್ದರು, ೧೬ ಬಿಜೆಪಿ ಎಲ್ಲಿ ಬರುತ್ತಿದ್ದರು. ಹೀಗೆ ಎಲ್ಲಾ ಬಂದಿರುವುದರಿಂದ ಚುನಾವಣೆ ಸರಿಯಾಗಿ ನಡೆದಿದೆ......

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಚುನಾವಣೆ ಸರಿಯಾಗಿ ಆಗಿದ್ದರೆ ನಿಮ್ಮ ಗತಿ ಏನಾಗುತ್ತಿತ್ತು.

ಶ್ರೀ ಬಿ. ರಾಚಯ್ಯ.—ಅಧಿಕಾರಿಗಳನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದರೆ ಎಲ್ಲರೂ ಹೇಗೆ ಬರುತ್ತಿದ್ದರು.

ಶ್ರೀ ಕೆ. ಹೆಚ್. ಪಾಟೀಲ್.—ನಮ್ಮ ಪಕ್ಷದವರು ಟೀಕೆಮಾಡಿದ್ದಾರೆ. ಟ್ರೆಜರಿ ಬೆಂಚ್‌ನಿಂದ ಸಲಹೆ ಬಂದಿದೆ. ಈ ಬಗ್ಗೆ ಸದನದ ಕಮಿಟಿ ಮಾಡಿ ಅಥವಾ ಜುಡಿಶಿಯಲ್ ಎನ್‌ಕ್ವೈರಿ ಮಾಡಿ, ನಿಷ್ಪಕ್ಷಪಾತವಾಗಿ ನಿರ್ಣಯಮಾಡಿ. ಯಾವ ಅಧಿಕಾರಿ ಎಲ್ಲಿ ತಪ್ಪಿದ್ದಾನೆ ಅವನನ್ನು ಹೊರಗೆ ಹಾಕಿರಿ, ನಮಗೂ ಬೇಡ ನಿಮಗೂ ಬೇಡ. ಇದಕ್ಕೆ ಅವಕಾಶ ಮಾಡಿಕೊಡಿ. ಸುಮ್ಮನೆ ಅಧಿಕಾರಿಗಳ ಮೇಲೆ ಗೂಬೆ ಕುಳ್ಳಿರಿಸಿ ಸಾರ್ವಜನಿಕ ಜೀವನವನ್ನು ಹಾಳು ಮಾಡುವ ರೀತಿ ನಾವೂ ಮಾಡಬಾರದು. ನೀವೂ ಮಾಡಬಾರದು.

ಶ್ರೀ ಬಿ. ರಾಚಯ್ಯ.—ಕಂಪ್ಲೈಂಟ್ ಬಂದರೆ ಕೊಡಿ. ವಿಚಾರಣೆ ಮಾಡುತ್ತಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಕಂಪ್ಲೈಂಟ್ ಯಾರಿಗೆ ಕೊಡಬೇಕು.

ಶ್ರೀ ಬಿ. ರಾಚಯ್ಯ.—ಅಭ್ಯರ್ಥಿಗಳು ಅರ್ಜಿ ಮಾಡಿದ್ದಾರೆ. ಚುನಾವಣಾ ತಕರಾರು ಅರ್ಜಿಗಳು ಬಂದಿವೆ. ಅಧಿಕಾರಿ ಯಾರಿದ್ದಾರೆ ಆ ಮಟ್ಟದಲ್ಲಿ ಹೇಳಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರ ಬಗ್ಗೆ ಸಂವಿಧಾನಾತ್ಮಕವಾದಂಥ ಚುನಾವಣಾ ಪ್ರಾಧಿಕಾರ ಎಲ್ಲಿದೆ. ಅಸೆಂಬ್ಲಿ, ಲೋಕಸಭಾ ಎಲೆಕ್ಷನ್‌ಗೆ ಎಲೆಕ್ಷನ್ ಕಮಿಷನ್ ಇದೆ, ಅದು ಅಟಾನಮಸ್ ಬಾಡಿ ಇದೆ. ಈಗ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗೆ ಸಂವಿಧಾನಾತ್ಮಕವಾದ ಎಲೆಕ್ಷನ್ ಕಮಿಷನ್ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸರ್ಕಾರ ಅಧಿಕಾರವನ್ನು ಮುಖ್ಯ ಚುನಾವಣಾಧಿಕಾರಿಗೆ ಡೆಲಿಗೇಟ್ ಮಾಡಿದ್ದರೂ ಸಂವಿಧಾನದ ಪ್ರಕಾರ ಪರಮಾಧಿಕಾರ ಇಲ್ಲ. ಸರ್ಕಾರದ ಆದೇಶದ ಮೇರೆಗೆ ಕೆಲಸ ಮಾಡಬೇಕು. ಸರ್ಕಾರದ ಆದೇಶಮೀರಿ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ, ಅಷ್ಟೊಂದು ಸರಳವಾಗಿ ಅಲಿಗೇಷನ್ ಮಾಡಿರುವುದನ್ನು ತೆಗೆದುಕೊಳ್ಳಬಾರದು. ಟ್ರಜರಿ ಬೆಂಚಿನವರು ಅಧಿಕಾರ ದುರುಪಯೋಗ ಮಾಡಿ ಅಧಿಕಾರಿಗಳು ಕಾಂಗ್ರೆಸ್‌ನವರಿಗೆ ಸಹಾಯ ಮಾಡಿದರು ಎಂದರೆ, ಇಡೀ ಅಧಿಕಾರಿಗಳ ತಂಡಕ್ಕೆ ದ್ರೋಹ ಮಾಡಿದಂತಾಗುತ್ತದೆ, If there is a severe attack on the Excutive in the Legisiature then it is a very sirious matter. That too when the treasury bench is making such an ega tion then itis a very very serious matter. Of course we are also a party to it. ಇದರ ಬಗ್ಗೆ ವಿಚಾರಣೆ ಆಗಲೇ ಬೇಕು. ವಿಚಾರಣೆಯನ್ನು ಅಧಿಕಾರಿಗಳು ಮಾಡುವುದಕ್ಕಾಗುವುದಿಲ್ಲ. ಸದನದ ಸಮಿತಿ ಕೂಡ ಮಾಡುವುದಕ್ಕಾಗುವುದಿಲ್ಲ. because tomorro we may lead evidence and they may also lead evidence.

(INTERRUPTIONS)

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಧಿಕಾರಿಗಳನ್ನು ಉಪಯೋಗಿಸಿ ಕೊಂಡಿದ್ದಾರೆಂದು ಆರೋಪ ಮಾಡಿ ಮಾನ್ಯ ಮೊಯ್ಲಿಯವರು ಈಗ ಹೇಳುತ್ತಾರೆ. ನಮ್ಮ ಕರ್ನಾಟಕದ ಅಧಿಕಾರಿಗಳಿಗೆ ಒಳ್ಳೆಯ ಪರಂಪರೆ ಇದೆಯೆಂದು. ಬೇಸ್ ಲೆಸ್ ಅಲಿಗೇಷನ್ ಮಾಡುವುದು ಸರಿಯಲ್ಲ. ಮೊದಲು ಆರೋಪ ಮಾಡಿದ್ದು ಅವರೇ, ಹಿಂದೆ ಅಧಿಕಾರಿಗಳನ್ನು ನೇಮಕ ಮಾಡಿ ಶಿಷ್ಯರುಗಳನ್ನು ಇಟ್ಟು ಕೊಂಡಿದ್ದಾರೆ, ಈಗಲೂ ಕೂಡ ಸಹಾಯ ಮಾಡಿದ್ದಾರೆ. ಈಗ ಅಧಿಕಾರಿಗಳ ಪರಂಪರೆ ಚೆನ್ನಾಗಿದೆಯೆಂದು ಹೇಳುತ್ತಿದ್ದಾರೆ. ಆರೋಪ ಏತಕ್ಕೆ ಮಾಡಬೇಕಾಗಿತ್ತು, ಒಂದು ಕಡೆ ಅಧಿಕಾರಿಗಳನ್ನು ಬಯ್ಯುವುದು, ಇನ್ನೊಂದು ಕಡೆ ಅವರಿಗೆ ರಕ್ಷಣೆ ಕೊಡುತ್ತೇವೆಂದು ಹೇಳುವುದು ಒಂದಕ್ಕೊಂದಕ್ಕೆ ತದ್ವಿರುದ್ಧವಾದಂಥ ಹೇಳಿಕೆಗಳನ್ನು ಏತಕ್ಕೆ ಮಾಡಬೇಕು.

ಶ್ರೀ ಎಂ, ವೀರಪ್ಪಮೊಯ್ಲಿ.—ಈಗಲೂ ಹೇಳುತ್ತೇನೆ. In the entire country the civil services we have in Karnataka is excelent. I stil stand by it whethere it is police or excutive. But there are some black sheeps, I agree.

(INTERRUPTIONS)

ಇದರ ಬಗ್ಗೆ ಹೇಳಿದೆ, ಮಾನ್ಯ ಹಿರಿಯ ಸದಸ್ಯರಾದಂಥ ಡಾ॥ ತಿಮ್ಮೇಗೌಡರು ಗ್ರಾಮಸಹಾಯಕರಿಂದ ಹಿಡಿದು ವಿಧಾನಸೌಧದವರೆ ಇವರ ಶಿಷ್ಯರುಗಳು ಇದ್ದಾರೆಂದು ಹೇಳಿದರು. ಬಹುಶಃ ಅವಗು ಆವೇಶದಿಂದ ಹೇಳಿರಬಹುದು. ನಾವು ಹಾಗೆ ಹೇಳಲಿಲ್ಲ.

(ಗೊಂದಲ)

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಂ. ವೀರಪ್ಪಮೊಯಿಲಿ.—ಸ್ವಾಮಿ, ನಾವು ತಿಮ್ಮೇಗೌಡರು ಕೊಟ್ಟಿರತಕ್ಕ ಸವಾಲನ್ನು ಸ್ವೀಕಾರ ಮಾಡಿದ್ದೇವೆ. ಟ್ರಜರಿಬೆಂಚನವರಿಗೆ ಧೈರ್ಯ ಇದ್ದರೆ, ಅವರು ಸ್ವೀಕಾರ ಮಾಡಲಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ವೀರಪ್ಪಮೊಯಿಲಿಯವರು ಈಗ ಹೇಳಿದಾಥ ಒಂದು ಪದ ಸತ್ಯಕ್ಕೆ ದೂರವಾದುದು. ನನ್ನ ಬಾಯಲ್ಲಿ ಬರದೇ ಇದ್ದುದನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದು ರೆಕಾರ್ಡ್ ಆಗಿದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ವಿಧಾನಸೌಧದ ವರೆಗೆ ನಿಮಗೆ ಸಪೋರ್ಟ್ ಮಾಡತಕ್ಕ ಏಜೆಂಟ್ಸ್ ಇದ್ದಾರೆ......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಕೆಲವರು ಒಳ್ಳೆಯವರು ಇದ್ದಾರೆ, ಕೆಲವರು ಕೆಟ್ಟವರು ಇದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ, ಧಾರವಾಡ ಜಿಲ್ಲೆ ಶಿಗ್ಗಾವ್ ತಾಲ್ಲೂಕು, ಶಹಬಜಾರ್‌ನಲ್ಲಿ ೧೪ ಸೀಟುಗಳನ್ನು ಜನತಾ ಪಕ್ಷಕ್ಕೆ ಅವಿರೋಧವಾಗಿ ಆಯ್ಕೆ ಮಾಡಿದರು. ಅನಂತರ ನಾಲ್ಕೂವರೆ ಗಂಟೆಗೆ ಇನ್ನೊಂದು ಸೀಟು ಅವಿರೋಧವಾಗಿ ಆಯ್ಕೆಯಾಗಿದೆ ಎಂದು ಹೇಳಿದಾಗ ಪಠಾಣೆ ಎನ್ನುವವರು ಪ್ರಶ್ನೆ ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿದರೆ ಸತ್ಯಾಸತ್ಯ ಹೊರಗಡೆ ಬರುತ್ತದೆ.

(ಗೊಂದಲ)

(ಅಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಜಿ. ಚನ್ನಪ್ಪ.—ಅಧ್ಯಕ್ಷರೆ, ಅವರು ಮಾತನಾಡುವಾಗ ಅವಕಾಶ ಕೊಡುತ್ತೀರಿ, ನಮಗೆ ಏತಕ್ಕೆ ಅವಕಾಶ ಕೊಡುತ್ತಿಲ್ಲ, ನಾವು ಏತಕ್ಕೆ ಸುಮ್ಮನೆ ಕುಳಿತುಕೊಳ್ಳಬೇಕು.

ಅಧ್ಯಕ್ಷರು.—ಇನ್ನು ಮುಂದೆ ಯಾರೂ ಮಾತನಾಡುವುದು ಬೇಡ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಯು. ಭೂಪತಿ,—ಅಷ್ಟು ಹಗುರವಾಗಿ ಮಾತನಾಡಿದ್ದು ಬಿಟ್ಟುಬಿಡಿ ಅಂದರೆ ಟೀ ಪಾರ್ಟಿಯೊಳಗೆ ಕುಳಿತುಕೊಂಡು ಮಾತನಾಡಿದಂತೆ ಆಗುತ್ತದೆ. ಮಾಜಿ ಮಂತ್ರಿಗಳು ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕು.

(ಗೊಂದಲ)

ಶ್ರೀ ಹೆಚ್.ಜಿ. ಚನ್ನಪ್ಪ.—ಅಧ್ಯಕ್ಷರೆ, ಅವರು ಮಾತನಾಡುವಾಗ ನಾವು ಏತಕ್ಕೆ ಮಾತನಾಡಬಾರದು.

(ಗೊಂದಲ)

ಶ್ರೀ ಯಂ. ಭೂಪತಿ.—ಅಧ್ಯಕ್ಷರೆ, ಆರೋಪ, ಪ್ರತ್ಯಾರೋಪ ಮಾಡಿದ್ದಾರೆ ಅದರ ಬಗ್ಗೆ ತನಿಖೆಯಾಗಬೇಕು.

(ಗೊಂದಲ)

ಶ್ರೀ ಹೆಚ್.ಜಿ. ಚನ್ನಪ್ಪ.—ಅಧ್ಯಕ್ಷರೆ, ಅವರು ಹೇಳಿದ್ದನ್ನು ಕಡತದಿಂದ ತೆಗೆಸಿಹಾಕಬೇಕು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ತಾವು ಇರಲಿಲ್ಲ ಸುಮಾರು ೧೭ ನಿಮಿಷ ಈ ಸಂಭಾಷಣೆಯೇ ಆಗಿದೆ.

ಅಧ್ಯಕ್ಷರು.—ಇನ್ನು ಮುಂದೆ ಆ ರೀತಿ ಆಗುವುದಿಲ್ಲ ತಾವು ಮಾತನಾಡಬಹುದು.

ಶ್ರೀ ಬಿ. ಬಸವಲಿಂಗಪ್ಪ.—ಡಾ|| ಶಿವಮ್ಮೇಗೌಡರು, ನಾನು ಕಣ್ಣಿನಿಂದ ನೋಡಿದ್ದೇನೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷದ ಪರವಾಗಿ ನಮ್ಮ ರಾಜ್ಯದಲ್ಲಿ ತಿರುಗಾಡಿ ನೋಡಿದ್ದೇನೆ ಎಂದು ನಾನು ಹೇಳಿದೆ. ಸದನದ ಕಮಿಟಿ ಮಾಡಿ ಎಂದು ಹೇಳಿದರು. ಅದಕ್ಕೆ ನಮ್ಮ ಪಕ್ಷದವರು ಒಪ್ಪುತ್ತೇವೆ. ಏನೇ ಆಗಿದ್ದರೂ ನಮ್ಮದು ಬಯಲಿಗೆ ಬರಲಿ, ನಿಮ್ಮದು ಬಯಲಿಗೆ ಬರಲಿ, ಈ ಸದನದ ಹತ್ತು ಜನರ ಕಮಿಟಿ ಮಾಡಿ, ಅವರು ರಾಜ್ಯದಲ್ಲೆಲ್ಲಾ ತಿರುಗಾಡಿಕೊಂಡು ಬಂದು ಒಂದು ವರದಿಯನ್ನು ಒಪ್ಪಿಸಲಿ, ಯಾರದು ತಪ್ಪು ಯಾರದು ಒಪ್ಪು ಎನ್ನುವುದು ಬಯಲಿಗೆ ಬರಲಿ. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇವೆ ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು, ನಾವು ದೇಶದ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ. ಎಂದು ಜನರಿಗೆ ಗೊತ್ತಾಗಬೇಕು. ನಿಸ್ಪೃಹತೆಯಿಂದ ಚೆನ್ನಾಗಿ ಕೆಲಸ ಮಾಡಿದ್ದರೆ, ಶಹಭಾಸ್‌ಗಿರಿ ಬರುತ್ತದೆ. ಅಧಿಕಾರ ದುರುಪಯೋಗ ಮಾಡಿಕೊಂಡು, ಉಪಯೋಗ ಮಾಡಿಕೊಂಡು ತಾವು ಹೇಗೋ ಮಾಡಿ ಯಾವ ರೀತಿಯಿಂದಲಾದರೂ ಗೆಲ್ಲಬೇಕು ಎಂದು ಪ್ರಯತ್ನವನ್ನು ಮಾಡದೇ ಹೋಗಿದ್ದರೆ ಇಲ್ಲಿಗೆ ಸೋತು ಮನೆಗೆ ಹೋಗುತ್ತಿದ್ದಿರಿ. ರಾಜ್ಯಪಾಲರ ಭಾಷಣದಲ್ಲಿ ೧೯೮೭ನೇ ಇಸವಿಯಲ್ಲಿ ಭಾಷಣ ಮಾಡಿದರು. ಯೋಜನಾ

೪–೦೦ ಪಿ.ಎಂ.

ವೆಚ್ಚ ೬೫೧ ಕೋಟಿ ರೂಪಾಯಿಗಳನ್ನು ಕಡ್ಡಾಯವಾಗಿ ಖರ್ಚು ಮಾಡಿಯೇ ಮಾಡುತ್ತೇವೆಂದು ಹೇಳಿದರು. ಎಷ್ಟರಮಟ್ಟಿಗೆ ಖರ್ಚು ಮಾಡಿದ್ದೀರಿ? ನೀವು ಹಣವನ್ನು ಖರ್ಚು ಮಾಡಲಿಕ್ಕೆ ಹೋಗಲೇ ಇಲ್ಲ. ನೀವು ಯಾವ ಅಂಕಿಅಂಶಗಳನ್ನು ಹೇಳುತ್ತೀರಿ. ಡೆವಲಪ್‌ಮೆಂಟ್ ಬೋರ್ಡ್ ಮಾಡುತ್ತೇವೆಂದು ಹೇಳಿದಿರಿ. ನಿಮಗಾಗುವಷ್ಟು ಮಾತ್ರ ಮಾಡಿಕೊಂಡಿರಿ. ಪ್ರತಿಯೊಂದು ಪಂಚಾಯತಿಯಲ್ಲೂ ನೂರಾರು ಎಕರೆ ಸಾಗುವಳಿ ಮಾಡುತ್ತೇವೆಂದು ಹೇಳಿದಿರಿ. ಆ ಮಟ್ಟದಲ್ಲಿ ಪ್ರಯತ್ನ ಮಾಡಿದರೆ. ಭಾಷಣದಲ್ಲಿರತಕ್ಕಂಥ ವಿಷಯವನ್ನು ಮಾತ್ರ ಹೇಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಎಷ್ಟು ಕೆಲಸ ಮಾಡಿದ್ದೇವೆನ್ನುವುದನ್ನು ಬಡ್ಜೆಟ್‌ನಲ್ಲಿ ಕೊಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಪ್ರತಿಯೊಂದನ್ನೂ ವ್ಯಾಖ್ಯಾನ ಮಾಡುವಾಗ ಇದರಲ್ಲಿ ಇರತಕ್ಕಂಥ ವಿಷಯವನ್ನೇ ಹೇಳುತ್ತೇನೆ, ಉಳಿದ ಯಾವುದನ್ನು ಹೇಳುವುದಿಲ್ಲ. ೨೦-೧-೧೯೮೬ನೇ ಇಸವಿಯಲ್ಲಿ ಭಾಷಣ ಮಾಡಿದರು. ಪರಿಚ್ಛೇದ ೧೬ರಲ್ಲಿ ಏನು ಹೇಳಿದ್ದೀರಿ. ನಮ್ಮ ಸರ್ಕಾರದ ಯಂತ್ರವನ್ನು ಸ್ವಚ್ಛಗೊಳಿಸುವಂಥ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳಿದಿರಿ. ಆಯೋಗದವರನ್ನು ನೇಮಿಸಿದಿರಿ. ಬಹಳ ಸಂತೋಷ. ನಿಮ್ಮ ಸರ್ಕಾರದ ಯಂತ್ರ ಯಾವರೀತಿ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ಹೇಳುತ್ತೇನೆ. ಡಿಪಾರ್ಟ್‌ಮೆಂಟ್‌ಗಳು ಏನು ಇವೆ ಅವು ಯಾವ ರೀತಿಯಾದ ಕೆಲಸವನ್ನು ಮಾಡುತ್ತಿಲ್ಲ. ಯಾರು ನಿಷ್ಠೆಯಿಂದ ಈವತ್ತಿನ ದಿವಸ ಕೆಲಸಮಾಡುತ್ತಿದ್ದಾರೆ. ಪಿಡಬ್ಲ್ಯುಡಿ ಇಲಾಖೆಯನ್ನೇ ತೆಗೆದುಕೊಳ್ಳಿ, ಕಾರ್ಪೊರೇಷನ್ನನ್ನೇ ತೆಗೆದುಕೊಳ್ಳಿ ಕಾನೂನನ್ನು ಯಾರು ಓದುತ್ತಾರೆ. ಕಾನೂನು ಪ್ರಕಾರ ನಡೆಯಬೇಕೆಂದು ತೀರ್ಮಾನಿಸಿರುತ್ತಾರೆಯೇ? ಪ್ರತಿಯೊಂದಕ್ಕೂ ಸಣ್ಣಪುಟ್ಟ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಸರ್ಕಾರದ ಕೊನೆಯವರೆಗೂ ಬಂದು ವಾಪಸ್ ಹೋಗುತ್ತಾರೆ. ನೀವು ಸ್ವಚ್ಛಗೊಳಿಸಿದ್ದಾದರೂ ಏನು? ನೀವು ಇಂಥ ಆಫೀಸನ್ನು ಸ್ವಚ್ಛಮಾಡಿದ್ದೇವೆಂದು ಯಾವುದಾದರೂ ಒಂದು ಉದಾಹರಣೆಯನ್ನು ಕೊಟ್ಟು ಬೆನ್ನು ತಟ್ಟಿಕೊಳ್ಳತಕ್ಕಂಥ ಪ್ರಕರಣವಿದ್ದರೆ ನೀವೇ ಪ್ರಶ್ನೆ ಹಾಕಿಕೊಳ್ಳಿ. ನಾನು ಸಾಕಷ್ಟು ದಿವಸಗಳ ಕಾಲ ಮಂತ್ರಿ

ಯಾಗಿ ಕೆಲಸ ಮಾಡಿದ್ದೇನೆ. ಪ್ರತಿಯೊಂದು ಆಫೀಸ್‌ನಲ್ಲೂ. ಪ್ರತಿಯೊಂದು ಇಲಾಖೆಯಲ್ಲೂ ನಡೆಯುತ್ತಿರತಕ್ಕಂಥದ್ದು ಲಂಚಗುಳಿತನವಾಗಿದೆ. ನಾನು ಹೇಳುವಾಗ ಸಾಕ್ಷೀಭೂತವಾಗಿ ಅಂಕಿ ಅಂಶಗಳು ಇಲ್ಲದೆ ಹೇಳುತ್ತಿಲ್ಲ. ನಾನು ಬೇಕಾದರೆ ಅದನ್ನು ಪ್ರೂವ್ ಮಾಡುವುದಕ್ಕೆ ತಯಾರಾಗಿದ್ದೇನೆ. ಭಾಷಣ ಮಾಡಿದ ಮೇಲೆ ಪ್ರಯತ್ನ ಕೂಡ ಆಗಬೇಕು. ಯಾರೂ ಕೂಡ ಅದರ ಕಡೆ ಗಮನ ಕೊಡುವಂತೆಯೇ ಇಲ್ಲ. ರಾಜ್ಯಾಂಗ ೧೭೯ರ ಪ್ರಕಾರ ಪ್ರೋಗ್ರಾಮು ಹಾಕಿಕೊಂಡ ಮೇಲೆ ವಿವೇಚನೆಯಿಂದ ಕೆಲಸ ಮಾಡಬೇಕು. ವಿವೇಚನವನ್ನು ಬಿಟ್ಟು ಕೆಲಸ ಮಾಡತಕ್ಕಂಥವರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳಬೇಕು. ಯಾವ ಮಂತ್ರಿಗಳಿಗೂ ಯಾರಮೇಲೂ ಹತೋಟಿ ಇಲ್ಲ. ಇದ್ದರೆ ಹೇಳಲಿ. ನಾನೂ ಕೂಡ ಮಂತ್ರಿಯಾಗಿ ಬಹಳ ದಿವಸ ಕೆಲಸ ಮಾಡಿದ್ದೇನೆ. ನಾನು ಸ್ವಚ್ಛತೆ ಇಲ್ಲದಿದ್ದರೆ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ. ಎಲ್ಲಾ ಕಾನೂನುಗಳನ್ನು ತಿಳಿದುಕೊಳ್ಳಬೇಕು. ಡಿಸಿಪ್ಲಿನ್ ರೂಲ್ಸ್ ಏನಿವೆ ಅವು ಇವತ್ತು ಇಲ್ಲವೆಂದು ಕಾಣುತ್ತದೆ. ಏಕೆಂದರೆ ಎಲ್ಲರೂ ಸ್ವೇಚ್ಛೆಯಿಂದ ಸಂಘಗಳನ್ನು ಮಾಡಿಕೊಳ್ಳಬಹುದಾಗಿದೆ. ಜವಾನನಿಂದ ಹಿಡಿದು ಮುಖ್ಯ ಕಾರ್ಯದರ್ಶಿಯವರೆಗೆ ಸಂಘಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅವರು ನಿಯತ್ತಿನಿಂದ ಹೇಗೆ ಕೆಲಸ ಮಾಡುತ್ತಾರೆ. ಅವರಿಂದ ಕೆಲಸ ಮಾಡಿಸುವುದಾದರೂ ಹೇಗೆ? ಅವರನ್ನು ಯಾವ ರೂಪದಲ್ಲಿ ಕಂಟ್ರೋಲ್ ಮಾಡುತ್ತೀರಿ? ಕಾರ್ಖಾನೆಗಳಲ್ಲಾದರೆ ಮಾಡಬಹುದು. ಸರ್ಕಾರದ ನಿಯಮಗಳ ಪ್ರಕಾರ ಅನುಸರಿಸಿಕೊಂಡು ನಡೆದುಕೊಂಡು ಹೋದರೆ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಮೊನ್ನೆ ಲಕ್ಷ್ಮೀಸಾಗರ್‌ರವರು ಸರ್ಕಾರಿ ನೌಕರರ ೭೯ ಯೂನಿಯನ್‌ಗಳಿಗೆ ಪರ್ಮಿಷನ್ ಕೊಟ್ಟಿದ್ದೇವೆಂದು ಉತ್ತರಿಸಿದರು. ಅಂದಾಗ ರಾಜ್ಯಮಟ್ಟದಲ್ಲಿರತಕ್ಕ ಯೂನಿಯನ್‌ಗೆ ಬೆಲೆ ಇಲ್ಲ ಅನ್ನಿಸುತ್ತದೆ. ನಮ್ಮ ಕಾಲದಲ್ಲಿ ರಾಜ್ಯಮಟ್ಟದಲ್ಲಿ ನೌಕರರ ಪರವಾಗಿ ಹೇಳಲಿಕ್ಕೆ ಒಂದೇ ಒಂದು ಯೂನಿಯನ್ ಅನ್ನು ಇಟ್ಟುಕೊಂಡಿದ್ದೆವು. ರಾಜ್ಯಾಂಗದ ಕಲಂ ೧೯ರ ಪ್ರಕಾರ ನಾವು ಅನುಮತಿ ಕೊಟ್ಟಿದ್ದೇವೆಂದು ಹೇಳಿದರು. ಅದರಲ್ಲಿ ರೀಸನಬಲ್ ರೆಸ್ಟ್ರಿಕ್ಷನ್ಸ್ ಎಂದು ಇದೆ. ಅಂದರೆ ಇವರು ಮನಸ್ಸಿಗೆ ಬಂದ ಹಾಗೆ ಕೊಡಲಿಕ್ಕೆ ಅವಕಾಶ ಇಲ್ಲ. ಸರ್ಕಾರಿ ನೌಕರರು ಹೇಳಿದಷ್ಟು ಸಂಘಗಳಿಗೆ ಅನುಮತಿ ಕೊಟ್ಟು ಸರ್ಕಾರಿ ಯಂತ್ರವನ್ನು ಹದಗೆಡಿಸಿದ್ದೀರಿ. ಅವರು ಜನಸೇವೆಯಲ್ಲಿ ಇಲ್ಲ. ಅದಕ್ಕೆ ವಿರೋಧವಾಗಿ ಕೆಲಸ ಮಾಡುತ್ತಿದ್ದಾರೆ. ಜನತೆಯ ಕೈಗೆ ಅಧಿಕಾರ ಕೊಟ್ಟದ್ದೇವೆಂದು ಸರ್ಕಾರೀ ನೌಕರರನ್ನು ಹೊರತುಪಡಿಸಿ ಮಾಡುತ್ತೀರಾ? ನೀವು ಸರ್ಕಾರೀ ಯಂತ್ರವನ್ನು ತಹಬಂದಿಗೆ ತರದೇ ಹೋದರೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಜನರಿಗೆ ಏನು ಉಪಕಾರ ಮಾಡಬೇಕೆಂದಿದ್ದೀರಿ ಅದನ್ನು ಮಾಡುವುದಕ್ಕಾಗುವುದಿಲ್ಲ. ನಾನು ಕಠಿಣವಾಗಿ ಹೇಳಿರಬಹುದು. ಆದರೆ ನನ್ನ ಅನುಭವದಲ್ಲಿ ಹೇಳಿದ್ದೇನೆ. ಇದರ ಬಗ್ಗೆ ಆಳವಾಗಿ ಯೋಚನೆ ಮಾಡಿ. ಸರ್ಕಾರೀ ಯಂತ್ರವನ್ನು ನೀವು ತಹಬಂದಿಗೆ ತೆಗೆದುಕೊಂಡು ನೀವು ಹೇಳಿದಂತೆ ಕೇಳುವಂತೆ ಮಾಡದಿದ್ದರೆ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ. ೧೯೬೫-೬೬ರಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸಿದ್ದೀರಿ. ಮಾನ್ಯ ರಾಮಯ್ಯನವರು ಹೇಳುವ ಹಾಗೆ ಅದರ ಅವಶ್ಯಕತೆ ಇತ್ತೋ ಇಲ್ಲವೋ ಎಂದು ಸಂಶಯ ಇದೆ. ಅದು ಔಪಚಾರಿಕವಾಗಿದೆ. ಅದಕ್ಕೆ ಬೆಲೆ ಇಲ್ಲ. ಮುಖ್ಯ ಕಾರ್ಯದರ್ಶಿಗಳು ಏನು ಬರೆದುಕೊಡುತ್ತಾರೆ ಅದಕ್ಕೆ ಸಹಿ ಹಾಕಿ ಕಳುಹಿಸುತ್ತಾರೆ. ಕ್ಯಾಬಿನೆಟ್‌ನಲ್ಲಿ ಕೂಡ ಅದು ಚರ್ಚೆ ಆಗುವುದಿಲ್ಲ.

ಅಧ್ಯಕ್ಷರು.—ನಿಮ್ಮ ಕಾಲದಲ್ಲಿ ಹೇಗೆ ಇತ್ತು?

ಒಬ್ಬ ಮಾನ್ಯ ಸದಸ್ಯರು.—ಪರಿಶೀಲನೆ ಮಾಡಿ ಮಾಡುತ್ತಿದ್ದೆವು.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ನಿಮ್ಮ ಕಾಲದಲ್ಲೂ ಹಾಗೆ ಇತ್ತು.

ಅಧ್ಯಕ್ಷರು.—ಈಗ ಏನು ಮಾಡಬೇಕು ಹೇಳಿ. ನಿಮ್ಮ ಕಾಲದಿಂದಲೂ ಹಾಗೆ ನಡೆದುಕೊಂಡು ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ.—ರಾಮಯ್ಯನವರಿಗೆ ಖೇದವಾಗಿದೆ. ಯಾವ ರೀತಿ ಸುಧಾರಣೆ ಮಾಡಬೇಕೆಂಬುದು ಸಮಸ್ಯೆಯಾಗಿದೆ. ಕ್ಯಾಬಿನೆಟ್ ಮಂತ್ರಿಗಳು ಗಮನಕೊಟ್ಟು ಆಡಳಿತಕ್ಕೆ ತಿರುವು ಕೊಡಬೇಕೆಂಬುದನ್ನು ಯೋಚಿಸಬೇಕು. ರಾಜ್ಯಪಾಲರಿಂದ ಭಾಷಣ ಮಾಡಿಸುವಾಗ ಯೋಚಿಸಿ. ಮುಂದಿನ ವರ್ಷ ಅಧಿಕಾರದಲ್ಲಿದ್ದರೆ ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ನೀವೇನು ಕನಸು ಕಾಣುತ್ತಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ.—ಇನ್ನು ಮಾನ್ಯ ಅಧ್ಯಕ್ಷರ ಸಮಾಚಾರಕ್ಕೆ ಬರುತ್ತೇನೆ. ಇಲ್ಲಿ ಕಾವಲು ಸಮಿತಿ ಎಂದು ಮಾಡಿ ಅದಕ್ಕೆ ಒಬ್ಬರು ಅಧ್ಯಕ್ಷರನ್ನು ಮಾಡಿದ್ದಾರೆ. ಅದಕ್ಕೆ ಇಂಗ್ಲಿಷ್‌ನಲ್ಲಿ ವಾಚ್ ಡಾಗ್ ಕಮಿಟಿ ಎಂದು ಹೆಸರಂತೆ. ಹಾಗೆ ಏಕೆ ಕರೆದರೋ ಗೊತ್ತಿಲ್ಲ. ಆ ಸಮಿತಿಯ ಅಧ್ಯಕ್ಷರ ಅಧಿಕಾರ ಏನೆಂದರೆ ಶಿಫಾರಸ್ಸಿನ ಅಧಿಕಾರ. ಯಾವ ಯಾವ ಹಂತದಲ್ಲಿ ಹೇಗೆ ಕನ್ನಡ ಬಳಸಬೇಕು. ಹೇಗೆ ಹೇಳಿಕೊಡಬೇಕು ಯಾವ ರೀತಿ ಇಂಟ್ರಡ್ಯೂಸ್ ಮಾಡಬೇಕೆಂಬುದಕ್ಕೆ ಅವರಿಗೊಂದು ಸಮಿತಿ. ಅವರು ಆ ಕೆಲಸ ಬಿಟ್ಟರು. ಶಿಫಾರಸ್ಸಿನ ಕೆಲಸ ಬಿಟ್ಟು ಹುಕುಂ ಹೊರಡಿಸುವುದಕ್ಕೆ ಶುರು ಮಾಡಿದರು. ಎಲ್ಲಾ ಕಡೆ ತಗಲಿಸಿಕೊಂಡು ಬಂದರು. ಎಲ್ಲಾ ಇಲಾಖೆಗಳಿಗೂ ಹುಕುಂ ಹೊರಡಿಸಿದರು. ಸಿಬ್ಬಂದಿ ಹೊರಡಿಸಿದಂತೆ. ನಿಮ್ಮನ್ನು ಜೈಲಿಗೆ ಕಳುಹಿಸುತ್ತೇವೆಂದು ಹೇಳಿದಹಾಗೆ ಆಯಿತು. ಅವರು ಹೆದರಿ ಸಾಯುತ್ತಾರೆ. ಏಕೆಂದರೆ ಸಮಿತಿಯ ಅಧ್ಯಕ್ಷರಿಗೆ ಮುಖ್ಯ ಮಂತ್ರಿಗಳ ಆಶೀರ್ವಾದ ಇದೆ ಎಂದು ಹೆದರುತ್ತಾರೆ. ಎಲ್ಲಾ ಕ್ಷೇತ್ರಗಳನ್ನು ಮುಗಿಸಿ ಕೊನೆಗೆ ಅಧ್ಯಕ್ಷರ ಕ್ಷೇತ್ರಕ್ಕೆ ಬಂದರು.

ಅಧ್ಯಕ್ಷರು.—ನಿಮ್ಮವರೆಗೂ ಬಂದಿದ್ದಾರೆ ಈಗ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಇಂಗ್ಲೀಷಿನಲ್ಲಿ ಮಾತನಾಡುವುದು......

ಅಧ್ಯಕ್ಷರು.—ಸದಸ್ಯರಿಗೆ ಕನ್ನಡದ ಬಗ್ಗೆ ಆಸಕ್ತಿ ಇಲ್ಲ ಎಂದು ಎಲ್ಲರಿಗೂ ಹೇಳಿದ್ದಾರೆ. ನನಗೊಬ್ಬನಿಗೇ ಅಲ್ಲ, ನಿಮಗೂ ಹೇಳಿದ್ದಾರೆ. ವೆಂಕಟರಾಮಯ್ಯನವರು ಪ್ರಿವಿಲೈಜ್ ಮೋಷನ್ ಕಳುಹಿಸಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ. —

ಶ್ರೀ ಬಿ. ಬಸವಲಿಂಗಪ್ಪ.—ಅದು ಬಂದಾಗ ಮಾತನಾಡೋಣ. ಈ ಸಮಿತಿ ಅಧ್ಯಕ್ಷರಿಗೆ ಯಾರು ಅಧಿಕಾರ ಕೊಟ್ಟವರು ? ಅಧಿಕಾರ ಕೊಟ್ಟಿಲ್ಲ ಎಂದು ತಿಳಿದುಕೊಂಡು ಅಧಿಕಾರ ಅವರಿಗೆ ಇಲ್ಲ ಎಂದು ತಿಳಿದುಕೊಂಡು ನೀವು ಬಹಳ ವಿನಯಪೂರ್ವಕವಾಗಿ ಉತ್ತರ ಕೊಡಲಿಕ್ಕೆ ಪ್ರಾರಂಭ ಮಾಡಿದಿರಿ. ನಿಮ್ಮ ಇಲಾಖೆಯಲ್ಲಿ ಎಲ್ಲಾ ಕನ್ನಡದಲ್ಲಿ ವ್ಯವಹಾರ ಮಾಡುತ್ತಿದ್ದಾರೆ, ಅಸೆಂಬ್ಲಿಯಲ್ಲೂ ಎಲ್ಲ ಸದಸ್ಯರಿಗೆ ಹೇಳಿ ಕನ್ನಡದಲ್ಲೇ ಮಾಡಿಸುತ್ತೇನೆ, ವರದಿ ಕೂಡ ಕನ್ನಡದಲ್ಲಿ ಮಾಡುತ್ತಿದ್ದೇನೆ, ಏನೇನು ಉಳಿದಿದೆಯೋ ಎಲ್ಲಾ ಕನ್ನಡದಲ್ಲಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ಆದರೆ ನಾವು ಬೇರೆ ಕಡೆಗೆ ಇಂಗ್ಲೀಷಿನಲ್ಲಿ ವ್ಯವಹಾರ ಮಾಡಬೇಕಾಗುತ್ತದೆ, ಪಂಜಾಬಿಗೆ ಕನ್ನಡದಲ್ಲಿ ಕಾಗದ ಬರೆದರೆ ಕಸದ ಬುಟ್ಟಿಗೆ ಹಾಕುತ್ತಾರೆ......

ಅಧ್ಯಕ್ಷರು.—ಸಂವಿಧಾನದ ಚೌಕಟ್ಟಿನಲ್ಲಿ ನೀತಿನಿಯಮಗಳಿಗೆ ಅನುಸಾರವಾಗಿ ಅದರ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ಅವರು ತೃಪ್ತರಾಗಿಲ್ಲ. ತಮ್ಮ ಮೇಲೆ ಏನು ಚಲಾಯಿಸಬೇಕೋ, ಏನು ಆಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ಮಾಡುವುದಕ್ಕೆ ಹೊರಟಿದ್ದಾರೆ. ಸ್ವಾಮಿ, ಈಗ ಸದನಕ್ಕೆ ಇದನ್ನು ತಂದಿದ್ದೇನೆ. ಅವರ ರೀತಿನೀತಿಗಳ ಬಗ್ಗೆ, ವರ್ತನೆಗಳ ಬಗ್ಗೆ ಯಾವ ರೂಪದಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಯೋಚನೆ ಮಾಡೋಣ. ಆದರೆ ಪ್ರಿವಿಲೈಜ್ ಮೂವ್ ಮಾಡೇ ಮಾಡುತ್ತೇವೆ. ಅವರು ಮಾಡಿದ್ದಾರೆ. ಅದಕ್ಕೆ ನಾವೂ ಸಪೋರ್ಟ್ ಮಾಡುತ್ತಿದ್ದೇವೆ. ಈಗ ಕನ್ನಡ ತರಬೇಕಲ್ಲ. ತಂದರೆ ಸ್ವಾಮಿ, ಯಾರಿಗೋಸ್ಕರ ತರುತ್ತೀರಿ ? ಕನ್ನಡ ಕಲಿಸಬೇಕು ನನ್ನ ಮಕ್ಕಳಿಗೆ. ಕನ್ನಡ ಕಲಿಸಿದರೆ ಅವರನ್ನು ಎಲ್ಲಿಗೆ ಕಳುಹಿಸುತ್ತೀರಿ ? ಹೈದರಾಬಾದ್‌ಗೆ ಕಳುಹಿಸುತ್ತೀರಾ ? ಡೆಲ್ಲಿಗೆ ಕಳುಹಿಸುತ್ತೀರಾ ? ಅಮೇರಿಕಾಕ್ಕೆ ಕಳುಹಿಸುತ್ತೀರಾ ? ತಮಿಳುನಾಡಿಗೆ ಕಳುಹಿಸುತ್ತೀರಾ ? ಬರೀ ಕನ್ನಡ ಕಲಿತು ಎಲ್ಲಿ ಹೋಗಬೇಕು ? ಕರ್ನಾಟಕ ರಾಜ್ಯದಲ್ಲೇ ಎಲ್ಲಿ ಜೀವನ ಮಾಡುವುದಕ್ಕಾಗುತ್ತದೆ ? ಎಲ್ಲಿ ಕೆಲಸ ಕೊಡುತ್ತೀರಿ ? ಒಂದು ಲಕ್ಷದ ಐದು ಸಾವಿರ ಮಕ್ಕಳಿಗೆ ಪುಸ್ತಕ ಕೊಟ್ಟಿವು ಎಂದು ಹೇಳಿದ್ದಾರೆ. ಪ್ರೈಮರಿ ಮಿಡ್ಲ್‌ಸ್ಕೂಲಿನಲ್ಲಿ ಲಕ್ಷಾಂತರ ಜನ ಓದುತ್ತಿದ್ದಾರೆ. ಇಷ್ಟು ಜನರಿಗೆ ವಿದ್ಯಾವಂತರನ್ನಾಗಿ ಮಾಡಿದರೆ ವರ್ಷಕ್ಕೆ ಇಷ್ಟೊಂದು ಜನ ಬಂದರೆ ಎಷ್ಟಾಗುತ್ತದೆ ದಯಮಾಡಿ ಯೋಚನೆ ಮಾಡಿ. ಇಷ್ಟು ಜನರಿಗೂ ಕೆಲಸ ಕೊಡುತ್ತೇವೆಂದು ಭರವಸೆ ಕೊಡುತ್ತೀರಾ ? ಕಾವಲು ಸಮಿತಿ ಅಧ್ಯಕ್ಷರಿಗೆ ಕೇಳಿ. ತಾವು ಕರೆಸ್ಪಾಂಡೆನ್ಸ್ ಮಾಡಿದ್ದೀರಿ. ಕೊನೆಗೆ ಪತ್ರಿಕೆಯಲ್ಲಿ ಪ್ರಕಟವಾಯಿತು. ನೀವು ಅವರಿಗೆ ಸರೆಂಡರ್ ಆದಹಾಗೆ...

ಅಧ್ಯಕ್ಷರು.—ನಾನು ಸ್ಪಷ್ಟವಾಗಿ ಹೇಳುತ್ತೇನೆ......

ಶ್ರೀ ಕೆ.ಹೆಚ್. ಪಾಟೀಲ್.—ಸರೆಂಡರ್ ಆಗುವ ಪ್ರಶ್ನೆಯೇ ಇಲ್ಲ. ಅಧ್ಯಕ್ಷರು ಎಂದರೆ ಈ ಸದನದ ಘನತೆ ಗಾಂಭೀರ್ಯವನ್ನು ಗಂಭೀರತೆಯಿಂದ ಕಾಪಾಡುವ ಇನ್‌ಸ್ಟಿಟ್ಯೂಷನ್. ಅದಕ್ಕೆ ಯಾವುದೇ ಮೂಲೆಯಲ್ಲಿ ಅವಮಾನ ಮಾಡಿದರೂ ಅದು ಎಲ್ಲ ಸದಸ್ಯರಿಗೂ ಆಗುತ್ತದೆ. ಅಂಥ ಅವಮಾನ ಸಹಿಸುವುದಕ್ಕೆ ಆಗುವುದಿಲ್ಲ. ಅಂಥ ಸ್ಥಾನದಲ್ಲಿ ಯಾರೇ ಇರಲಿ ಅವರನ್ನು ತೆಗೆದುಹಾಕ ಬೇಕು. ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಸರೆಂಡರ್ ಆಗುವ ಪ್ರಶ್ನೆ ಇಲ್ಲ. ನೀವು ನಮ್ಮ ಮಾಸ್ಟರ್ಸ್. ನೀವು ಕೂರಿಸಿ ದ್ದೀರಿ ಎಂದು ನಾನು ಕೆಲಸ ಮಾಡುತ್ತಿದ್ದೇನೆ. ನಾನು ಸಮಂಜಸವಾದ ಉತ್ತರ ಕೊಟ್ಟಿದ್ದೇನೆ. ವಾದಗ್ರಸ್ಥ ಮಾಡುವುದು ಸರಿಯಲ್ಲ ಎಂದು ಬಿಟ್ಟಿದ್ದೇನೆ. ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಪ್ರತಿಯೊಬ್ಬ ಪ್ರಜೆಗೂ ಹಕ್ಕಿದೆ. ನೀವಲ್ಲ ಯಾರು ಕೊಟ್ಟರೂ ಸಲಹೆ ಸೂಚನೆ ಕೇಳುತ್ತೇವೆ. ನ್ಯೂನತೆಗಳಿದ್ದರೆ ಅದನ್ನು ನನ್ನ ನಜರಿಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಸರೆಂಡರ್ ಆಗುವ ಪ್ರಶ್ನೆಯೇ ಇಲ್ಲ.

ಶ್ರೀ ಬಿ, ಬಸವಲಿಂಗಪ್ಪ,—ನಮ್ಮ ಸದನದ ಗೌರವವನ್ನು ಕಾಪಾಡಿದ್ದೀರಿ, ತಮಗೆ ಧನ್ಯವಾದ ಗಳು, Extraordinary powers are given to this gentlemen. For what purpose ? To finish my people and to finish my children. I don't want my people to suffer. We don't want only Kannada but we want to learn English too.

ಇನ್ನೊಂದು ಭಾಷೆಯನ್ನು ಕಲಿತು, ಬೇರೆ ಭಾಷೆಯನ್ನು ಕಲಿತು, ಪ್ರಪಂಚದಲ್ಲಿ ರುವ ಅನೇಕ ದೇಶಗಳಿಗೆ ಹೋಗಿ ಜೀವನ ಮಾಡುವುದಕ್ಕೆ ನನ್ನ ಮಕ್ಕಳು ತಯಾರಾಗ ಬೇಕಾಗಿದೆ. ಮುಸ್ಲಿಮರಿಗೆ ನೀವು ಕನ್ನಡವನ್ನು ಕಲಿಸುವುದು ಸಾಧ್ಯವೆ ? ಕಲಿಯುವಂತಹವರು ಕಲಿಯಬಹುದು. ಆದರೆ ಕಲಿಯಿರಿ ಅಂತ ಅವರ ತಲೆಯ ಮೇಲೆ ಒತ್ತಾಯ ಹೇರುವುದು ಹೇಗೆ ಸಾಧ್ಯ ? ಕಾವಲು ಸಮಿತಿಯ ಅಧ್ಯಕ್ಷರು ಏನು ಇದ್ದಾರೆ ಅವರಿಗೆ ಕಡಿವಾಣ ಹಾಕಬೇಕು. ಅವರು ಏನು ಮಾತನಾಡಬೇಕೋ ಅದನ್ನು ಮಾತನಾಡಬೇಕು. ಅವರಿಗೆ ಏನು ಅಧಿಕಾರವನ್ನು ಕೊಟ್ಟಿ ದ್ದಾರೋ ಅಷ್ಟಕ್ಕೆ ಸೀಮಿತವಾಗಿ ಅವರು ಕೆಲಸ ಮಾಡಬೇಕು.

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ ಇದೆ. ಕಾವಲು ಸಮಿತಿಯ ಅಧ್ಯಕ್ಷರ ವಿಷಯದಲ್ಲಿ ಮಾತನಾಡುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರು ಬೇರೆ ವಿಷಯದಲ್ಲಿ ಬೇಕಾದರೆ ಮಾತನಾಡಲಿ. ಆದರೆ ಕಾವಲು ಸಮಿತಿಯ ಅಧ್ಯಕ್ಷರ ಸುದ್ದಿಯನ್ನು ಹೇಳಬಾರದು ಅಂತ ಹೇಳುತ್ತೇನೆ,

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಕೊಟ್ರಪ್ಪನವರಿಗೆ ನಾನು ಹೇಳಿದ್ದು ಅವರ ಕಿವಿಮೇಲೆ ಬಿದ್ದಿಲ್ಲ. ನಾನು ಅವರ ಹೆಸರನ್ನು ಹೇಳಲಿಲ್ಲ. ಅಧ್ಯಕ್ಷರು ಅಂತ ಹೇಳಿದೆ. ಅವರಿಗೆ ಸಂಬಳ ಬರುತ್ತದೆ. ಅವರಿಗೆ ಇನ್ನು ಏನೇನು ಬೇಕೋ ಆ ಸೌಕರ್ಯ ಕೂಡ ಸಿಕ್ಕುತ್ತಿದೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಿಗೆ ಕಡಿವಾಣ ಹಾಕಬೇಕು ಅಂತ ಹೇಳಿದ್ದಾರೆ. ಆ ರೀತಿ ಹೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅಧಿಕಾರ ಇಲ್ಲ. ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ಸಭೆ ಅವರಿಗೆ ಕಡಿವಾಣವನ್ನು ಹಾಕಬೇಕು. ಸರ್ಕಾರ ಅವರಿಗೆ ಕಡಿವಾಣವನ್ನು ಹಾಕಬೇಕು. ಅವರ ಚಲನವಲನ ಏನಿದೆ ಅದಕ್ಕೂ ಕೂಡ ಕಡಿವಾಣ ಹಾಕಬೇಕು. ನಮಗೆ ಬರೀ ಕನ್ನಡ ಬೇಕಿಲ್ಲ. ಜೊತೆಗೆ ಇಂಗ್ಲೀಷ್ ಬೇಕು. ಬರೀ ಕನ್ನಡವನ್ನು ಕಲಿತು ನಮ್ಮ ಮಕ್ಕಳು ದನ ಕಾಯುವಂತೆ ಮಾಡುತ್ತೀರಾ ?

ಶ್ರೀ ಬಿ.ಜಿ. ಕೊಟ್ರಪ್ಪ.—ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಬಿ. ಬಸವಲಿಂಗಪ್ಪನವರು ಅವರ ಹೆಸರನ್ನು ಪ್ರಯೋಗ ಮಾಡಿಲ್ಲ. ಅವರ ಕಾರ್ಯಕ್ಷೇತ್ರದ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ.

ಶ್ರೀ ಬಿ.ಜಿ. ಕೊಟ್ರಪ್ಪ.—ರಾಜ್ಯಾಂಗದ ಪ್ರಕಾರ ಕರ್ನಾಟಕ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದ್ದಾಗಿದೆ. ಶ್ರೀಮಾನ್ ಬಸವಲಿಂಗಪ್ಪನವರು ಅದರ ವಿರುದ್ಧವಾಗಿ ಮಾತನಾಡುತ್ತಿದ್ದಾರೆ, ಇದಕ್ಕೆ ನನ್ನ ಅಬ್ಜೆಕ್ಷನ್ ಇದೆ. ತಮಿಳುನಾಡಿಗೆ ಹೋಗಿ ಏನು ಮಾಡಬೇಕು ? ಆಂಧ್ರಕ್ಕೆ ಹೋಗಿ ಏನು ಮಾಡಬೇಕು ? ಅಂತ ಹೇಳುತ್ತಿದ್ದಾರೆ, ಅವರಿಗೆ ಬೇರೆ ಭಾಷೆಯನ್ನು ಕಲಿಯಿರಿ ಅಂತ ಹೇಳುವುದಕ್ಕೆ ಏನು ಅಧಿಕಾರ ಇದೆ ?

ಶ್ರೀ ಆರ್. ವೆಂಕಟರಾಮಯ್ಯ.—ಅವರು ಏನು ಬೇಕಾದರೂ ಮಾತನಾಡಿಕೊಳ್ಳಲಿ. ಆದರೆ ಮನಸ್ಸಿಗೆ ಬಂದ ಹಾಗೆ ಮಾತನಾಡುವುದು ಬೇಡ. ಈ ಸದನದ ಸದಸ್ಯರಿಗೆ ಶಾಸಕಾಂಗ ಇಲಾಖೆಯಲ್ಲಿ ಇಂಗ್ಲೀಷ್ ಬಳಕೆಯಾಗುತ್ತದೆ ಅದನ್ನು ತಪ್ಪಿಸಬೇಕೆಂದು ಹೇಳಿದ್ದಾರೆ.

ಶ್ರೀ ಬಿ.ಜಿ. ಕೊಟ್ರಪ್ಪ.—ನಾನು ಶ್ರೀಮಾನ್ ವೆಂಕಟರಾಮಯ್ಯನವರಿಂದ ಎಕ್ಸ್‌ಪ್ಲನೇಷನ್ ಅನ್ನು ತೆಗೆದುಕೊಂಡು ಅವರಿಂದ ಅರ್ಥಮಾಡಿಕೊಳ್ಳುವ ಪ್ರಮೇಯ ಇಲ್ಲ. ಅವರ ವಿವರಣೆ ನನಗೆ ಬೇಕಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮನ್ನು ಅವರು ಅಪಹಾಸ್ಯ ಮಾಡುತ್ತಿದ್ದಾರೆ. ಸದಸ್ಯರಾದ ನಮಗೆ ಕನ್ನಡದ ಬಗ್ಗೆ ಗೌರವ ಇಲ್ಲ ಎಂಬುದಾಗಿ ಹೇಳುವುದು ನಿಜವಾಗಿಯೂ ನ್ಯಾಯವಾದುದಲ್ಲ. ಅದು ನ್ಯಾಯವೂ ಅಲ್ಲ. ಅದನ್ನು ನಿಜವಾಗಿಯೂ ನಾವು ಖಂಡಿಸಲೇ ಬೇಕಾಗುತ್ತದೆ. ನಮ್ಮನ್ನು ನಿಮ್ಮನ್ನು ಸೇರಿಸಿ ಮಾತನಾಡಿದ್ದಾರೆ ಅವರು.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಕೊಟ್ರಪ್ಪನವರು ನಮ್ಮ ಊರಿನವರೆ. ಅವರು ಗೊತ್ತು ನನಗೆ. ಕನ್ನಡದ ಬಗ್ಗೆ ಬಂದಾಗ ಮಾತನಾಡುತ್ತೇನೆ. ಪೋಲೀಸ್ ಇಲಾಖೆಯ ಬಗ್ಗೆ ಸ್ವಲ್ಪ ಮಾತನಾಡಬೇಕಲ್ಲ.

ಶ್ರೀ ಬಿ. ರಾಚಯ್ಯ.—ಮಾತನಾಡಿ ಸ್ವಾಮಿ.

ಶ್ರೀ ಬಿ. ಬಸವಲಿಂಗಪ್ಪ.—ಪೋಲೀಸ್ ಇಲಾಖೆಯ ಬಗ್ಗೆ ನಾನು ಮಾತನಾಡಬಾರದು ಅಂತ ನಿರ್ಧಾರ ಮಾಡಿದ್ದೇ ಕಾರಣವೇನೆಂದರೆ, ಶ್ರೀಮಾನ್ ರಾಚಯ್ಯನವರು ಪೋಲೀಸ್ ಮಂತ್ರಿಗಳಾಗಿದ್ದಾರೆ. ಅವರು ದಲಿತರೆಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅವರನ್ನು ಪೋಲೀಸ್ ಮಂತ್ರಿಗಳಾಗಿ ಮಾಡಿದ್ದಾರೆ.

ಅಧ್ಯಕ್ಷರು.—ನೀವೂ ಮಾಜಿ ಗೃಹ ಮಂತ್ರಿಗಳಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಹೌದಲ್ಲ, ಅವರು ಲೋಕೋಪಯೋಗಿ ಮಂತ್ರಿಯಾಗಿಯೋ ಅಥವಾ ಇರಿಗೇಷನ್ ಮಂತ್ರಿಗಳಾಗಿಯೋ ಇದ್ದರೆ ಇನ್ನೂ ಹೆಚ್ಚು ಕೆಲಸ ಮಾಡಬಹುದಾಗಿತ್ತು. ಏನೇ ಆದರೂ ಅದು ಅವರಿಗೆ ಚೆನ್ನಾಗಿಯೇ ಇದೆ. ನಾನೂ ನೋಡಿದ್ದೇನೆ. ನಾನು ಮಾತನಾಡಬಹುದಾಗಿತ್ತು. ಪೋಲೀಸ್ ಇಲಾಖೆಯಲ್ಲಿ ಅವರ ಹಿರಿಯ ಅಧಿಕಾರಿಗಳು ಏನು ಇದ್ದಾರೆ, ಅವರು ಏನೇ ಹೇಳಲಿ, ಕಡತದಲ್ಲಿ ಏನೇ ಬರೆಯಲಿ ಅದಕ್ಕೆ ಇವರು ರುಜು ಹಾಕುತ್ತಾರೆ. ತಪ್ಪಾಗಿದೆ ಅಂತ ಯಾರಾದರೂ ಪಾಯಿಂಟ್‌ಔಟ್ ಮಾಡಿದರೆ ಅವರ ಮೇಲೆ ಇನ್ನೊಬ್ಬರನ್ನು ನಾಮಕರಣ ಮಾಡುತ್ತಾರೆ. ತಪ್ಪಾಗಿದೆ ಅಂತ ಹೇಳುತ್ತಿದ್ದಾರೆ ನೀವು ಪುನಃ ವಿಚಾರಣೆ ಮಾಡಿ ಅಂತ ಹೇಳುತ್ತಾರೆ. ಕೆಳಗಿನ ಅಧಿಕಾರಿಗಳು ಏನು ಕೊಟ್ಟಿರುತ್ತಾರೋ ಅದನ್ನೇ ಮೇಲಧಿಕಾರಿಗಳು ಒಪ್ಪುತ್ತಾರೆ. ಅದನ್ನೇ ನೀವೂ ಒಪ್ಪುತ್ತೀರಿ. ಮಂತ್ರಿಗಳಿಗೆ ಅವರ ಇಲಾಖೆಯ ಅಧಿಕಾರಿಗಳು ಹೇಳಿದ್ದೇ ಸರಿ. ನಿಮಗೆ ಸ್ವಂತ ಬುದ್ಧಿ ಇಲ್ಲವೇ ಅಂತ ಕೇಳಿದೆ ಒಂದು ಸಾರಿ. ಆದಕ್ಕವರು ಇಲಾಖೆಯ ಅಧಿಕಾರಿಗಳು ಆ ರೀತಿ ಹೇಳುತ್ತಾರಲ್ಲಾ ಅಂತ ಹೇಳಿದರು. ಆದರೆ ಬೆಂಗಳೂರು ಸಿಟಿಯಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ, ಮೈಸೂರಿನಲ್ಲಿ ಗಲಭೆ ಗಲಾಟೆಗಳು ಬಹಳ ಆಗಿದೆ. ಸಣ್ಣ ಕತೆಯನ್ನು ಯಾವುದೋ ಒಬ್ಬರು ಬರೆದರು. ಬರವಣಿಗೆ ಗೊತ್ತಿರುವವರು, ಮುಡಿವಂತಿಕೆ ಸಾಹಿತ್ಯ ಗೊತ್ತಿರುವವರು ಬರೆದಿದ್ದಾರೆ, ಸಾಮಾನ್ಯ ಮನುಷ್ಯರ ವಿಚಾರ. ಆದರೆ ಪೈಗಂಬರರ ಸಂಬಂಧಪಟ್ಟವರ ಹೆಸರಿನ ಹೆಂಗಸರು ಗಂಡಸರು ಇದ್ದರು. ಇದಕ್ಕೆ ಜನರಿಗೆ ಸಿಟ್ಟು ಬಂತು. ಅವರಿಗೆ ಸಿಟ್ಟು ಬಂದರೆ ಅವರನ್ನು ಹಿಡಿದು ಗುಂಡು ಇಟ್ಟು ಕೊಲ್ಲುವುದೇ ? ಇದಕ್ಕೆ ಬೇರೆ ಮಾರ್ಗ ಇಲ್ಲವೇ ? ವೆಂಕಟಸ್ವಾಮಿ ಆಯೋಗದ ಬಗ್ಗೆ ಮೈಸೂರು–ಬೆಂಗಳೂರು ರಸ್ತೆಯಲ್ಲಿ ವಾಹನಗಳನ್ನು ತಡೆದರು. ಸಾರ್ವಜನಿಕರಿಗೆ ತೊಂದರೆ

ಮಾಡಿದರು. ನನಗೆ ತಿಳಿದ ಪ್ರಕಾರ, ನಾನು ಶೋಧನೆ ಮಾಡಿ ತಿಳಿದಿರುವ ಪ್ರಕಾರ ಯಾರು ಏನೇ ಮಾಡಲಿ ಆ ಜನರನ್ನು ತಡೆಯಬಾರದು, ಅದು ನಡೆಯಲಿ ಎಂದು ನೀವು ಹೇಳಿದ್ದೀರೆಂದು ತಿಳಿದು ಬಂದಿದೆ. ಆಗ ಅಲ್ಲಿ ಯಾರೇ ಪೋಲೀಸರನ್ನು ಸಸ್ಪೆಂಡ್ ಮಾಡಿಲ್ಲ. ಅಲ್ಲಿ ರಸ್ತೆಯಲ್ಲಿ ಮಕ್ಕಳು ವಾಹನಗಳನ್ನು ತಡೆದರೂ ಅದಕ್ಕೆ ನಿರ್ಬಂಧ ಇಲ್ಲ. ಮೈಸೂರಿನಲ್ಲಿ ಇಂದಿಗೂ ಗಲಾಟೆ ನಡೆಯುತ್ತಿದೆ. ಮೊನ್ನೆ ಯಾವುದೋ ಓಂ ಬಾವುಟವನ್ನು ಮುಸಲ್ಮಾನರು ಎಲ್ಲಿದ್ದಾರೆ ಅಲ್ಲೇ ಹೋಗಿ ಹಾಕಿದ್ದಾರೆ. ಇವತ್ತು ಇದನ್ನೆಲ್ಲಾ ಯಾರು ಮಾಡುತ್ತಾರೆ ? ಯಾರೋ ಮಿಸ್ಚಿವಸ್ ಪೀಪಲ್ ಮಾಡುತ್ತಾರೆ. ಅದಕ್ಕೆ ಪೋಲೀಸಿನವರು ಗುಂಡು ಹಾರಿಸುವುದು, ಅರೆಸ್ಟ್ ಮಾಡುವುದು, ಗೌರವಸ್ಥರನ್ನು ಅರೆಸ್ಟ್ ಮಾಡುವುದು. ಇದಕ್ಕೆ ಕಾರಣ ಯಾರು ? ಬಾವುಟವನ್ನು ಕಟ್ಟಿದವರು ಅಲ್ಲ. ಪೋಲೀಸಿನವರು ಕಾರಣರು. ಈ ನೆಮ್ಮದಿ ಭಂಗಕ್ಕೆ ಪೋಲೀಸರ ವಿವೇಕರಹಿತ ಕಾರ್ಯಕ್ರಮವೇ ಕಾರಣ. ಬೆಂಗಳೂರಿನಲ್ಲಿ ಗುಂಡು ಹಾಕಿದರು. ಅದು ಅಷ್ಟು ಅನಿವಾರ್ಯ ಆಗಿತ್ತೇ ? ಅಲ್ಲಿ ಸತ್ತವರು ಬಡವರೇ. ಬುದ್ಧಿವಂತರು, ಹಣವಂತರು ಸಾಯಲಿಲ್ಲ. ಇವತ್ತು ಮೈಸೂರಿನಲ್ಲಿ ಎಷ್ಟು ನಷ್ಟವಾಗಿದೆ ? ಎಲ್ಲಾ ಬಡವರ ಅಂಗಡಿಗಳೇ ನಾಶವಾಗಿವೆ. ಸಣ್ಣ ಸಣ್ಣ ಉದ್ದಿಮೆಗಳು ನಾಶವಾಗಿವೆ. ನಾನು ನಿನ್ನೆ ಮೈಸೂರಿಗೆ ಹೋಗಿದ್ದೆ. ಅಲ್ಲಿ ಎಲ್ಲರೂ ಒಪ್ಪುತ್ತಾರೆ. ಅಲ್ಲಿ ಜನಕ್ಕೆ ಭಯ ಇಡಿಸಿದ್ದಾರೆ. ಪಾಪ ಅವರಿಗೆ ವಿಷಯ ಏನು ಎಂದೇ ಸರಿಯಾಗಿ ಗೊತ್ತಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಪೋಲೀಸಿನವರು ಏನು ಹೇಳುತ್ತಾರೆ ಅದನ್ನು ದಯಮಾಡಿ ಕೇಳುವುದಕ್ಕೆ ಹೋಗಬೇಡಿ. ಸ್ವತಃ ನೀವು ಪರೀಕ್ಷೆ ಮಾಡಿ ಯಾವುದು ಸರಿ ಎನಿಸುತ್ತದೆಯೋ ಆ ಕೆಲಸವನ್ನು ಮಾಡಿ. ಇವತ್ತು ಒಂದೊಂದು ಪೋಲೀಸ್ ಸ್ಟೇಷನ್‌ನಲ್ಲಿ, ಟೌನ್ ಪೋಲೀಸ್ ಸ್ಟೇಷನ್‌ಗಳಲ್ಲಿ ಮುಸಲ್ಮಾನರು ದಲಿತರು ಇಲ್ಲ. ಒಂದೇ ಜಾತಿಯವರನ್ನು ಹಾಕುತ್ತಿದ್ದೀರಿ. ನಿಮಗೆ ಇದರಿಂದ ಕಂಟ್ರೋಲ್ ಇರುವುದಿಲ್ಲ. ಇವತ್ತು ಮೈಸೂರು ಸಿಟಿಯನ್ನೇ ತೆಗೆದುಕೊಳ್ಳಿ. ಅಲ್ಲಿ ಯಾರೋ ಆರ್.ಎಸ್.ಎಸ್. ನಲ್ಲಿ ಇರತಕ್ಕ, ಹಿಂದೆ ಇರತಕ್ಕ ಅಧಿಕಾರಿಗಳು, ಅವರ ಹೆಸರು ಈಗ ಏಕೆ, ಒಟ್ಟಿನಲ್ಲಿ ಮುಸಲ್ಮಾನರು ಇಲ್ಲ, ದಲಿತರು ಇಲ್ಲ. ದಲಿತರು ಹಾಗೂ ಮುಸಲ್ಮಾನರನ್ನು ಅಲ್ಲಿಗೆ ಹಾಕಿದರೆ ಗಲಾಟೆ ಆಗುತ್ತಾ ಇರಲಿಲ್ಲ. ಅಂತಹ ವಾತಾವರಣ ಉಂಟಾಗುತ್ತಿರಲಿಲ್ಲ. ಸೂಕ್ಷ್ಮ ರೀತಿಯಲ್ಲಿ, ಜನರಿಗೆ ತೊಂದರೆ ಆಗದ ರೀತಿಯಲ್ಲಿ, ಗುಂಡು ಉಪಯೋಗಿಸದೇ ಇರುವ ರೀತಿಯಲ್ಲಿ ಕೆಲಸ ಮಾಡಿದರೆ Idea of integration will be there and then there will be harmonity in the life of the people ಅದಕ್ಕೆ ತಾವು ನಾವು ಹೇಳಿದ್ದು ಎಲ್ಲಾ ತಪ್ಪು ಎಂದು ಕಲ್ಪನೆ ಮಾಡಿ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ.

ಅಧ್ಯಕ್ಷರು.—ಒಂದು ತಾಸು ಆಯಿತು.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತು ಕೋಮುವಾರು ಗಲಭೆಗೆ ಕಾರಣ ಏನು ಎಂದು ಒಂದು ಪ್ರಶ್ನೆ. The people who are including in creating disaffection in the society are criminals and they are liable to be prosecuted under the Indian Penal Code. ನಾನು ಕೆಲವು ಸೀನಿಯರ್ ಅಧಿಕಾರಿಗಳಿಗೆ ಕೇಳಿದೆ. Disaffection ಎಂದರೆ ಗೊತ್ತೇ ಎಂದು. ಅದು ಏನು ಸ್ವಾಮಿ ಹಾಗಂದ್ರೆ ಅಂತ ನನ್ನ ಕೇಳಿದರು. ಐ.ಪಿ.ಸಿ. ಅನ್ನು ಎಷ್ಟು ಜನ ಓದಿದ್ದಾರೋ ಗೊತ್ತಿಲ್ಲ. ನಿಮ್ಮ ಬಹಳ ಜನ ಅಧಿಕಾರಿಗಳಿಗೆ ಯಾವ ಕಾನೂನು ಇದೆ ಅದು ಗೊತ್ತಿಲ್ಲ, ಪ್ರೊಸಿಜರ್ ಗೊತ್ತಿಲ್ಲ. ಎವಿಡೆನ್ಸ್ ಆಕ್ಟ್ ಎಷ್ಟು ಜನ ಪೋಲೀಸ್ ಅಧಿಕಾರಿಗಳು ಓದಿದ್ದಾರೆ ? ಹಿಡಿದುಕೊಂಡು ಹೋಗುವುದು ದೊಣ್ಣೆ ತೆಗೆದುಕೊಂಡು ಹೊಡೆಯುವುದು. ದೊಣ್ಣೆಯಿಂದ ಯಾವುದೂ ಪ್ರಯೋಜನ ಇಲ್ಲ. You must be a corrective agent· You must be a agent to correct the wrongs done on the innoncent people· You connot beat them· You connot kill them. You cannot shoot them· You have to treat them as citizens· ನೀವು ಹೇಳುತ್ತೀರಿ ನಿಮ್ಮ ಅಧಿಕಾರವನ್ನು ನಿಮಗೆ ಕೊಟ್ಟಿದ್ದೇವೆಂದು. ಹೇಳುವುದು ಹೇಳೋದು ದೊಣ್ಣೆತೆಗೆದುಕೊಂಡು ಭಾರಿಸುವುದು, ಇದೇನು ಸ್ವಾಮಿ ?

ಶ್ರೀ ಬಿ. ರಾಚಯ್ಯ.—ತಾವು ಅಧಿಕಾರದಲ್ಲಿದ್ದಾಗ ಲಾಠಿ ಪ್ರಹಾರ ಮಾಡಲಿಲ್ಲವೆ ? ಬೈಯ್ಯಲಿಲ್ಲವೆ ? ಪೋಲೀಸ್‌ನವರ ಭಾಷೆ ನಿಮ್ಮ ಬಾಯಲ್ಲಿ ಬಂದಿತ್ತು. ನನ್ನ ಬಾಯಲ್ಲಿ ಅದು ಬರಲಿಲ್ಲ ನಾನು ಬೆಂಗಳೂರಿನಲ್ಲಿದ್ದಾಗ ಮೈಸೂರಿನಲ್ಲಿ ಗಲಾಟೆಯಾಗಿದೆ. ಮೈಸೂರಿನಲ್ಲಿದ್ದಾಗ ಬೆಂಗಳೂರಿನಲ್ಲಿ ಆಗಿದೆ. ಪೋಲೀಸ್‌ನವರು ಕ್ರಮ ತೆಗೆದುಕೊಳ್ಳುತ್ತಾರೆ. ಇವರು ಅವರನ್ನು ಸುಮ್ಮನೆ ಇರಗೊಡಸರು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಾಚಯ್ಯನವರು ನಾವು ಏನೇ ಹೇಳಲಿ ಅವರು ಹೇಳಿದ್ದೆ ಹೇಳುತ್ತಾರೆ. ಕ್ರೈಮ್‌ಗೆ ಏತಕ್ಕೆ ಹಾಕುತ್ತೀರಿ ಅಂದರೆ ಪೋಲೀಸ್‌ನವರಿಗೆ ಕೆಲಸ ಬೇಡವೆ ಎಂದು ಹೇಳುತ್ತೀರಿ. ಈಗ ಬಹಳ ವಿಶೇಷವಾಗಿರತಕ್ಕ ವಿಷಯಕ್ಕೆ ಬರುತ್ತಿದ್ದೇನೆ. ಷೆಡ್ಯೂಲ್ಡ್ ಕ್ಲಾಸ್ ಷೆಡ್ಯೂಲ್ಡ್ ಟ್ರೈಬ್, ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಟ್ರೈಬ್ ಇವರುಗಳ ಬಗ್ಗೆ ದಲಿತರ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಅಧಿಕಾರಕ್ಕೆ ಬಂದಾಗಿನಿಂದ ಇವತ್ತಿನವರೆಗೂ ಯುವಕರನ್ನು ಆಕರ್ಷಣೆ ಮಾಡಿಕೊಳ್ಳುವುದಕ್ಕೋಸ್ಕರ ಯಾರ್ಯಾರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ವಿದ್ಯಾರ್ಥಿಗಳು ಸ್ನಾತಕೊತ್ತರ ಪದವಿಯಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಆಗುತ್ತಾರೆ ಅಂದರೆ ಮೆರಿಟ್‌ನಲ್ಲಿ ಯಾರು ಮುಂದೆ ಬರುತ್ತಾರೆ ಅಂತಹವರಿಗೆ ಕೆಲಸ ಕೊಡುತ್ತೇವೆಂದು ೪ ವರ್ಷಗಳ ಹಿಂದೆ ಹೇಳಿದ್ದರು. ಒಬ್ಬರಿಗಾದರೂ ಕೊಟ್ಟಿದ್ದಾರೆಯೇ? ಅದರ ಬಗ್ಗೆ ಮಾತನಾಡಿದರೆ ಹೈಕೋರ್ಟ್‌ನಲ್ಲಿ ಸ್ಟೇ ಆರ್ಡರ್ ಇದೆಯೆಂದು ಹೇಳುತ್ತಾರೆ. ಸ್ಟೇ ಆರ್ಡರ್ ವೆಕೇಟ್ ಮಾಡಿಸಿ. ಹೈಕೋರ್ಟ್ ಮುಖ್ಯ ನ್ಯಾಯಾಧೀಶರು ಬಹಳ ಕಟ್ಟುನಿಟ್ಟಾಗಿ, ಜಾತೀಯತೆ ಇಲ್ಲದೆ ಕೆಲಸ ಮಾಡುತ್ತಾರೆಂದು ಹೇಳುತ್ತಾರೆ ಅವರ ಮುಂದೆ ನೀವು ಈ ವಿಷಯವನ್ನು ಏತಕ್ಕೆ ಹೇಳಲಿಲ್ಲ? The cases involving social justice in respect of backward classes, scheduled castes, minorities should be taken on priority basis. This is the urge of the people. This is the urge or this House. You must dispose of the cases. ನಾಲ್ಕು ವರ್ಷಗಳಿಂದ ಈ ಕೇಸು ಹಾಗೆಯೇ ಇದೆ. ಯುವಕರಿಗೆ ನೀವು ಹೀಗೆ ಮಾಡುತ್ತೀರಿ.

ಶ್ರೀ ಜಿ. ಬಸವಣಪ್ಪ.—ಸ್ಟೇ ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಕೇಳಿದ್ದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ ನಾನು ಮಾಡಿಯೆಂದು ಹೇಳುತ್ತಿದ್ದೇನೆ. ವಿಶೇಷ ಘಟಕ ಯೋಜನೆಗಳಿಗೆ ನೂರಕ್ಕೆ ನೂರರಷ್ಟು ಗ್ರಾಂಟನ್ನು ಕೊಡಲಾಗುತ್ತಿದೆ. ಅದನ್ನು ನೀವು ಯಾವಾಗ ಖರ್ಚು ಮಾಡುತ್ತೀರಿ? ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಅದರ ಬಗ್ಗೆ ಹೇಳಿ. ಬಡವರ ಬಗ್ಗೆ ಸುಮ್ಮನೆ ಕನಿಕರವಾಗಿ ಭಾಷಣ ಮಾಡುತ್ತಿದ್ದೀರಿ. ಬಡವರ ಬಗ್ಗೆ ನೀವು ಕೆಲಸ ಮಾಡಬೇಕು, ಆಗ ದೇಶ ಉದ್ಧಾರವಾಗುತ್ತದೆ. ಒಳ್ಳೆಯ ಕೆಲಸಗಳನ್ನು ಮಾಡಲಿಕ್ಕೆ ಇವರಿಗೆ ಮನಸಿಲ್ಲ. ಏನೇನು ಸ್ಕೀಮುಗಳಿವೆ ಅವುಗಳನ್ನೆಲ್ಲ ಜಾರಿಗೆ ಕೊಡಿ. ಹೆಗಡೆಯವರು ಇದೇ ಸ್ಥಳದಲ್ಲಿ ಹೇಳಿದರು, ಮೂರು ಕಡೆ ರೆಸಿಡೆನ್ಸಿಯಲ್ ಹೈಸ್ಕೂಲ್‌ಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಟೊಳ್ಳು ವಾಗ್ದಾನಗಳನ್ನು ಏತಕ್ಕೆ ನೀಡುತ್ತೀರಿ. ಯುವಕರಿಗೆ ಕೆಲಸ ಕೊಡುತ್ತೇವೆಂದು ಹೇಳಿ ನಾಲ್ಕು ವರ್ಷಗಳಾಯಿತು ಒಬ್ಬರಿಗೂ ಕೆಲಸ ಕೊಡಲಿಲ್ಲ, ಇದು ಟೊಳ್ಳು ವಾಗ್ದಾನ ಆಗುವುದಿಲ್ಲವೆ?

ಶ್ರೀ ಜಿ, ಬಸವಣಪ್ಪ.—We have taken up construction of 100 S. C./S. T. hostels. The proposal has been sanctioned.

ಶ್ರೀ ಬಿ. ಬಸವಲಿಂಗಪ್ಪ.—ಒಂದನ್ನೂ ಮಾಡಲಿಲ್ಲ.

ಶ್ರೀ ಜಿ. ಬಸವಣಪ್ಪ.—ನಾವೇನು ವಾಗ್ದಾನ ಮಾಡಿದ್ದೇವೆ ಅದನ್ನು ಜಾರಿಗೆ ಕೊಡುತ್ತಿದ್ದೇವೆ.

೪—೩೦ ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ.—ಆಮೇಲೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ಮಾತನ್ನು ಹೇಳಿದರು ಏನೆಂದರೆ, ಯಾವ್ಯಾವ ಇಲಾಖೆಯಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಇಟ್ಟಿದ್ದು ಖರ್ಚಾಗದೇ ಇರತಕ್ಕಂಥ ಹಣ ಏನು ಇದೆ ಅವೆಲ್ಲವನ್ನೂ ಶೇಖರಣೆ ಮಾಡಿ ಒಂದು ಸೆಂಟ್ರಲ್ ಫಂಡ್ ಕ್ರಿಯೇಟ್ ಮಾಡುತ್ತೇವೆ ಎಂದು. ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಇದನ್ನು ಮಾಡುತ್ತೇವೆ ಎಂದು ಹೇಳಿದ್ದಿರಲ್ಲ, ಇದನ್ನು ಮಾಡಿದ್ದೀರಾ? ಎಷ್ಟು ಹಣ ಇದೆಯೆಂದು ದಯವಿಟ್ಟು ನಾಳೆ ಹೇಳಿ. ಖರ್ಚು ಮಾಡಿದ್ದೀರಿ ಎಂದು ಹೇಳಿ.

ಶ್ರೀ ಜಿ. ಬಸವಣಪ್ಪ.—ಇದರ ಬಗ್ಗೆ ನಾನು ಹೇಳುತ್ತೇನೆ. We taken up construction of 100 S. C./S. T. hostels. The same work has been sanctioned. ನಾಳೆ ಆರ್ಡರನ್ನು ತಂದು ಕೊಡುತ್ತೇನೆ ತಮಗೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈ ಸುಳ್ಳು ಜಾತಿ ಸರ್ಟಿಫಿಕೇಟ್‌ಗಳು ಕರ್ನಾಟಕ ರಾಜ್ಯದಲ್ಲಿ ೧೯೭೭ ರಲ್ಲಿ ಪ್ರಾರಂಭವಾಯಿತು. ಆಗ ಒಬ್ಬರು ಮಂತ್ರಿ ಶ್ರೀಮಾನ್ ಎಲ್. ಜಿ. ಹಾವನೂರ್ ಅವರು, ನಂತರ ಶ್ರೀ ವಿ. ಎಲ್. ಪಾಟೀಲ್ ಅವರು ಒಂದು ಥರಾ ಮಂತ್ರಿ, ಇವರು ಇನ್ನೊಂದು ಥರಾ ಮಂತ್ರಿ, ಈ ಸುಳ್ಳು ಜಾತಿ ಪತ್ರಗಳನ್ನು ಕೊಟ್ಟು ಕೊಟ್ಟು, ಯಾರು ನಿಜವಾಗಿಯೂ ಅರ್ಹರಿದ್ದಾರೆ, ಅವರ ಹೆಸರಿನಲ್ಲಿ ಹೊಲೆಯ ಅಂದರೆ ಹೊಲೆಯ ಅಂತ ಬರೆಯುವುದು, ಸರ್ಟಿಫಿಕೇಟ್ ತೆಗೆದುಕೊಂಡು ಕೆಲಸಕ್ಕೆ ಸೇರಿಕೊಳ್ಳುವುದು. ಶೆಡ್ಯೂಲ್ಡ್ ಕ್ಯಾಸ್ಟ್ ಲಿಸ್ಟ್‌ನಲ್ಲಿ ಯಾರು ಇದ್ದಾರೆ, ಶೆಡ್ಯೂಲ್ಡ್ ಟ್ರೈಬ್ ಲಿಸ್ಟ್‌ನಲ್ಲಿ ಯಾರು ಇದ್ದಾರೆ, ಅವರ ಹೆಸರುಗಳಲ್ಲಿ ಸರ್ಟಿಫಿಕೇಟ್ ಬರೆಸುವುದು ಕೆಲಸಕ್ಕೆ ಸೇರಿಕೊಳ್ಳುವುದು ನಡೆಯಿತು. ಯಾರು ನಿಜವಾಗಿಯೂ ಶೆಡ್ಯೂಲ್ಡ್ ಕ್ಯಾಸ್ಟ್‌ನವರು ಇದ್ದಾರೆ, ಅವರಿಗೆ ನ್ಯಾಯವಾಗಿ ಸಿಗಬೇಕಾದಂಥ ಉದ್ಯೋಗ, ರಿಜರ್ವೇಶನ್ ಬೇರೆಯವರ ಪಾಲಾಯಿತು. ಅವರೇನೂ ಸಾವಿರಾರು ವರ್ಷಗಳ ಕಾಲ ಅವಧಿಯನ್ನು ಕೇಳುತ್ತಿಲ್ಲ. ನಿಗದಿಯಾದಂಥ ಕೆಲವು ವರ್ಷಗಳ ಕಾಲ ಅವರಿಗೆ ಎಲ್ಲಾ ಸವಲತ್ತುಗಳು, ಮೀಸಲಾತಿ ಎಲ್ಲಾ ಕೊಡುವುದು ಬಿಟ್ಟು, ಅವರಿಗೇ ಅನ್ಯಾಯ ಮಾಡುತ್ತಿದ್ದಾರೆ. ಅವರನ್ನು ಹಾಗೆಯೇ ಇಡಬೇಕೆಂದು ಮಾಡಿದ್ದೀರಿ. ಬೇರೆಯವರು ಮಾತ್ರ ಅವರ ಹೆಸರಿನಲ್ಲಿ ಪ್ರಯೋಜನ ಪಡೆಯುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಇದನ್ನು ಕಟ್ಟುನಿಟ್ಟಾಗಿ ಮಾಡಿ. ನಾನು ಒಂದು ಮೋಶನ್ ಅನ್ನು ಕಳಿಸಿದ್ದೇನೆ. ಯಾರು ಅರ್ಹರಿದ್ದಾರೆ, ಅವರಿಗೆ ಸಹಾಯ ಮಾಡತಕ್ಕ ಪ್ರಯತ್ನ ಮಾಡಿ. ಆಮೇಲೆ ಬ್ಯಾಕ್‌ವರ್ಡ್ ಕ್ಲಾಸ್ ವಿಚಾರ ಏನು ಹೇಳುವುದು ಸ್ವಾಮಿ ? ಇವರು ಇವತ್ತು ಬೀದಿಭಿಕಾರಿಗಳು ಇದ್ದ ಹಾಗೆ ಇದ್ದಾರೆ. ಕಾಕಾಕಾಲೇಕರ್ ಕಮಿಷನ್ ಆಯಿತು ಅಲ್ಲಿಂದ ಹಿಡಿದು ಮೊನ್ನೆ ವೆಂಕಟಸ್ವಾಮಿ ಕಮಿಷನ್‌ವರೆಗೆ ಕಮಿಷನ್‌ಗಳೋ ಕಮಿಷನ್‌ಗಳು. ಯಾರು ಬ್ಯಾಕ್‌ವರ್ಡ್ ಕ್ಲಾಸ್ ಎಂದು ರಾಜ್ಯಾಂಗ ಹೇಳುತ್ತದೆ. ರಾಜ್ಯಾಂಗವನ್ನು ಬಿಟ್ಟರು. ಅನುಕೂಲ ಅಂತ ಏನು ಹೇಳುತ್ತಾರೆ, ಅನುಕೂಲಕ್ಕೆ ತಕ್ಕಂತೆ ಎಲ್ಲರನ್ನೂ ಬ್ಯಾಕ್‌ವರ್ಡ್ ಕ್ಲಾಸ್ ಸೇರಿಸುವುದು. ಹೀಗೆ ಎಲ್ಲರನ್ನೂ ಸೇರಿಸಿಬಿಟ್ಟು ಯಾರಿಗೆ ಉಪಕಾರ ಮಾಡುವುದು ? ಬ್ಯಾಕ್‌ವರ್ಡ್ ಕ್ಲಾಸ್ ಜನರು, ಯಾರು ನಿರ್ಗತಿಕರು ಇದ್ದಾರೆ, ಅವರನ್ನು ಒಂದು ಹಂತಕ್ಕೆ ತಂದು, ನಾಗರೀಕರನ್ನಾಗಿ ಮಾಡಿ ಎಂದು ರಾಜ್ಯಾಂಗ ಏನು ಹೇಳುತ್ತದೆ. ಅದು ಬಿಟ್ಟರು. ನಾನು ಬ್ಯಾಕ್‌ವರ್ಡ್, ನೀನು ಬ್ಯಾಕ್‌ವರ್ಡ್ ಎಲ್ಲರನ್ನೂ ಬ್ಯಾಕ್‌ವರ್ಡ್ ಲಿಸ್ಟ್‌ಗೆ ಸೇರಿಸುವುದು, ಒಂದು ಗಾದೆ ಮಾತಿದೆ. ಎಲ್ಲರನ್ನೂ ಪ್ರೀತಿ ಮಾಡಲುಹೋಗಿ ಗುಡಾರ ಕಿತ್ತುಕೊಂಡು ಮನೆಗೆ ಹೋದರು ಅಂತ. ಆದ್ದರಿಂದ ನಿರ್ಧಿಷ್ಟವಾಗಿ, ಯಾವುದೇ ದಾಕ್ಷಿಣ್ಯ ಇಲ್ಲದೆ, ಸ್ಪಷ್ಟವಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು. ಯಾವುದು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳಿ ಬೇಕಾದಷ್ಟು ಸುಪ್ರಿಂಕೋರ್ಟ್ ಜಡ್ಜಮೆಂಟ್ ಇದೆ, ಹೈಕೋರ್ಟ್ ಜಡ್ಜಮೆಂಟ್ ಇದೆ. ಯಾರು ಅರ್ಜಿಕೊಟ್ಟರೂ ಅವರನ್ನು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿಸುವುದೆಂದರೆ ಏನರ್ಥ ? ಮೊನ್ನೆ ಚಳುವಳಿ ಆಯಿತಲ್ಲ, ಆಯೋಗದ ವರದಿ ವಿರುದ್ಧ ಅದನ್ನು ನೋಡಿ ನನಗೆ ಬಹಳ ನಾಚಿಕೆ ಆಯಿತು ಹೊಸದಾಗಿ ಒಂದು ಲಿಸ್ಟ್ ಮಾಡಿದ್ದೀರಿ. ನಿಜವಾದ ಅರ್ಹರು ಯಾರು ಇದ್ದಾರೆ. ಅವರನ್ನು ಬಿಟ್ಟು ಎಲ್ಲರೂ..........

ಶ್ರೀ ಜಿ. ಬಸವಣ್ಣಪ್ಪ.—ಈ ಹಿಂದುಳಿದವರ ಪಟ್ಟಿ ಏನು ಮಾಡಿದ್ದೇವೆ ಅದು ತಾತ್ಕಾಲಿಕ ಆಜ್ಞೆ ಆದರೆ ನಿಜವಾದ ಹಿಂದುಳಿದವರಿಗೆ ವೆಟೇಜ್ ಕೊಟ್ಟಿದ್ದೇವೆ. ಇನೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಬಂದಾಗ ಸರಿಯಾದ ರೀತಿಯಲ್ಲಿ ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ಟೇಟ್‌ಮೆಂಟ್ ಕೊಟ್ಟು, ಕೊಟ್ಟು ಶ್ರಿ ಬಸವಣ್ಣಪ್ಪನವರು ರಿಪೇರಿಯಾಗಿ ಹೋದರು. ಮುಸಲ್ಮಾನರು ಈ ದೇಶದಲ್ಲಿ ನೆಮ್ಮದಿಯಾಗಿರಬೇಕು. ನನ್ನ ಜೀವನದ ಉದ್ದಕ್ಕೂ......I have worked for the welfare of the Muslims. I represented them at the All India level as a special Representative of All India Congress Committe. I have travelled all over the country and I was known as a representative of Muslims. Every Muslim in this country knowns that I have represented them properly.

ದಯವಿಟ್ಟು ರಾಷ್ಟ್ರೀಯ ಭಾವೈಕ್ಯ ತರುವುದರಲ್ಲಿ ನಮ್ಮದೂ ಜವಾಬ್ದಾರಿ ಉಂಟು. ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವುದಕ್ಕೆ ನಮ್ಮದೂ ಜವಾಬ್ದಾರಿ ಉಂಟು. ಆದರೆ ನೆಮ್ಮದಿಯಾಗಿರುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನು ಹಣಕಾಸಿನ ವಿಚಾರವಾಗಿ ಹೇಳಬೇಕಾಗಿತ್ತು.

ಅಧ್ಯಕ್ಷರು.—ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವಾಗ, ಉಳಿದ ವಿಚಾರಗಳನ್ನು ಹೇಳುವಿರಂತೆ, ಈಗ ಮುಗಿಸಿಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಮಾಡತಕ್ಕಂಥ ಕೆಲಸ, ಹಾಕತಕ್ಕಂಥ ಹಣ, ಒಂದಕ್ಕೊಂದಕ್ಕೆ ತಾಳೆ ಇಲ್ಲ. ರಾಜ್ಯ ಸರ್ಕಾರದ ಮೇಲೆ ಇರತಕ್ಕ ಸಾಲ ೧೮೫೧.೬೫ ಕೋಟಿ ರೂಪಾಯಿ. This is the loan hanging over on the head of the Government. Every year you are paying Rs. 126/- crores towards interest. ಮಾನ್ಯ ದೇವೇಗೌಡರು ಲೋಕೋಪಯೋಗಿ ಇಲಾಖೆಯ ಮೇಲೆ ಉತ್ತರ ಕೊಡುತ್ತಾ ಹೇಳಿದರು. ಡಿಸೆಂಬರ್ ೩೧ರೊಳಗೆ ೩೬ ಕೋಟಿ ರೂಪಾಯಿ ಕಂಟ್ರಾಕ್ಟರುಗಳಿಗೆ ಬಾಕಿ ಕೊಟ್ಟಿಲ್ಲ ಎಂದು ಹೇಳಿದರು. ಕೊಡುವುದಕ್ಕೆ ನಿಮ್ಮ ಹತ್ತಿರ ಹಣ ಇದೆಯೇ ? ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಂದು ಇಲಾಖೆಯಲ್ಲೇ ಇಷ್ಟು ಬಾಕಿ ಇದ್ದರೆ, ಬೇರೆ ಬೇರೆ ಇಲಾಖೆಗಳಲ್ಲಿ ಎಷ್ಟು ಬಾಕಿ ಉಳಿದಿದೆಯೋ ? ತಾವು ಸರ್ಕಾರದ ಹಣಕಾಸಿನ ವ್ಯವಸ್ಥೆಯನ್ನು ಸುಭದ್ರವಾಗಿ ಇಟ್ಟುಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡಿ. ಯಾವುದಕ್ಕೂ ಕೇಂದ್ರಕ್ಕೆ ಕೈ ತೋರಿಸಿ, ಅವರು ಕೊಟ್ಟಿಲ್ಲ ಎಂದು ಹೇಳಿ, ತಾವು ನಿಂದನೆ ಮಾಡುವುದಕ್ಕೆ ಹೋಗಬೇಡಿ. ಸರ್ಕಾರದ ವ್ಯವಸ್ಥೆಯನ್ನು, ಕಾರ್ಯಕ್ರಮವನ್ನು ಸರಿಯಾಗಿ ಮಾಡಬೇಕೆಂದು ಹೇಳುತ್ತೇನೆ. ನಿಮ್ಮ ಹಣಕಾಸಿನ ವ್ಯವಸ್ಥೆ ಬಗ್ಗೆ ಡಿಸ್ಟಿಲರೀಸ್ ಮತ್ತಿತರ ಬಾಬುಗಳಿಂದ ಟ್ಯಾಕ್ಸ್ ವಸೂಲ್ಮಾಡಿ. ಆದರೆ ದಯಮಾಡಿ ಅದರ ಮೇಲೆಯೇ ಕಾಲಾಹರಣ ಮಾಡಬೇಡಿ. ಸರಿಯಾಗಿ ಯೋಚನೆ ಮಾಡಿ, ಹಣದ ವ್ಯವಸ್ಥೆಯನ್ನು ಸರಿಯಾಗಿ ನಡೆಸಿಕೊಂಡು ಹೋಗಿ, ಇಲ್ಲದೇ ಹೋದರೆ ನೀವು ಸರ್ಕಾರವನ್ನು ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ. ಆದರೆ ಹೆಚ್ಚಿನ ಅವಕಾಶವನ್ನು ತೆಗೆದುಕೊಳ್ಳುವುದಕ್ಕೆ ನಾನು ತಯಾರಿಲ್ಲ. ಬಜೆಟ್ ಮೇಲೆ ಮಾತನಾಡುವಾಗ, ಹೆಚ್ಚಿನ ವಿಚಾರಗಳನ್ನು ಹೇಳುತ್ತೇನೆ. ಆದರೆ ಇವರು ಈ ರೀತಿ ಹೋದರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. Ways and Means funds will not be available at your disposal. You will be in a sad position towards the end of this year.

† ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಅಧ್ಯಕ್ಷರೇ, ಸುಮಾರು ೪ ವರ್ಷಗಳಿಂದ ಜನತಾ ಸರ್ಕಾರದ ಕೆಲಸಕಾರ್ಯಗಳ ಬಗ್ಗೆ, ಮಾನ್ಯ ರಾಜ್ಯಪಾಲರ ಭಾಷಣದ ತಿರುಳನ್ನು ಕೇಳಿದ್ದೇವೆ. ೧೯೮೩ರಲ್ಲಿಯೂ ಜನತಾ ಸರ್ಕಾರ ಅಧಿಕಾರಕ್ಕೆ ಬಂದು, ಅನೇಕ ಕೆಲಸಗಳನ್ನು ಮಾಡುತ್ತಾರೆಂದು ಹೇಳಿದ್ದರು. ಅದರಂತೆ ಕೆಲಸವನ್ನು ಮಾಡಿದರು. ಮತ್ತೆ ಮನೆಗೆ ಹೋದರು, ಪುನಃ ಚುನಾವಣೆಯಾಗಿ ಅಧಿಕಾರಕ್ಕೆ ಬಂದರು. ಹೋದವರ್ಷವೂ ಕೂಡ ಜನತಾ ಸರ್ಕಾರ ಅನೇಕ ಕೆಲಸಗಳನ್ನು ಮಾಡಿದೆ ಎಂದು ಹೇಳಿದ್ದರು. ಯಾವುದೇ ಒಂದು ಸರ್ಕಾರ, ಸುಮಾರು ೪ ವರ್ಷಗಳಲ್ಲಿ ಕೆಲವು ಸಾಧನೆಗಳನ್ನು ಮಾಡಿದೆಯೆಂದು ಹೇಳಿಬಿಟ್ಟರೆ ಸಾಲದು. ಮೊದಲನೆಯದಾಗಿ, ರಾಜ್ಯದಲ್ಲಿರುವ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಜೀವನಮಟ್ಟದಲ್ಲಿ ಯಾವರೀತಿಯ ಪರಿವರ್ತನೆಯಾಗಿದೆ ಎಂಬುದನ್ನು ನೋಡಬೇಕು. ನಾವು ಅಧಿಕಾರಕ್ಕೆ ಬಂದ ನಂತರ ಮುನಿಸಿಪಾಲಿಟಿಗಳ ಚುನಾವಣೆಗಳನ್ನು ಮಾಡಿದ್ದೇವೆ, ಕೌನ್ಸಿಲ್ ಚುನಾವಣೆಗಳನ್ನು ಮಾಡಿದ್ದೇವೆ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಕಾಯಿದೆಯನ್ನು ಪಾಸ್ ಮಾಡಿದ್ದೇವೆ. ಗಾಂಧೀಜಿಯವರು ಈ ದೇಶದಲ್ಲಿ ಗ್ರಾಮರಾಜ್ಯ ಆಗಬೇಕು, ಗ್ರಾಮದಲ್ಲಿರುವ ಜನತೆಗೆ ತಮ್ಮ ಅಧಿಕಾರದ ಅರಿವು, ತನ್ನ ಸಮಾಜದ ಪರಿಸರವನ್ನು ನೋಡಿಕೊಂಡು, ಅದಕ್ಕೆ ತಕ್ಕಂತೆ ಕಾರ್ಯಕ್ರಮ ರೂಪಿಸಿಕೊಳ್ಳಬೇಕೆಂದು ಕನಸು ಕಂಡಿದ್ದರಿಂದ, ಬಹುಶಃ ಆ ಒಂದು ಕನಸು ಗಾಂಧೀಜಿಯವರಿಗೆ ಬಂದು, ರಾಜ್ಯದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದು, ಮಾನ್ಯ ಹೆಗಡೆಯವರು ಜನರ ಆಶೋತ್ತರಗಳನ್ನು ಈಡೇರಿಸುವ ಕನಸನ್ನು ಬಹುಶಃ ಗಾಂಧೀಜಿಯವರು ಕಂಡಿದ್ದರೇನೋ ? ಇದನ್ನು ಗಾಂಧೀಜಿಯವರು ಆಗ ತಿಳಿದುಕೊಂಡಿದ್ದರಂತೆ. ಅದನ್ನೇ ಮೊನ್ನೆ ಕಾರ್ಯಗತ ಮಾಡಿದರು. ಈಗಾಗಲೇ ಅನೇಕರು ಮಾತನಾಡಿದ್ದಾರೆ. ಯಾವ ಪ್ರಕಾರ ಜಿಲ್ಲಾ ಪರಿಷತ್ ಎಲೆಕ್ಷನ್ ಆಯಿತು ಜಿಲ್ಲಾ ಪರಿಷತ್ ಮಂಡಲ್ ಪಂಚಾಯತ್ ಚುನಾವಣೆಗಳಲ್ಲಿ ಯಾವ ರೀತಿ ಹಣ ಮತ್ತು ಸಾರಾಯಿ ವಿತರಣೆ ಆಯಿತು ಎಂಬುದನ್ನು ಹೇಳಿದ್ದಾರೆ. ಅನಂತರ ಪ್ರಜಾಪ್ರತಿನಿಧಿಗಳು ಇಲ್ಲಿ ೩೧ನೇ ತಾರೀಖು ಬಂದು ಮುಖ್ಯ ಮಂತ್ರಿಗಳನ್ನು, ಇತರ ಎಲ್ಲರನ್ನೂ ಕಂಡು ಹೋದರು. ಆದರೆ ಪ್ರಜಾಪ್ರತಿನಿಧಿಗಳ ನೇತೃತ್ವ ಮತ್ತು ಜಿಲ್ಲಾ ಪರಿಷತ್ ಮಂಡಲ್ ಪಂಚಾಯತ್‌ಗಳಲ್ಲಿ ಆರಿಸಿ ಬಂದಂಥ ವರ್ಗ ಯಾವುದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಂಬುದನ್ನು ನಾವು ನೋಡಬೇಕು. ಮಾನ್ಯ ಬಸವಣ್ಣಪ್ಪನವರು ಹೇಳಿದರು, ವೆಂಕಟಸ್ವಾಮಿ ಕಮಿಷನ್‌ನಲ್ಲಿ ಕೂಡಾ ಬ್ಯಾಕ್‌ವರ್ಡ್ ಕ್ಲಾಸಸ್ ಹೆಸರಿನಲ್ಲಿ ಯಾವ ಯಾವ ಜನರನ್ನು ತಂದು ಯಾವರೀತಿ ಕಮಿಷನ್ ರಿಪೋರ್ಟ್ ಸ್ಕ್ರಾಪ್ ಮಾಡಿದರು ಎಂಬುದು ಎಲ್ಲರಿಗೂ ಗೊತ್ತಿದೆ. ಯಾರಿಗೆ ನಿಜವಾಗಿ ಸೌಲಭ್ಯ ಸಿಗಬೇಕಾಗಿತ್ತೋ ಅವರಿಗೆ ಸಿಗಲಿಲ್ಲ. ತಮಗೆ ಗೊತ್ತಿದ್ದ ಹಾಗೆ ವೆಂಕಟಸ್ವಾಮಿ ಕಮಿಷನ್‌ನಲ್ಲಿ ಕೆಲವು ಬೇರೆ ಬೇರೆ ಜನರಿಗೆ ಪರ್ಸೆಂಟೇಜ್ ಕೊಟ್ಟು ಎ ಯಿಂದ ಡಿ ಎಂದು ಮಾಡಿದ್ದಾರೆ. ಮೊನ್ನೆ ರಾಜ್ಯದ ಜನತೆ ಸುಮಾರು ೮೮೫ ಜಿಲ್ಲಾ ಪರಿಷತ್ ಪ್ರತಿನಿಧಿಗಳನ್ನು ಆರಿಸಿದರು. ಇವರಲ್ಲಿ ೨೬೭ ಜನ ಲಿಂಗಾಯಿತರು ಆರಿಸಿಬಂದರು, ೧೯೩ ಜನ ಗೌಡರು ಒಕ್ಕಲೀಗರು ಆರಿಸಿ ಬಂದರು, ಒಟ್ಟು ೪೬೦ ಜನ ಜಿಲ್ಲಾ ಪರಿಷತ್ ಸದಸ್ಯರು ಎರಡು ಕೋಮಿಗೆ ಸೇರಿದವರು. ಇದೂ ಎಷ್ಟರಲ್ಲಿ ಎಂದರೆ ೮೮೫ರಲ್ಲಿ. ಇವರನ್ನು ನೀವು ವೆಂಕಟಸ್ವಾಮಿ ಕಮಿಷನ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಹಾಕಿದ್ದೀರಿ. ಇಡೀ ರಾಜ್ಯದ ೮೮೫ ಜನರಲ್ಲಿ ಶೇಕಡಾ ೫೦ ರಿಂದ ೬೦ ಪರ್ಸೆಂಟ್ ನೇತೃತ್ವ ಇವರು ವಹಿಸಿಕೊಂಡಿದ್ದಾರೆ. ಇವರ ಪ್ರಾಬಲ್ಯ ಅಷ್ಟೊಂದು ಇದೆ. ಯಾವುದೇ ಒಂದು ಹಳ್ಳಿಯಲ್ಲಾಗಲೀ, ಯಾವುದೇ ಒಂದು ಸಂಸ್ಥೆಯಲ್ಲಾಗಲೀ ಇವರಿಗೆ ಎಲೆಕ್ಷನ್‌ನಲ್ಲಿ ಆರಿಸಿ ಬರುವ ಶಕ್ತಿ ಇಲ್ಲದಿದ್ದರೆ ನನಗನ್ನಿಸಿದ ಮಟ್ಟಿಗೆ ೪೬೦ ಜನ ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇದೇ ಸಮಯದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ನೋಡಿದರೆ ಅವರು ೧೯೯ ಜನ, ಎಸ್.ಸಿ. ಎಸ್. ಟಿ.ಯವರ ಪ್ರಶ್ನೆಯೇ ಬರುವುದಿಲ್ಲ, ಅವರಿಗೆ ೧೩೮ ಸೀಟ್ ರಿಸರ್ವೇಷನ್ ಇದೆ, ಬರಲೇಬೇಕು ಎಸ್.ಸಿ. ಎಸ್.ಟಿ.ಗೆ ರಿಸರ್ವೇಷನ್ ಇರಲಿಲ್ಲ ಎಂದರೆ, ಆರಿಸಿ ಬರುವಹಾಗೇ ಇರಲಿಲ್ಲ. ಇದು ಸರಕಾರದ ಸಾಧನೆ. ಆಮೇಲೆ ಈ ಸರಕಾರ ಹೈದರಾಬಾದ್ ಸ್ಕೇಲ್ ಕೊಟ್ಟ ನಂತರ ಮುಖ್ಯವಾಗಿ ಟೀಚರ್ಸ್ ಇವರ ಕಡೆಗೆ ಇದ್ದಾರೆ. ನಾನು ಕಂಡಿದುದನ್ನು ಹೇಳುತ್ತಿದ್ದೇನೆ. ಇವರು ಮೊದಲಿನಿಂದಲೂ ಸ್ವಲ್ಪ ಪ್ರೋ-ಜನತಾ. ಈ ಅಫಿಷಿಯಲ್ಸ್ ಪ್ರೋ-ಜನತಾ ಇದ್ದಾರೆ. ಹೈದರಾಬಾದ್ ಸ್ಕೇಲ್ ಮುಖ್ಯಮಂತ್ರಿಗಳು ಕೊಟ್ಟರು. ಇದು ಸುಮಾರು ಮೂರು ನಾಲ್ಕು ವರ್ಷಗಳಿಂದಲೂ ಪೆಂಡಿಂಗ್ ಇತ್ತು, ಇವರ ಮನಸ್ಸನ್ನು ಒಲಿಸಿಕೊಳ್ಳಬೇಕು ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಎಲೆಕ್ಷನ್‌ಗಳಲ್ಲಿ ಇವರು ಸರಕಾರದ ಪರವಾಗಿ ಧೋರಣೆ ಹೊಂದಿರಬೇಕೆಂಬುದಕ್ಕಾಗಿ ಅವರ ಡಿಮ್ಯಾಂಡನ್ನು ಒಪ್ಪಿದರು. ಅದನ್ನು ಒಪ್ಪಬೇಕೆಂದು ನಾವು, ಕಾಂತಾರಾಜರು, ಜನತಾ ಪಕ್ಷದ ಇತರ ಶಾಸಕರು, ಬೇರೆ ಬೇರೆ ಅನೇಕ ಶಾಸಕರು ಕೂಡಾ ಹೇಳಿದ್ದೆವು, ಅವರಿಗೆ ಅನ್ಯಾಯ ಆಗದೆ ಒಪ್ಪಬೇಕು ಎಂದವರು ನಾವು. ಅದಾದನಂತರ ಜಿಲ್ಲಾ ಪರಿಷತ್ ನೋಡಿದಾಗ ಪ್ರತಿಯೊಬ್ಬರೂ ಇನ್ ಫೇವರ್ ಆಫ್ ಜನತಾ. ಬಹಳ ಕಡೆಗಳಲ್ಲಿ ಜನತಾದ ಪರವಾಗಿ ಇಂಪರ್ಸನೇಷನ್ ಓಟು ಹಾಕಿದ್ದಾರೆ. ಅನೇಕ ಕಡೆಗಳಲ್ಲಿ ಇದು ಆಯಿತು. ಅದನ್ನು ಪ್ರತಿಭಟನೆ ಮಾಡುವಂತಹ ಶಕ್ತಿ ಅಲ್ಲಿದ್ದಂಥ ಯಾವುದೇ ಒಬ್ಬ ಟೀಚರ್‌ಗೆ ಆಗಲೀ, ಗೌರ್ನಮೆಂಟ್ ಸರ್ವೆಂಟ್‌ಗೇ ಆಗಲೀ ಇರಲಿಲ್ಲ, ಅವರು ವಿರೋಧಿಸಲಿಲ್ಲ. ಕೆಲವು ಕಡೆಗಳಲ್ಲಿ ಟೆಂಡರ್ ಓಟ್ ಮಾಡಬೇಕೆಂದು ಓಟುದಾರರು ಹೋದರೂ ಆಗಲೂ ಕೂಡಾ ಅಲ್ಲಿ ಇದ್ದಂಥ ಪ್ರಿಸೈಡಿಂಗ್ ಆಫೀಸರ್ಸ್ ಆಗಿದ್ದಂಥ ಟೀಚರ್ಸ್ ಅಫಿಷಿಯಲ್ಸ್ ಓಟು ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಇದು ಸರ್ಕಾರದ ಧೋರಣೆ. ಮತ್ತೆ ಇವರಲ್ಲಿರತಕ್ಕಂಥ ಅಧಿಕಾರ ವಿಕೇಂದ್ರೀಕರಣದ ನೀತಿ ಕೆಳಗಿನ ಹಂತದಲ್ಲಿ ಚುನಾಯಿತರಾಗಿರತಕ್ಕಂಥ ಪ್ರತಿನಿಧಿಗಳು ಗ್ರಾಮಮಟ್ಟದಲ್ಲಿ ಅಧಿಕಾರವನ್ನು ನಡೆಸುವ ರೀತಿನೀತಿ. ಇನ್ನು ಬರಗಾಲಪರಿಸ್ಥಿತಿಯಲ್ಲಿ ಸಾಕಷ್ಟು ಸಹಾಯ ಮಾಡಿದ್ದೇವೆಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ರಾಜ್ಯಪಾಲರು ಏನು ಹೇಳಿದ್ದಾರೆಂದರೆ ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ. ಯೋಜನೆಗಳ ಮುಖಾಂತರ ಬಡಜನರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಸತತವಾಗಿ ಕಳೆದ ನಾಲ್ಕು ವರ್ಷಗಳಿಂದ ಬರಗಾಲ ಪರಿಸ್ಥಿತಿ ಇದ್ದರೂ ಸಹ ಧೈರ್ಯದಿಂದ ಎದುರಿಸಿದ್ದೇವೆಂದು ಸಹ ಹೇಳಿದ್ದಾರೆ. ಈ ಎನ್.ಆರ್.ಇ.ಪಿ. ಮತ್ತು ಆರ್,ಎಲ್.ಇ,ಜಿ.ಪಿ. ಯೋಜನೆಗಳು ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಂದಂತಹ ಯೋಜನೆಗಳು ಅಲ್ಲ. ಈ ಯೋಜನೆಗಳು ಹಿಂದೆಯೂ ಸಹ ಇದ್ದವು. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಕಾರ್ಯಕ್ರಮಗಳನ್ನು ಇವರು [illegible] ಆಕ್ಷನ್ ೧-೨ ಮತ್ತು ೩.೪ ಎಂದು ಮಾಡಿಕೊಂಡು ಕೇಂದ್ರ ಸರ್ಕಾರದಿಂದ ಬರುತ್ತಿದ್ದ ಹಣವನ್ನು ಬೇರೆ ಬೇರೆ ಕೆಲಸಗಳಿಗೆ ಉಪಯೋಗಿಸಿಕೊಂಡು ಕೆಲಸಗಳನ್ನು ಮಾಡಿಸಿದ್ದಾರೆ. ಮತ್ತೆ ಗೋಶಾಲೆಗಳನ್ನು ಪ್ರಾರಂಭಿಸಿ ಅಲ್ಲಿ ದನಗಳಿಗೆ ಮೇವು ಒದಗಿಸಿಕೊಟ್ಟಿದ್ದೇವೆ ಎನ್ನುವ [illegible] ಸಹ ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ನನ್ನ ಜಿಲ್ಲೆಯಲ್ಲಿ ಎಲ್ಲೂ ಗೋಶಾಲೆಗಳನ್ನು ಪ್ರಾರಂಭಿಸಿಲ್ಲ. ಮಾನ್ಯ ಶಾಸಕರಾದಂಥ ಶ್ರೀಮಾನ್ ಧರ್ಮಸಿಂಗ್‌ರವರ ಕ್ಷೇತ್ರದಲ್ಲಿ ಒಂದು ಕಡೆ ಪ್ರಾರಂಭಿಸಿದ್ದಾರೆ. ಅಲ್ಲಿ ಏನಾಯಿತು ಎಂದರೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಣ್ಣಪ್ಪನವರು ಬಂದು ಉದ್ಘಾಟನೆ ಮಾಡಿ ಅವರು ಬೆಂಗಳೂರು ತಲುಪುವ ಮುನ್ನ ಅಲ್ಲಿದ್ದಂತಹ ಮೇವು ದನಗಳು ಹೊರಟು ಹೋದವು. ಸರ್ಕಾರದವರು.

ಬರಗಾಲ ಕಾಮಗಾರಿಗಳಿಂದು ಯಾ ಕೆಲಸಗಳನ್ನು ಮಾಡಿಸಿದರೆಂದರೆ ರಸ್ತೆಗಳನ್ನು ರಿಪೇರಿ ಮಾಡಿಸುವುದು ಗದ್ದೆಗಳನ್ನು ಕಟ್ಟುವುದು ಇಂತಹ ಕೆಲಸಗಳು ಅಲ್ಲಲ್ಲಿ ನಡೆದಿವೆ. ಉಳಿದಂತೆ ಬೇರೆ ಯಾವ ಶಾಶ್ವತ ಪರಿಹಾರ ಕಾಮಗಾರಿ ಕೆಲಸಗಳು ನಡೆಯಲೇ ಇಲ್ಲ. ಈ ಬರಗಾಲ ಕಾಮಗಾರಿಗಳ ಹೆಸರಿನಲ್ಲಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಸಹ ಯಾವುದೇ ಪ್ರಯೋಜನವಾಗಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಈ ಬರಗಾಲ ಕಾಮಗಾರಿಗಳಲ್ಲಿ ಕೈಗೊಂಡಂತಹ ರಸ್ತೆ ರಿಪೇರಿ ಕೆಲಸಗಳು ಮತ್ತು ಕ್ಯಾನಲ್‌ಗಳನ್ನು ಮಾಡುವಂತಹ ಕೆಲಸಗಳನ್ನು ಅರ್ಧದಲ್ಲಿಯೇ ನಿಲ್ಲಿಸಿದ್ದೀರಿ. ಈ ಕೆಲಸಗಳನ್ನು ಪೂರ್ತಿ ಮಾಡಿದ್ದರೆ ಪ್ರಯೋಜನವಾಗುವುದಿಲ್ಲ, ಆದ್ದರಿಂದ ಆ ಕೆಲಸಗಳಿಗೆ ಸರ್ಕಾರ ಹಣದ ಸಹಾಯ ಮಾಡಿ ಆ ಕೆಲಸಗಳನ್ನು ಪೂರ್ತಿಗೊಳಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಈ ಕೆಲಸಗಳಿಗೆ ಸರ್ಕಾರದವರು ಹಣವನ್ನು ಕೊಡುವುದಕ್ಕೆ ಹಣ ಇದೆಯೋ ಇಲ್ಲವೋ ಅದನ್ನು ಸಹ ನಾವು ನೋಡಬೇಕಾಗುತ್ತದೆ. ಕಾರಣವೇನೆಂದರೆ ಇತ್ತೀಚೆಗೆ ಸರ್ಕಾರದಲ್ಲಿ ಹಣವಿಲ್ಲವೆಂದು ಸಹ ವದಂತಿಗಳು ಇವೆ. ಇನ್ನು ೧೦೦ ಬೋರ್‌ವೆಲ್‌ಗಳನ್ನು ಹಾಕಿಸಿಕೊಟ್ಟು ಒಂದು ಎಕರೆ ಎರಡು ಎಕರೆಗಳು ಇರುವಂತಹ ರೈತರಿಗೆ ನೀರಾವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ನಮ್ಮ ಹೈದ್ರಬಾದ್ ಕರ್ನಾಟಕ ಭಾಗದಲ್ಲಿ ಎಲ್ಲೂ ಈ ಯೋಜನೆಯನ್ನು ಜಾರಿಗೆ ತಂದಿಲ್ಲ. ಈ ಬೋರ್‌ವೆಲ್‌ಗಳಲ್ಲಿ ಎಷ್ಟು ಸಕ್ಸಸ್ ಆಗಿವೆ. ಎಷ್ಟು ಉಪಯೋಗವಿಲ್ಲ ಎನ್ನುವುದನ್ನು ಸಹ ತಿಳಿಸಬೇಕಾಗುತ್ತದೆ. ಬೋರ್‌ವೆಲ್‌ಗಳಲ್ಲಿ ನೀರು ಬರದೇ ನಾವು ರೈತರಿಗೆ ನೀರಾವರಿ ಸೌಕರ್ಯವನ್ನು ಮಾಡಿಕೊಟ್ಟಿದ್ದೇವೆಂದು ಹೇಳುವುದರಿಂದ ಪ್ರಯೋಜನವಾಗುವುದಿಲ್ಲ. ಇನ್ನು ಐ.ಆರ್.ಡಿ.ಪಿ. ಯೋಜನೆಯಲ್ಲಿ ತಾವು ಸಾಲವನ್ನು ಕೊಡಿಸುತ್ತಿದ್ದೀರಿ. ಯಾರಿಗೆ ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ವರಮಾನ ಇರುತ್ತದೋ ಅಂತಹವರಿಗೆ ಅಂತ್ಯೋದಯ ಮತ್ತು ನೇಗಿಲು ಭಾಗ್ಯ ಯೋಜನೆಯಡಿಯಲ್ಲಿ ಸಹ ಸಹಾಯ ಮಾಡುತ್ತಿದ್ದೀರಿ. ತಾವು ದಯಮಾಡಿ ಹಳ್ಳಿಗಳಿಗೆ ಹೋಗಬೇಕು. ಈ ಯೋಜನೆಗಳಿಂದ ಎಷ್ಟು ಜನರಿಗೆ ಅನುಕೂಲವಾಗಿದೆ ಎನ್ನುವುದನ್ನು ನೋಡಬೇಕು. ತಮ್ಮ ಅಂಕಿಅಂಶಗಳ ಪ್ರಕಾರ ೧೦ ಲಕ್ಷ ಜನರಿಗೆ ಈ ಪ್ರಯೋಜನವಾಗಿದೆಯೆಂದು ಹೇಳಿದ್ದೀರಿ. ಅದು ಸರಿಯಲ್ಲ. ಎಷ್ಟು ಜನರ ಜೀವನವನ್ನು ಬಡತನದ ರೇಖೆಯಿಂದಮೇಲಕ್ಕೆ ತೆಗೆಯಲು ಸಾಧ್ಯವಾಗಿದೆ? ಯಾವ ಜನರು ಮೊದಲು ಸುಖವಾಗಿ ಇದ್ದರೋ ಅವರಿಗೆ ಐ. ಆರ್. ಡಿ. ಪಿ. ಲೋನ್‌ಗಳನ್ನು ಕೊಟ್ಟರು. ಎಲ್ಲಾ ರೈತರುಗಳು ಈ ಲೋನ್‌ಗಳನ್ನು ಮಾಡಿ ಎಮ್ಮೆಗಳನ್ನು ಸಾಕುವುದಕ್ಕೆ ಹೊರಟರು. ಈ ಲೋನ್‌ಗಳನ್ನು ಕೊಡಿಸುವುದಕ್ಕೆ ಒಬ್ಬ ಮುಖಂಡ ಇರುತ್ತಾನೆ. ಅವನು ಎಲ್ಲಾ ಹಳ್ಳಿಗಳಿಗೆ ಸಾಲ ಕೊಡಿಸುತ್ತೇನೆ, ಆ ಹಣದಲ್ಲಿ ಎಮ್ಮೆ ತೆಗೆದುಕೊಳ್ಳಿ ಎಂದು ಹೇಳಿ ಅವರನ್ನೆಲ್ಲಾ ಬಿ. ಡಿ. ಒ. ಆಫೀಸಿಗೆ ಕರೆದುಕೊಂಡು ಒಬ್ಬೊಬ್ಬರಿಗೆ ೬ ಸಾವಿರ ರೂಪಾಯಿಗಳನ್ನು ಸಾಲ ಕೊಡಿಸುತ್ತೇನೆ. ನಮ್ಮ ಜಿಲ್ಲೆಗಳು ಮೊದಲೇ ಬರಗಾಲಕ್ಕೆ ಸಿಕ್ಕಿರುವ ಜಿಲ್ಲೆಗಳು. ಎಮ್ಮೆಗಳಿಗೆ ಹುಲ್ಲು ಸಿಗುವುದಿಲ್ಲ. ಅಂಥಹ ಕಡೆ ಸರಕಾರ ಈ ಸ್ಕೀಮ್‌ಗಳನ್ನು ಇಂಪ್ಲಿಮೆಂಟ್ ಮಾಡುವಾಗ ಅಟ್‌ಲೇಸ್ಟ್ ಚಿಂತನೆ ಮಾಡಬೇಕಾಗಿತ್ತು. ರೈತ ಎಲ್ಲಿಂದ ಹುಲ್ಲನ್ನು ತರುತ್ತಾನೆ? ದನಗಳಿಗೆ ಮೇವು ಎಲ್ಲಿ ಇದೆ? ಈ ಕಾರ್ಯಕ್ರಮದ ಮೂಲಕ ರೈತರೇನೋ ಎಮ್ಮೆಗಳನ್ನು ಕೊಂಡುಕೊಂಡರು. ಹುಲ್ಲು ಸಿಗದೆ ಅವುಗಳೆಲ್ಲಾ ಸತ್ತುಹೋದವು. ಸತ್ತು ಹೋದ ಎಮ್ಮೆ ಕಿವಿಗಳನ್ನು ಬ್ಯಾಂಕಿನ ಮುಂದೆ ತಂದು ಜನರು ಇಡುತ್ತಿದ್ದಾರೆ. ಇಂಥ ಕೇಸ್‌ಗಳು ಒಂದಲ್ಲ ಎರಡಲ್ಲ, ಸಾವಿರಾರು ಕೇಸ್‌ಗಳು ನಮ್ಮ ಜಿಲ್ಲೆಯಲ್ಲಿ ಇವೆ. ಎಮ್ಮೆಗಳನ್ನು ಸಾಕಲು ತೆಗೆದುಕೊಂಡ ಸಾಲವನ್ನು ಜನರು ವಾಪಸ್ ಕೊಡುವುದಿಲ್ಲ. ಕಾರಣ ಅವರ ಹತ್ತಿರ ಹಣ ಕೊಡುವುದಕ್ಕೆ ಶಕ್ತಿ ಇಲ್ಲ. ರೈತರುಗಳು ಸುಮ್ಮನೆ ಬ್ಯಾಂಕಿನ ಸಾಲಗಾರರನ್ನಾಗಿ ಮಾಡಲಾಗಿದೆ. ಸಾಲವನ್ನು ವಸೂಲಿ ಮಾಡುವುದಕ್ಕೆ ಸರ್ಕಾರದ ಅಧಿಕಾರಿಗಳು ಬಂದಾಗ ರೈತರುಗಳು ಹಳ್ಳಿಯನ್ನು ಬಿಟ್ಟು ಹೋಗುವಂಥ ಪರಿಸ್ಥಿತಿ ಬಂದಿದೆ. ಈ ರೀತಿ ಸಾಲ ಕೊಟ್ಟು ರೈತರುಗಳನ್ನು ಸಾಲಗಾರರನ್ನಾಗಿ ಮಾಡಿರುವುದರಿಂದ ಜನತಾ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್ ಬಹಳ ಚೆನ್ನಾಗಿದೆಯೆಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಜಮೀನು ಡ್ರೈ ಆಗಿದೆ, ಸರ್ಕಾರದ ಕಛೇರಿಯು ಡ್ರೈ ಆಗಿದೆ. ಸರ್ಕಾರದವರು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್ ಮಾಡಿ, ಅದಕ್ಕೆ ಒಬ್ಬ ಅಧ್ಯಕ್ಷನನ್ನು ನೇಮಿಸಿ ಅವನಿಗೆ ಮಿನಿಸ್ಟರ್‌ಗಳಿಗೆ ಕೊಡುವ ಎಲ್ಲಾ ಸೌಲಭ್ಯಗಳನ್ನು ಕೊಟ್ಟು, ಅಂದರೆ ಅವನಿಗೆ ಕಾರು ಕೊಟ್ಟು, ಆಫೀಸ್ ಕೊಟ್ಟು ಹಣ ಖರ್ಚು ಮಾಡುತ್ತಿದ್ದಾರೆ. It is an extra burden to the exchequer of the State ಎಷ್ಟು ಉತ್ಪಾದನೆ ಮಾಡಿದ್ದಾರೆ ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟಿನಿಂದ ಎಂದು ನನಗೆ ಮಾತ್ರ ಗೊತ್ತಾಗುತ್ತಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ವ್ಯವಸಾಯ ಎಂದರೇನು ಎಂಬುದೇ ನಿಮಗೆ ಗೊತ್ತಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ವ್ಯವಸಾಯ ಮಾಡಿ ಗೊತ್ತಿಲ್ಲದಿದ್ದರೂ ನೋಡಿ ತಿಳಿದುಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಕಡೆಯೆಲ್ಲಾ ಡ್ರೈ ಲ್ಯಾಂಡೇ ಇರುವುದರಿಂದ, ನಮಗೆ ವೆಟ್ ಲ್ಯಾಂಡ್ ಅಂದರೆ ಗೊತ್ತಿರುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ಗೆ ಜನತಾ ಸರ್ಕಾರವು ಎರಡು ವರ್ಷದಿಂದ ಬಹಳ ಹಣವನ್ನು ಖರ್ಚು ಮಾಡಿದೆ. ಈ ಮಂಡಳಿಗೆ ಛೇರ್ಮನ್ ಒಬ್ಬರನ್ನು ಕೊಟ್ಟಿದೆ, ಆಫೀಸ್ ಇದೆ. ಇದು ನೆಸಸರಿಇತ್ತೆ? ಇದರಿಂದ ಅನುಕೂಲವಾಗುತ್ತದೆ ಎಂದರೆ ಅದನ್ನು ಹ್ಯಾಪಿಯಾಗಿ ಅಕ್ಸೆಪ್ಟ್ ಮಾಡುತ್ತೇನೆ. ಇದರಿಂದ ಲಾಭ ಏನೂ ಆಗಿಲ್ಲ.

ಶ್ರೀ ಸಿ. ಭೈರೇಗೌಡ.—ಮಾನ್ಯ ಸದಸ್ಯರಾದ ಖರ್ಗೆಯವರು ಅವರ ಕಡೆ ಬರೀ ಡ್ರೈ ಲ್ಯಾಂಡ್ ಇರುವುದರಿಂದ ವೆಟ್ ಲ್ಯಾಂಡ್ ಅಂದರೆ ಏನು ಅನ್ನುವುದೇ ಗೊತ್ತಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶಾಣಪ್ಪನವರಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲ. ಗೊತ್ತಿಲ್ಲದೇ ಇರುವ ವಿಚಾರದ ಮೇಲೆ ಇವರು ಮಾತನಾಡುತ್ತಿದ್ದಾರೆ. ಈಗ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಬದಲಾಗಿ, ಬೇಡಿಕೆ ಮೇಲೆ ಚರ್ಚೆ ಬಂದಾಗ ಮಾತನಾಡಲಿ. ಗೌರ್ನರ್ ಅಡ್ರಸ್ ಮೇಲೆ ಮಾತನಾಡುವಾಗ ಮಾತನಾಡಿದರೆ, ಇವರಿಗೆ ವಿವರವನ್ನು ಕೊಡುವುದಕ್ಕಾಗುವುದಿಲ್ಲ. ಅದನ್ನು ಅರ್ಥಮಾಡಿಕೊಳ್ಳಬೇಕು.

ಶ್ರೀ ಕೆ. ಬಿ. ಶಾಣಪ್ಪ.—ಈಗ ಸದನದಲ್ಲಿ ಒಬ್ಬರೂ ಮಂತ್ರಿಗಳು ಇಲ್ಲ. ಸರ್ಕಾರದ ಬಗ್ಗೆ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಬರೀ ಮಾಜಿ ಮಂತ್ರಿಗಳೇ ಇದ್ದಾರೆ.

ಅಧ್ಯಕ್ಷರು.—ನಿಮ್ಮ ಕಡೆಯೂ ಎಲ್ಲಾ ಮಾಜಿ ಮಂತ್ರಿಗಳೇ ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಮಾತನಾಡಿದಾಗ ಮಾಜಿ ಆರೋಗ್ಯ ಸಚಿವರಾದ ಮಾನ್ಯ ತಿಮ್ಮೇಗೌಡರು ಡಿಫೆಂಡ್ ಮಾಡಿಕೊಂಡರು ಈಗ ಮಾಜಿ ಫಿಷರಿ ಮಂತ್ರಿಗಳು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಅರಣ್ಯ ಅಫೋರ್‌ಸ್ಟೇಷನ್ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ಅಫೋರ್‌ಸ್ಟೇಷನ್ ನೆಪದಲ್ಲಿ ಜನತಾ ಸರ್ಕಾರದವರು, ನಮ್ಮ ರಾಜ್ಯದಲ್ಲಿ ಗಿಡಗಳನ್ನು ಬೆಳೆಸಬೇಕೆಂಬ ಹೆಸರಿನಲ್ಲಿ ಚಿಂತನೆ ಮಾಡಿ ನಮ್ಮ ರಾಜ್ಯದಲ್ಲಿದ್ದಂಥ ಎಲ್ಲಾ ಸರ್ಕಾರಿ ಜಮೀನನ್ನು ಅಂದರೆ 'ಸಿ, ಮತ್ತು 'ಡಿ' ಭೂಮಿಯನ್ನೆಲ್ಲಾ ಕೊಟ್ಟುಬಿಟ್ಟಿದ್ದಾರೆ. ಹೋದ ಸಲ ಇದರ ಬಗ್ಗೆ ಚರ್ಚೆಯಾಗಿದೆ. ಮೊನ್ನೆಯೂ ಕೂಡ ಚರ್ಚೆಯಾಯಿತು. ಆ ಸಮಯದಲ್ಲಿ ವೀಕರ್ ಸೆಕ್ಷನ್ ಆಫ್ ದಿ ಸೊಸೈಟಿ ಜನರು, ಅಂದರೆ ಯಾರನ್ನು ಹರಿಜನ ಎನ್ನುತ್ತೇವೆಯೋ ಅವರು ಸುಮಾರು ೧೫.೨೦ ವರ್ಷಗಳಿಂದ ಸರ್ಕಾರಿ ಜಮೀನನ್ನು ಉತ್ತು ವ್ಯವಸಾಯ ಮಾಡುತ್ತಿದ್ದಾರೆ. ಅಲ್ಲಿ ದಯಮಾಡಿ ವ್ಯವಸ್ಥೆ ಮಾಡಿಕೊಡಿ.

ಅಧ್ಯಕ್ಷರು.—ಐದು ಘಂಟೆಯೊಳಗೆ ತಾವು ಮುಗಿಸಿಬಿಡಿ. ನಿಮ್ಮ ಲೀಡರ್ ಇಲ್ಲ ಎಂದು ನಿಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೇ, ಅಸೆಂಬ್ಲಿಯಲ್ಲಿ ನಾನು ಬಂದಮೇಲೆ ನಾನೂ ಲೀಡರ್. ನಿಮ್ಮ ಸಿ. ಎಂ. ಇಲ್ಲದಿದ್ದರೆ, ರಾಚಯ್ಯನವರು ಲೀಡರ್, ಅವರೂ ಇಲ್ಲದಿದ್ದರೆ ಈಗ ಕೃಷ್ಣಪ್ಪನವರು ಇದ್ದಾರೆ. ಹಾಗೇನೆ ನಾನು ಕೂಡ ಲೀಡರ್, ಆಗಿದ್ದೇನೆ.

ಅಧ್ಯಕ್ಷರು.—ಹಾಗಾದರೆ, ನೀವು ಚೋಟಾ ಲೀಡರ್, ಅವರು ಬಡಾ ಲೀಡರ್...... ಆದಂತಾಯಿತು, ನಿಮ್ಮ ಭಾಷೆಯಲ್ಲಿ.

ಶ್ರೀ ಕೆ. ಬಿ. ಶಾಣಪ್ಪ.—ತಾವುಗಳು ಈಗ ಮಿನಿ ವಾಟರ್‌ಸ್ಕೀಮ್‌ನ್ನು ಜಾರಿಗೆ ತಂದಿದ್ದೀರಿ. ಬಹಳ ಸಂತೋಷದ ಕಾರ್ಯ. ಅವಷ್ಟು ಮಟ್ಟಿಗೆ ಹಳ್ಳಿಗಳಲ್ಲಿ ಆ ಯೋಜನೆಯನ್ನು ಮಾಡಿದ್ದೀರಿ. ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿದ್ದೀರಿ. ಇದರ ಮೂಲಕ ಹಳ್ಳಿಗಳ ನೀರಿನ ತೊಂದರೆಯನ್ನು ನಿವಾರಿಸಿ, ಅವರ ಆರ್ಥಿಕ ಶಕ್ತಿಗೆ ಒಂದು ಬಲಕೊಟ್ಟು ಸಹಕಾರ ಮಾಡಿದ್ದೀರಿ. ಆದರೆ ಮಿನಿವಾಟರ್ ಹಾಕಿದ ನಂತರ ಯಾವ ಕಡೆಗಳಲ್ಲಿ ಈ ಸ್ಕೀಮ್ ಸರಿಯಾಗಿ ನಡೆಯುತ್ತಿದೆ, ಎಲ್ಲಿ ಇದು ಯಶಸ್ವಿಯಾಗಿದೆ ಎಂಬ ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿಲ್ಲಿ. ಯಾವ ಉದ್ದೇಶಕ್ಕಾಗಿ ಈ ಯೋಜನೆಗಳನ್ನು ಮಾಡಿಕೊಂಡಿದ್ದೀರಿ, ಅದರ ಉದ್ದೇಶ ಜನಗಳಿಗೆ ಸರಿಯಾಗಿ ಮುಟ್ಟಿದೆಯೋ ಇಲ್ಲವೇ ಎಂಬುದನ್ನು ನೋಡಿದ್ದೀರಾ ? ಅನೇಕ ಕಡೆಗಳಲ್ಲಿ ಮಿನಿವಾಟರ್‌ಸ್ಕೀಮ್‌ನಲ್ಲಿ ಜನರು ಖರ್ಚು ಮಾಡಿದ ಹಣ ಉಪಯೋಗವಿಲ್ಲದಂತಾಗಿದೆ. ಕಾರಣ ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ.

ಪಿ. ಹೆಚ್. ಇ. ಇಲಾಖೆಯವರು ಹೇಳುತ್ತಾರೆ ಏನೆಂದರೆ, ಮ್ಯಾಕಾನಿಕ್ಸ್ ಇಲ್ಲ, ಸಲಕರಣೆ ಸಾಮಗ್ರಿಗಳು ಇಲ್ಲ, ಇಂಜಿನೀಯರ್ಸ್ ಇಲ್ಲ, ವಾಹನಗಳು ಇಲ್ಲ ಎಂದು. ನಮ್ಮ ಜಿಲ್ಲೆಯಲ್ಲಿ ೧,೩೦೦೦ ಹಳ್ಳಿಗಳು ಇವೆ. ಆದರೆ ಇದಕ್ಕೆ ಉಸ್ತುವಾರಿಗೆ ಇರುವಂತಹ ಅಧಿಕಾರಿಗಳ ಸಂಖ್ಯೆ ೫೦ ಮಾತ್ರ. ಇದರಲ್ಲಿ ಕೇವಲ ನಾಲ್ಕೈದು ಕೊಳವೇಬಾವಿಗಳನ್ನು ಮಾತ್ರ ರಿಪೇರಿ ಮಾಡುವಂತಹ ಅನುಕೂಲತೆ ಇದ್ದರೆ ಹೇಗೆ ಯೋಜನೆ ಸಫಲವಾಗುತ್ತದೆ ? ಇಂತಹ ಪರಿಸ್ಥಿತಿಯಲ್ಲಿ ಅವರು ಎಲ್ಲಾ ಹಳ್ಳಿಗಳಿಗೂ ಹೋಗಿ ರಿಪೇರಿ ವ್ಯವಸ್ಥೆ ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಇಂತಹ ಸಮಸ್ಯೆಗಳು ಬಗೆಹರಿಯುವಂತಾಗ ಬೇಕು, ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನು ಹಾಕಿಯೂ ಉಪಯೋಗ ಇಲ್ಲದಂತಾಗಿದೆ. ಕಾರಣ ರಿಪೇರಿ ಮಾಡುವ ವ್ಯವಸ್ಥೆ ಇಲ್ಲದಿರುವುದು. ಇದರ ಬಗ್ಗೆ ಸೂಕ್ತ ಗಮನ ಕೊಡಬೇಕು.

ಇನ್ನು ಮಾನ್ಯ ಸದಸ್ಯರಾದ ಕಾಂತಾರವರು ಹೇಳಿದರು ಗುಲ್ಬರ್ಗ ನಗರಕ್ಕೆ ನೀರು ಒದಗಿಸಬೇಕು. ಎಂದು. ಇದನ್ನು ಸ್ಪೆಷಲ್ ಸ್ಕೀಮ್‌ನಲ್ಲಿ ತೆಗೆದುಕೊಂಡಿದ್ದಾರೆ ಎಂದು ಕಾಣುತ್ತದೆ. ಮುಖ್ಯವಾಗಿ ಮೂರು ಲಕ್ಷ ಜನಸಂಖ್ಯೆ ಇರುವಂತಹ ಒಂದು ಗುಲ್ಬರ್ಗದಲ್ಲಿ ಯಾವ ಜನರು ಸುಮಾರು ೧೫ ವರ್ಷಗಳಿಂದ ಭೀಕರವಾದ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮೊದಲು ಇಲ್ಲಿ ಕೇವಲ ಐದು ರೂಪಾಯಿಗಳನ್ನು ಇದ್ದುದನ್ನು ತಮ್ಮ ಸರಕಾರದವರು ಈಗ ೨೫ ರೂಪಾಯಿಗಳಾಗಿ ಮಾಡಿದ್ದಾರೆ. ಡಿಸಿ ಯವರನ್ನು ಕೇಳಿದ್ದಾಯಿತು. ಸರಿಯಾಗಿ ನೀರು ಸರಬರಾಜು ಕೂಡ ಇಲ್ಲ. ಎರಡು ದಿನಗಳಿಗೊಮ್ಮೆ ನೀರು ಬಿಡುವುದು, ಅದು ಕೂಡ ಕೇವಲ ಅರ್ಧ ಗಂಟೆಯಕಾಲ ಮಾತ್ರ. ತಿಂಗಳಲ್ಲಿ ೧೫ ದಿನಗಳ ಕಾಲ ನೀರು ಬಿಟ್ಟು ೨೫ ರೂಪಾಯಿಗಳನ್ನು ತೆಗೆದು ಕೊಳುತ್ತಿದ್ದೀರಿ. ಇನ್ನಾದರೂ ಒಂದು ಸೂಕ್ತ ವ್ಯವಸ್ಥೆ ಮಾಡಿ ದಿನಾಲು ನೀರು ಬಿಡುವ ವ್ಯವಸ್ಥೆ ಮಾಡುತ್ತೀರಾ ? ಹೀಗೆ ಒಂದು ವ್ಯವಸ್ಥೆ ಮಾಡಿದ ನಂತರ ಜನರು ನೀವು ಕೇಳುವ ೨೫ ರೂಪಾಯಿಗಳನ್ನು ಸಂತೋಷದಿಂದ ಕೊಡುವುದಕ್ಕೆ ಹಿಂಜರಿಯುವುದಿಲ್ಲ, ಅದನ್ನು ಮಾಡಿ. ಆದುದರಿಂದ ಸರಿಯಾದ ವ್ಯವಸ್ಥೆ ಮಾಡದೇನೇ ದರ ಹೆಚ್ಚಿಸುವುದು ಸರಿಯಲ್ಲ ಎಂದು ಹೇಳುತ್ತಾ ಈ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೫-೦೦ ಪಿ.ಎಂ.

ಶ್ರೀ ಕೆ.ಬಿ. ಶಾಣಪ್ಪ.—ಕೊನೆಯಲ್ಲಿ ಜನತಾ ಹೌಸಸ್ ಬಗ್ಗೆ ಹೇಳಿದರೆ ಸುಮಾರು ೧೪೫೭೩೪೩ ಫ್ಯಾಮಿಲಿಗಳಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಹಾಗೆಯೇ ಈ ವರ್ಷದಲ್ಲೇ ೫೦ ಸಾವಿರ ಮನೆ ಕಟ್ಟುವುದಾಗಿಯೂ ಹೇಳಿದ್ದಾರೆ. ವಾಸ್ತವಿಕವಾಗಿ ನಾನು ಹೇಳಬೇಕಾದರೆ ಪ್ರತಿಯೊಂದು ಜಿಲ್ಲೆಯಲ್ಲೂ ಪ್ರಾಕ್ಟಿಕಲಾಗಿ ಎಷ್ಟು ಮನೆಗಳನ್ನು ಕನ್‌ಸ್ಟ್ರಕ್ಟ್ ಮಾಡಿದ್ದೀರಿ ? ನನಗೆ ತಿಳಿದ ಹಾಗೆ ನಮ್ಮ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ಕಟ್ಟಬೇಕು ಎಂಬ ಸ್ಕೀಮು ಮಾತ್ರ ಇದೆ. ಹಣ ಮಾತ್ರ ಇಲ್ಲ, ಅಧಿಕಾರಿಗಳನ್ನು ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲ ಸಾರ್ ಬರೀ ಪ್ಲಾನ್ ಮಾತ್ರ ನಮಗೆ ಕೊಡಲಾಗಿದೆ ಎನ್ನುತ್ತಾರೆ. ಇಲ್ಲೂ ಅಷ್ಟೇ ನಮ್ಮ ಹತ್ತಿರ ಬರೀ ಅಂಕಿ ಅಂಶಗಳು ಮಾತ್ರ ಇರುವುದು.

ವಿದ್ಯಾರ್ಥಿಗಳಿಗೆ ಲಕ್ಷಾಂತರ ಪುಸ್ತಕ ಕೊಡುತ್ತೇವೆಂದಿರಿ, ಬಡಬಗ್ಗರಿಗೆ ಬಟ್ಟೆ ಕೊಡುತ್ತೇವೆಂದಿದ್ದೀರಿ. ಸಂತೋಷ ಒಂದು ಸಂತೋಷ ಎಂದರೆ ಈ ಸಲ ಸೀರೆ ಮತ್ತು ಕುಪ್ಪಸ ಹಂಚಲಿಲ್ಲ. ರಾಜ್ಯಪಾಲರು ಅವುಗಳ ಬಗ್ಗೆ ವಿವರವಾದ ವರ್ಣನೆ ಮಾಡಿಲ್ಲ. ಜನತಾ ಸೀರೆಗಳ ಬಗ್ಗೆಯೂ ಹೇಳಿಲ್ಲ. ಹೋದ ಸದನದಲ್ಲಿ ಜಾಸ್ತಿ ತಕರಾರು ಬಂದಿದ್ದರಿಂದ ಈ ಸಲ ಅದೆಲ್ಲ ಹೇಳುವ ಧೈರ್ಯ ಮಾಡಿಲ್ಲ. ಅವುಗಳ ಹಂಚಿಕೆಯಂತೂ ಎಲ್ಲಾ ಜಿಲ್ಲೆಯಲ್ಲೂ ನಿಂತು ಹೋಗಿದೆ. ನಮ್ಮ ಜಿಲ್ಲೆಯಲ್ಲಂತೂ ಇಲ್ಲ. ಬಹುಶಃ ಜನತಾ ಎಂ.ಎಲ್.ಎ.ಗಳೆಲ್ಲಿದ್ದಾರೋ ಆ ಕ್ಷೇತ್ರಗಳಲ್ಲಿ ಮಾತ್ರ ಹಂಚುತ್ತಿರಬಹುದು.

ಆಹಾರಧಾನ್ಯಗಳ ವಿತರಣೆ ಬಗ್ಗೆ ಆಗಿರುವ ಅಡಚಣೆಯನ್ನು ತಾವೆಲ್ಲರೂ ಒಪ್ಪುತ್ತೀರಿ. ಬಹಳಷ್ಟು ಹಳ್ಳಿಗರು ಐದಾರು ಮೈಲಿ ಆಹಾರಧಾನ್ಯಕ್ಕೆಂದು ಹೋಗಿ ಪಡೆಯಬೇಕಾಗಿದೆ. ನೀವು ಏಜೆನ್ಸಿ ಕೊಟ್ಟಿರುವವರು ಹಳ್ಳಿಗಳಿಗೆ ಹೋಗಿ ಹಂಚುವ ಪರಿಪಾಠ ಇಟ್ಟುಕೊಂಡಿಲ್ಲ. ಜನಗಳೇ ನಮ್ಮಲ್ಲಿಗೆ ಬರಲಿ ಎನ್ನುತ್ತಾರೆ ಧಿಮಾಕಿನಿಂದ ಅವರು ಊರೂರುಗಳಲ್ಲಿ ಇದಕ್ಕಾಗಿ ಭಯಂಕರ ಜಗಳ ಆಗಿವೆ. ದಯವಿಟ್ಟು ಮೊದಲೇ ಇದ್ದ ಸಿಸ್ಟಮನ್ನೇ ಜಾರಿಗೊಳಿಸಿ ಹಿಂದಿನ ಆಹಾರ ಮಂತ್ರಿಗಳಾದ ಶ್ರೀ ಬಸವಣ್ಣೆಪ್ಪನವರ ಜೊತೆ ಇದನ್ನೆಲ್ಲಾ ನಾನು ಹೇಳಿಕೊಂಡಿದ್ದೇನೆ. ಮೊದಲು ಯಾವ ರೀತಿ ಸೊಸೈಟಿಗಳನ್ನು ನಡೆಸುತ್ತಿದ್ದರೋ ಅದೇ ರೀತಿ ಈಗಲೂ ಮತ್ತೆ ತನ್ನಿ. ಇಷ್ಟು ಮಾತನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್.ಹೆಚ್. ಗೌಡರು.—ಸನ್ಮಾನ್ಯ ಸಭಾಪತಿಗಳೇ, ಕಳೆದ ದಿನಾಂಕ ೨೯ರಂದು ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ನಾನು ವಂದನೆಗಳನ್ನೂ ಗೌರವವನ್ನೂ ಅರ್ಪಿಸುತ್ತಾ ನಾಲ್ಕು ಮಾತುಗಳನ್ನು ಆಡುತ್ತೇನೆ. ನಾನು ಮಾತನಾಡುವ ಪೂರ್ವದಲ್ಲಿ ಮಾಡಬೇಕಾದಂತಹ ಎರಡು ಮುಖ್ಯ ಕೆಲಸಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡು ಮುಖ್ಯ ಕೆಲಸಗಳೆಂದರೆ, ಮೊದಲನೆಯದಾಗಿ ಸ್ವಾತಂತ್ರ್ಯ ಬಂದಂದಿನಿಂದ ಇಂದಿನವರೆಗೆ ನಮ್ಮ ಕರ್ನಾಟಕದ ಜನರ ಜೀವನದಲ್ಲಿ ಏನೇನು ಸ್ಥಿತ್ಯಂತ್ರವಾಯಿತು ಎನ್ನುವುದರ ಒಂದು ಸಿಂಹಾವಲೋಕನದ ತರುವಾಯ ಎರಡನೆಯದಾಗಿ ನಮ್ಮ ರಾಜ್ಯಪಾಲರ ಭಾಷಣದ ಒಂದು ಸಮಗ್ರವಾದಂತಹ ಚಿತ್ರಣ, ಇವೆರಡನ್ನು ಒಟ್ಟಿಗೆ ನೋಡಿದರೆ ನಿಜವಾಗಿಯೂ ಏನು ಇಂದಿನ ಮತ್ತು ಹಿಂದಿನ ಜೀವನದ ಸಮಸ್ಯೆಗಳನ್ನು ನೋಡಿಕೊಂಡು ಮುಂದೆ ಆಗಬೇಕಾದಂತಹ ಸಮಸ್ಯೆಯ ಪರಿಹಾರದ ಬಗ್ಗೆ ಒಂದು ಸೂಚನೆಯನ್ನು ಕೊಡಬಹುದು. ಕರ್ನಾಟಕದಲ್ಲಿ ಈ ೪೦ ವರ್ಷಗಳ ಕಾಲ, ಅಂದಿನಿಂದ ಹೇಳುವುದಿಲ್ಲ ೫ ವರ್ಷಗಳಿಂದು ನಾನು ಹೇಳುತ್ತೇನೆ ಏಕೆಂದರೆ ೧೯೮೩ ರಿಂದ ಇಲ್ಲಿಯವರೆಗೆ ಆಳಿದಂತಹ ಜನತಾ ಪಕ್ಷದ ಆಡಳಿತದಲ್ಲಿ ಸ್ವಲ್ಪ ಮಟ್ಟಿಗಾದರೂ ಒಂದು ಸುಧಾರಣೆ ಆದದ್ದರಿಂದ ಕಳೆದ ೫ ವರ್ಷಗಳಲ್ಲಿ ಏನಾಯಿತು ಎಂಬ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ ಅಮೆರಿಕೆಯ ಬೋಸ್ಟನ್ ಪಟ್ಟಣದಲ್ಲಿ ಇಟ್ಟಂತಹ ಯಂತ್ರ ಮಾನವ ಯಾರೇ ಆ ಸ್ಥಳಕ್ಕೆ ಬಂದರೂ ಕೂಡ ಮೊದಲು ಹೇಳುವಂತಹ ಮಾತೆಂದರೆ ನಾನು ಯಂತ್ರ ಮಾನವ ಜೀವಂತ ಮಾನವ ಅಲ್ಲ, ಜನರೇ ನಿಮಗೆ ನನ್ನ ಹಾರ್ದಿಕ ಶುಭಾಶಯಗಳು ಎಂದು ಹೇಳುತ್ತಾನೆ. ಇದು ಪ್ರತಿದಿನ ಪ್ರತಿ ಕ್ಷಣ ನಡೆಯುತ್ತಿರುತ್ತದೆ ಆದರೆ ಯಾವ ಯಂತ್ರ ಮಾನವ ಈ ಮಾತನ್ನು ಹೇಳುತ್ತಾನೆಯೋ ಅದನ್ನು ತನ್ನ ಸ್ವಂತ ಬುದ್ಧಿಯಿಂದ ಹೇಳುವುದಲ್ಲ ಆ ರೀತಿ ರಚನೆಯಾಗಿರುತ್ತದೆ. ಒಂದು ನಗರಕ್ಕೆ ಪ್ರವೇಶ ಮಾಡುವಾಗ ನಿಮಗೆ ಸುಸ್ವಾಗತ ನಿಮ್ಮ ಪ್ರಯಾಣ ಸುಖಕರವಾಗಲೀ ಎಂದು ಹೇಗೆ ಹೇಳುತ್ತೇವೆಯೋ ಆ ರೀತಿ ಇದು ರಚನೆಯಾಗಿದೆ. ಈ ೫ ವರ್ಷಗಳ ಅವಧಿಯಲ್ಲಿ ಏನಾಗಿದೆಯೆಂದರೆ ಪ್ರತಿ ವರ್ಷ ಜನರಿಗೆ ಆಶಯವನ್ನು ತೋರಿಸುವುದು ಭಾಷಣಗಳನ್ನು ಬಿಗಿಯುವುದು ಮತ್ತು ಘೋಷಣೆಗಳನ್ನು ಕೂಗುವುದು, ಆ ಘೋಷಣೆಗಳಲ್ಲಿ ಸಮಾಜವಾದ ಘೋಷಣೆ ಒಂದು, ಇದನ್ನೆಲ್ಲಾ ಕೂಗಿ ಕೂಗಿ ಜನರೇ ನಿಮಗೆ ಶುಭವಾಗಲೀ ನಿಮ್ಮ ಜನಜೀವನದಲ್ಲಿ ಹರ್ಷ ಉಂಟಾಗಲೀ ಅಂದರೆ ನಿಜವಾಗಿಯೂ ಏನೂ ವ್ಯತ್ಯಾಸವಾಗುವುದಿಲ್ಲ. ಜನಜೀವನ ಹೇಗೆ ಇದೆಯೋ ಹಾಗೇ ಇರುತ್ತದೆ ಅಷ್ಟೇ ಅಲ್ಲ ಯಾವ ಕೆಲಸವನ್ನು ಮಾಡದೇ ಇರುವುದರಿಂದ ಮತ್ತಷ್ಟು ಹಿಂದೆ ಹೋಗುತ್ತೇವೆಯೋ ಹೊರತು ಮುಂದೆ ಬರುವುದಿಲ್ಲ. ಈ ಸಲದ ನಮ್ಮ ರಾಜ್ಯಪಾಲರ ಭಾಷಣವನ್ನು ಅಭ್ಯಾಸ ಮಾಡಿ ನೋಡಿದಾಗ ಈ ಕರ್ನಾಟಕದಲ್ಲಿನ ಕಾರ್ಮೋಡಗಳು ಕರಗಿ ಮುಂಬೆಳಕು ತೋರುತ್ತದೆಂದು ನನಗೆ ಅನಿಸುತ್ತದೆ, ಅಂತಹ ಒಂದು ಉತ್ತಮವಾದ ಕಾರ್ಯಕ್ರಮಗಳಿದ್ದಂತಹ ಭಾಷಣವನ್ನು ಅವರು ಮಾಡಿದ್ದಾರೆ. ಅದಕ್ಕಾಗಿ ನಾನು ಅದನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ಎಲ್ಲಕ್ಕಿಂತ ಮೊದಲು ಹಳ್ಳಿಯ ಜನರಿಗೆ ಅಂದರೆ ಯಾರು ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ ಆ ಜನರಿಗೆ ಏನು ಕೊಟ್ಟಿದ್ದೇವೆ ಎಂಬುದನ್ನು ವಿಚಾರ ಮಾಡಬೇಕು ಮತ್ತು ಅವರಿಗೆ ಅಂದರೆ ಬಡಬಗ್ಗರಿಗೆ ಅಗತ್ಯವಾದಂತಹ ವಸ್ತುಗಳನ್ನು ನಾವು ಕೊಟ್ಟಿದ್ದೇವೆಯೋ ಎಂಬುದನ್ನು ವಿಚಾರ ಮಾಡಿ ನೋಡಬೇಕಾಗುತ್ತದೆ. ನಾವು ಯೋಜನೆಗಳನ್ನು ಹಾಕಿಕೊಂಡಿರಬಹುದು, ಆ ಯೋಜನೆಗಳ ಅವಧಿ ಮುಗಿದು ಹೋಗಿರಬಹುದು, ಯೋಜನೆಗೆ ಹಾಕಿದ ಹಣವೆಲ್ಲಾ ಖರ್ಚಾಗಿರಬಹುದು ಆದರೆ ಜನರ ಜೀವನದಲ್ಲಿ ಯಾವುದೇ ಒಂದು ಬದಲಾವಣೆಯಾಗದೇ ಇದ್ದರೆ ಈ ಯೋಜನೆ ವ್ಯರ್ಥ. ಇದು ನಮ್ಮ ಕರ್ನಾಟಕದಲ್ಲೇ ಇರಲಿ ಇಲ್ಲವೇ ಭಾರತದಲ್ಲೇ ಇರಲಿ ಜನರ ಜೀವನದಲ್ಲಿ ಒಂದು ಗಣನೀಯವಾದಂತಹ ಬದಲಾವಣೆ ಆಗಿಲ್ಲ. ಏಕೆ ಬದಲಾವಣೆಯಾಗಿಲ್ಲವೆಂದರೆ ಮತ್ತೆ ಮತ್ತೆ ಆ ಬಡತನ ಮತ್ತು ಅಂದಿನ ಆ ಮೌಢ್ಯ ನಮ್ಮಲ್ಲಿ ಏಕೆ ತುಂಬಿಕೊಂಡಿದೆ ಎಂದರೆ ನಮ್ಮ ಭಾರತ ದೇಶ ಅನ್ನುವುದು ಒಂದು ಹಳ್ಳಿಯ ದೇಶ, ಹಳ್ಳಿಗಳಿಂದ ಕೂಡಿದಂತಹ ದೇಶ ನಮ್ಮ ಜನ ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಭಾರತ ಒಕ್ಕಲುತನವನ್ನು ಒಳಗೊಂಡಂಥಾ ದೇಶವಾಗಿದ್ದು ಇವರ ಮುಖ್ಯ ಉದ್ಯೋಗ ಒಕ್ಕಲುತನ, ಇದನ್ನು ಕಡೆಗಣಿಸಿ ಶೇಕಡ ೧೦–೧೫ ರಷ್ಟು ಜನಕ್ಕೆ ಯಾವ ವಸ್ತುಗಳನ್ನು ಬೇಕೋ ಅದನ್ನು ಉತ್ಪಾದಿಸಿ ಶೇಕಡ ೮೫ ರಷ್ಟು ಜನರಿಗೆ ಯಾವ ವಸ್ತುಗಳು ಬೇಕೋ ಅವುಗಳನ್ನು ಕಡೆಗಣಿಸಿದ್ದರ ಪ್ರತಿಫಲ ಹಾಗೂ ಅದನ್ನು ಕಡೆಗಣಿಸಿ ಯೋಜನೆ ಗಳನ್ನು ಹಾಕಿದ್ದರ ಪ್ರತಿಫಲವನ್ನು ಇವತ್ತಿನ ದಿವಸ ಅನುಭವಿಸುತ್ತಿದ್ದೇವೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಏನೇ ಇರಲಿ, ಕರ್ನಾಟಕದಲ್ಲಿ ಬಡತನದಲ್ಲಿ ಹೊಟ್ಟೆಗೂ ಕೂಡಾ ನಾಲ್ಕು ವರ್ಷ ಕಾಲ ಬರಗಾಲ ಬಂತು. ಭೀಕರವಾದಂಥ ಬರಗಾಲ. ಈ ವರ್ಷ ಅಂಥ ಬರಗಾಲ ಕರ್ನಾಟಕದ ಬೇರೆ ಜಿಲ್ಲೆಗಳಲ್ಲಿ ಇಲ್ಲ ಎನ್ನುವುದನ್ನು ನಾವು ಕೇಳಿದ್ದೇವೆ. ಆದರೆ ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಅಂದರೆ ೧೯೧೮ನೇ ಇಸವಿಯಿಂದ ಕಾಣದಂಥ ಒಂದು ಬರಗಾಲವನ್ನು ನಾವು ಇವತ್ತು ಕಾಣುತ್ತಿದ್ದೇವೆ. ಸುಮಾರು ನಾಲ್ಕು ತಿಂಗಳು ಮಳೆ ಬಿದ್ದಿಲ್ಲ. ಯಾವ ಕಾಲಕ್ಕೆ ಮಳೆ ಬೀಳಬೇಕಾಗಿತ್ತೋ ಅಂದರೆ ಸಾಮಾನ್ಯವಾಗಿ ನಮ್ಮಲ್ಲಿ ಬೆಳೆ ಪಡೆ ಆಗಿರುವ ಕಾಲಕ್ಕೆ ಮಳೆ ಬೀಳಬೇಕಾಗಿತ್ತು. ಆ ಮಳೆ ಬೀಳದೇ ಹೋದ್ದರಿಂದ ಬೆಳೆ ಬರಲಿಲ್ಲ. ಮಳೆಯಿಂದ ಹುಲ್ಲು ಕೂಡಾ ಹುಟ್ಟಿಲ್ಲ. ಇಂಥ ಒಂದು ಪರಿಸ್ಥಿತಿಯಿಂದ ಎಲ್ಲಾಭಾಗಗಳು ಕೂಡಾ ಒಣಗಿ ಹೋದವು. ಏನೋ ಒಂದೇ ಒಂದು ಮಳೆ ಬಂತು. ಸ್ವಲ್ಪ ಕುಡಿಯುವ ನೀರಿಗೆ ಅನುಕೂಲವಾಗಿ ಜನ ಏನು ನಿಟ್ಟುಸಿರು ಬಿಡುತ್ತಿದ್ದರು ಅಂತಹದ್ದು ಹೋಗಿ ಒಂದು ಸಮಾಧಾನದ ಉಸಿರು ಬಿಡುತ್ತಾರೆ. ಇಂಥ ಒಂದು ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಇದೆ. ನಮ್ಮ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಸರ್ಕಾರಕ್ಕೆ ತಿಳಿಸಿದ್ದೇನೆ. ಉತ್ತರ ಕನ್ನಡ ಜಿಲ್ಲೆಯನ್ನು ಒಂದು ಬರಗಾಲ ಪೀಡಿತ ಜಿಲ್ಲೆಯನ್ನಾಗಿ ಪರಿಗಣಿಸಿ ಆದಷ್ಟು ಹೆಚ್ಚಿನ ಹಿತವನ್ನು ನಮ್ಮ ಜಿಲ್ಲೆಗೆ ಮಾಡಬೇಕು ಎಂದು ತಮ್ಮ ಮುಖಾಂತರವಾಗಿ ಅವರನ್ನು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಹೇಳಬೇಕೆಂದರೆ ಕರ್ನಾಟಕದಲ್ಲಿ ಒಂದು ರಾಜಕೀಯವಾಗಿ ಆದಂಥ ಒಂದು ಕ್ರಾಂತಿಕಾರಕ ಅಥವಾ ಐತಿಹಾಸಿಕವಾದಂಥ ಒಂದು ಬದಲಾವಣೆ, ಎಷ್ಟೋ ಜನ ಹೇಳಿದರು, ನಿಮ್ಮ ಕೈಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಆದರೆ ಅಧಿಕಾರವನ್ನು ಎಲ್ಲಿ ಕೊಟ್ಟಿದ್ದಾರೆ. ಯಾರು ಅಧಿಕಾರವನ್ನು ಹಿಂದೆ ಕಸಿದುಕೊಂಡು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರೋ ಅಂದರೆ ಕೆಲವೇ ಜನ ತಮ್ಮ ಕೈಯಲ್ಲಿ ಅಧಿಕಾರವನ್ನು ಇಟ್ಟುಕೊಂಡು ಹೇಳುತ್ತಿರೋ, ಜನರ ಕೈಯಿಂದ ಅಧಿಕಾರವನ್ನು ಹಳ್ಳಿಯ ಸಮಗ್ರ ಜನರ ಕೈಗೆ ನಾವು ಕೊಟ್ಟಿದ್ದೇವೆ. ಅದೇ ಮೊನ್ನೆ ಮೊನ್ನೆ ನಡೆದಂಥ ಮಂಡಲಪಂಚಾಯಿತಿ ಮತ್ತು ಜಿಲ್ಲಾಪರಿಷತ್ತಿನ ಚುನಾವಣೆ. ಆ ಚುನಾವಣೆಯಲ್ಲಿ ನಿಜವಾಗಿ ಕೆಲವು ಜನ ಮಾಡಿದ ಆರೋಪಗಳು ಹಾಗೆ ಅಲ್ಲಿ ಒಂದು ಭ್ರಷ್ಟಾಚಾರಕ್ಕೆ ವಿಶೇಷವಾದ ಆಸ್ಪದ ಬರುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ನನ್ನ ಕ್ಷೇತ್ರದಲ್ಲಿ ನೋಡುವುದಾದರೆ ನಾನು ಇಡೀ ಕರ್ನಾಟಕವನ್ನು ಪ್ರಯಾಣ ಮಾಡಿಲ್ಲ. ಆದರೆ ನನ್ನ ಕ್ಷೇತ್ರದಲ್ಲಿ ನನ್ನ ಜಿಲ್ಲೆಯಲ್ಲಿ ನಾಲ್ಕಾರು ತಾಲ್ಲೂಕುಗಳನ್ನು ಓಡಾಡಿದಾಗ ನನ್ನ ಪಕ್ಷಕ್ಕೆ ಬಂದಂಥ ಎಲ್ಲಾ ಮತಗಳು ನನ್ನ ಮಟ್ಟಿಗೆ ಹೇಳುವುದಾದರೆ ಅತ್ಯಂತ ಪವಿತ್ರವಾದಂಥ ಮತಗಳು. ಯಾವ ಹಣ ಇಲ್ಲದೆ, ಹೆಂಡದ ಆಮಿಷವನ್ನು ತೋರಿಸಿ ಪಡೆದ ಮತಗಳು ಅಲ್ಲ. ಪವಿತ್ರವಾದ ಮತಗಳು. ಎಷ್ಟು ದೊಡ್ಡದಾದ ಕೆಲವು ವ್ಯಕ್ತಿಗಳು ಸ್ವತಂತ್ರವಾಗಿ ನಿಂತಿದ್ದರು, ಬೇರೆ ಪಕ್ಷಗಳಲ್ಲಿಯೂ ನಿಂತಿದ್ದರು. ಅಂಥ ವ್ಯಕ್ತಿಗಳು ಜನರಿಗೆ ಹೆಂಡದ, ಹಣದ ಆಮಿಷ ತೋರಿಸಿದರೂ ಕೂಡಾ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ನೀವು ಇಲ್ಲಿಯವರೆಗೆ ನಮಗೆ ಮೋಸ ಮಾಡಿದ್ದು ಸಾಕು, ಇನ್ನು ಮುಂದೆ ನಿಮ್ಮ ಈ ಮೋಸದ ಬಲೆಯಲ್ಲಿ ನಾವು ಎಂದೂ ಬೀಳುವುದಿಲ್ಲ, ಆದ್ದರಿಂದ ನಮ್ಮ ಜೀವನದಲ್ಲಿ ಒಂದು ಬದಲಾವಣೆಯನ್ನು ತರಲಾಗಿದೆ, ಈ ಒಂದು ಚುನಾವಣೆಯಲ್ಲಿ ಎಂದು ಜನರು ಭಾಗವಹಿಸುತ್ತಿದ್ದರು. ನಾವು ಯಾರಿಗೆ ನಮ್ಮಗಳಿಗೆ ಒಳಿತನ್ನು ಮಾಡಿದ್ದಾರೋ ಆ ನಾಲ್ಕು ವರ್ಷಗಳ ಕಾಲ ಯಾರು ನಮ್ಮ ಜೀವನದಲ್ಲಿ ಬದಲಾವಣೆಯನ್ನು ತರಲಿಕ್ಕೆ ಪ್ರಯತ್ನಪಟ್ಟಿದ್ದಾರೋ ಅವರಿಗೆ ಮತವನ್ನು ಕೊಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ ಮತ್ತು ಹಣ ಹೆಂಡವನ್ನು ಕೊಟ್ಟವರನ್ನು ತಿರಸ್ಕರಿಸಿದ್ದಾರೆ. ಆದ್ದರಿಂದ ನನಗನ್ನಿಸುತ್ತದೆ. ನಮ್ಮ ಕರ್ನಾಟಕ ಸರ್ಕಾರ ಹಾಕಿಕೊಂಡಂಥ ಈ ಕಾರ್ಯಕ್ರಮ ಅತ್ಯಂತ ಉಜ್ವಲವಾದಂಥ ಒಂದು ಕಾರ್ಯಕ್ರಮ. ಇದನ್ನು ಯಾರು ತೆಗಳಬೇಕಾದಂಥದ್ದು ಇಲ್ಲ. ಆದುದರಿಂದ ನನಗೆ ಏನು ಅನಿಸುತ್ತದೆ ಎಂದರೆ ನಮ್ಮ ಕರ್ನಾಟಕ ಸರ್ಕಾರ ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳು ಏನು ಇದ್ದಾವೆ ಅವು ಉಜ್ವಲವಾದಂಥಾ ಕಾರ್ಯಕ್ರಮಗಳಾಗಿವೆ. ಅದನ್ನು ಯಾರು ಕೂಡ ತೆಗಳುವಂತಿಲ್ಲ. ಹೆಚ್ಚು ಕಡಿಮೆ ಯಾವ ಕಾರ್ಯಕ್ರಮಗಳನ್ನೂ ಕೂಡ ಬದಲಾವಣೆ ಮಾಡಲಿಲ್ಲ, ಯಾರು ಇದರ ಬಗ್ಗೆ ಏನೇನು ಕಲ್ಪನೆ ಮಾಡಿಕೊಂಡಿದ್ದರೋ ಅದೆಲ್ಲವೂ ಏನೂ ಆಗಲಿಲ್ಲ. ಇನ್ನಾರಾವರೂ ಆಡಳಿತ ನಡೆಸುತ್ತಾ ಇದ್ದರೆ ಅವೆಲ್ಲವೂ ಬದಲಾವಣೆಯಾಗುತ್ತಿತ್ತು. ಆದುದರಿಂದ ನಾನು ಹೇಳುವುದು ನಮ್ಮ ಸರ್ಕಾರಕ್ಕೆ ಈಗ ಒಳ್ಳೆಯ ಕಾಲ ಬಂದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇನ್ನು ಮೂರನೆಯದಾಗಿ ಹೇಳಬೇಕಾದರೆ. ರಾಜ್ಯಪಾಲರು ನಮ್ಮ ಕನ್ನಡದ ಭಾಷೆ ಬಗ್ಗೆ ಏನು ಹೇಳಿದ್ದಾರೆ ಅದನ್ನು ನಾವು ನೋಡಿದರೆ ನಮ್ಮ ಕನ್ನಡ ಭಾಷೆಯ ಬಗ್ಗೆ ಎಷ್ಟು ಅಭಿಮಾನ ಇರಬೇಕು ಅನ್ನುವುದು ಗೊತ್ತಾಗುತ್ತದೆ. ಇಂಗ್ಲಿಷ್‌ನವರು ಒಂದು ದಾಸ್ಯ ಮನೋಭಾವನೆ ನಮ್ಮಲ್ಲಿ ಇನ್ನೂ ಬಿಟ್ಟು ಹೋಗಿಲ್ಲ. ಇದುವರೆಗೂ ಕನ್ನಡ ನುಡಿಯಾದ ಗರ್ಭಗುಡಿಯಲ್ಲಿ ಅಂದರೆ ಕರ್ನಾಟಕದಲ್ಲಿರುವ ವಿಧಾನಸೌಧದ ಗರ್ಭಗುಡಿಯಲ್ಲಿ ಒಮ್ಮೊಮ್ಮೆ ಕನ್ನಡವನ್ನು ವಿರೋಧಿಸಿ ಮಾತನಾಡುವುದನ್ನು ನಾನು

ಕೇಳಿದ್ದೇನೆ. ಈ ಸಂದರ್ಭದಲ್ಲಿ ನಾನು ಸಲಹೆ ಮಾಡಬೇಕಾದುದು ಇಷ್ಟೆ. ನಮಗೆ ಕನ್ನಡದ ಬಗ್ಗೆ ಗೌರವ ಉಳಿಯಬೇಕು ಅನ್ನುವ ಹಾಗೆ ಇದ್ದರೆ ಈ ಸದನದಲ್ಲಿ ಕುಳಿತಿರುವ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಕನ್ನಡ ನುಡಿಗೆ ಅಂದರೆ ನಮ್ಮ ತಾಯಿ ನುಡಿಗೆ ಯಾವರೀತಿಯಾಗಿಯೂ ಕುಂದುಬಾರದೇ ಇರುವ ರೀತಿಯಲ್ಲಿ ಮಾತನಾಡಬಾರದು. ಇದರ ಬಗ್ಗೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ಏನು ಹೇಳಿದ್ದಾರೆ ಅದನ್ನು ನಾನು ಹೇಳುತ್ತೇನೆ. ಏನೆಂದರೆ ನಾವು ಇತರೆ ಭಾಷೆಯನ್ನು ಕಲಿಯಬಾರದು ಎಂದು ಹೇಳುತ್ತಿಲ್ಲ. ಮೊದಲು ನಾವು ಕನ್ನಡ ಭಾಷೆಯನ್ನು ಕಲಿಯಬೇಕು ಬೇಕಾದರೆ ಅವರು ಇತರೇ ಭಾಷೆಯನ್ನೂ ಕಲಿಯಲಿ. ನಮ್ಮ ಕರ್ನಾಟಕದಲ್ಲಿ ೪ ಕೋಟಿ ಕನ್ನಡಿಗರು ಏನು ಇದ್ದಾರೆ ನಮ್ಮ ಪ್ರಾದೇಶಿಕ ಭಾಷೆಯಾದ ಕನ್ನಡ ಏನು ಇದೆ ಅದನ್ನು ಮೊದಲು ಅಭ್ಯಾಸ ಮಾಡಬೇಕು ಅನ್ನುವುದನ್ನು ಗಮನಿಸಬೇಕು. ಮತ್ತು ನಮ್ಮ ರಾಜ್ಯದ ಆಡಳಿತ ಕನ್ನಡದಲ್ಲೇ ನಡೆಯಬೇಕು ಮತ್ತು ಪ್ರಾಥಮಿಕ ಹಂತದಿಂದ ಹಿಡಿದು ಕಾಲೇಜಿನವರೆಗೂ ಕೂಡ ಶಿಕ್ಷಣ ಕನ್ನಡದಲ್ಲೇ ಸಿಗುವ ಹಾಗೆ ಮಾಡಬೇಕಾದ್ದು ನಮ್ಮ ಆದ್ಯ ಕರ್ತವ್ಯವಾಗಿದೆ. ಅರೀತಿ ನಡೆಯಲೇ ಬೇಕು ಇಲ್ಲದೇ ಹೋದರೆ ನಾವು ಅದಕ್ಕೆ ಪ್ರತಿಭಟನೆ ಮಾಡಲೇ ಬೇಕಾಗುತ್ತದೆ. ಇನ್ನೊಂದು ಮುಖ್ಯವಾದ ವಿಷಯ ಎಂದರೆ ಯಾರು ಕನ್ನಡಿಗರು ಅಲ್ಲವೋ ಅವರು ತಮ್ಮ ತಾಯಿನುಡಿಯಲ್ಲಿ ಮಾತನಾಡಲಿ, ಅದು ಬಿಟ್ಟು ನಾಲ್ಕು ಶಬ್ದಗಳನ್ನು ಇಂಗ್ಲಿಷ್‌ನಲ್ಲಿ ಬಳಸಿ, ನಮಗೆ ಇಂಗ್ಲಿಷ್ ಬರುತ್ತದೆ ಎನ್ನುವುದಾದರೆ ದೊಡ್ಡಸ್ತಿಕೆಯನ್ನು ತೋರಿಸುವುದು ಸರಿಯಲ್ಲ. ಅದು ನಿಜವಾಗಿಯೂ ಕೂಡ ದೊಡ್ಡಸ್ತಿಕೆಯಾಗುವುದಿಲ್ಲ. ಅದು ಮತ್ತಷ್ಟು ದಾಸ್ಯತನವಾಗುತ್ತದೆ. ಕನ್ನಡ ಬಾರದೇ ಇದ್ದವರು ಒಮ್ಮೊಮ್ಮೆ ತಮ್ಮದೇ ಅದಂಥಾ ತಾಯಿನುಡಿಯಲ್ಲಿ ಮಾತನಾಡಬಹುದು ಎಂದು ನಾನು ಮೊದಲೇ ಹೇಳಿದ್ದೇನೆ. ವಿಧಾನ ಸೌಧದಲ್ಲಿ ಮೊದಲ ಸ್ಥಾನ ಕನ್ನಡಕ್ಕೆ ಸಲ್ಲಬೇಕು. ರಾಜ್ಯಪಾಲರೂ ಸಹ ಅ ರೀತಿ ಮಾಡಿದ್ದಾರೆ. ಆದರೆ ಈ ಕನ್ನಡದ ಬಗ್ಗೆ ಇದುವರೆಗೆ ಎಷ್ಟರಮಟ್ಟಿಗೆ ಸಾಧನೆಯಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಇದರ ಬಗ್ಗೆ ಕನ್ನಡನುಡಿಯ ವರದಿಗಳ ಏನು ಅಗಬೇಕಾಗಿತ್ತು ಅದೂ ಆಗಿಲ್ಲ. ಇನ್ನುಮೇಲಾದರೂ ಕೂಡ ಕನ್ನಡಕ್ಕೆ ಆದ್ಯತೆ ಕೊಟ್ಟು, ಕನ್ನಡಿಗರಿಗೆ ಉದ್ಯೋಗ ಕ್ಷೇತ್ರದಲ್ಲಿ, ಶಿಕ್ಷಣಕ್ಷೇತ್ರದಲ್ಲಿ ಇನ್ನೂ ಯಾವ್ಯಾವ ಕ್ಷೇತ್ರದಲ್ಲಿ ಇದರ ಬಗ್ಗೆ ಆದ್ಯತೆ ಕೊಡಬೇಕೋ ಅರೀತಿ ಕೊಟ್ಟು ನಮ್ಮ ಕನ್ನಡ ನುಡಿಯನ್ನು ಚೆನ್ನಾಗಿ ಬೆಳಕಿಗೆ ತರಬೇಕಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಈಗ ಯಾರು ಕೂಡ ಅಪಚಾರ ಮಾಡುತ್ತಾ ಇಲ್ಲ. ಈ ಕನ್ನಡ ನುಡಿ ಯಾವ ಕುಂದು ಕೊರತೆಗಳು ಕೂಡ ಬಾರದೇ ಇದ್ದ ಹಾಗೆ ತಾವು ನೋಡಿಕೊಳ್ಳಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಾಲ್ಕನೆಯದಾಗಿ ನಾನು ಪ್ರಸ್ತಾಪ ಮಾಡಬೇಕಾದಂಥಾ ವಿಚಾರ ಬಹು ಪ್ರಮುಖ್ಯವಾದಂಥ ವಿಚಾರ ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ವಾಸ ಮಾಡತಕ್ಕಂಥಾ ಜನರು ಏನು ಇದ್ದಾರೆ ಶೇಕಡಾ ೭೦–೭೫–೮೫ ರಷ್ಟು ಜನ ಏನು ಇದ್ದಾರೆ. ಅಂದರೆ ನಮ್ಮ ರೈತರು ಏನು ಇದ್ದಾರೆ ಅವರನ್ನು ನಾವು ಯಾವಾಗಲೂ ಮರೆಯಬಾರದು. ನಾವು ಈವೊತ್ತಿನ ದಿವಸ ರೈತರಿಗಾಗಿ ಏನು ಮಾಡಿದ್ದೇವೆ. ರೈತ ಎಂದರೆ ದೇಶದ ಬೆನ್ನೆಲುಬು ಇದ್ದ ಹಾಗೆ. ಪರಂಪರಾನುಗತವಾಗಿ ಬಂದಿರತಕ್ಕಂಥ ರೈತನಿಗೆ, ಮತ್ತು ದೇಶದ ಬೆನ್ನೆಲುಬು ಎಂದು ಹೇಳತಕ್ಕಂಥಾ ರೈತನಿಗೆ, ದೇಶದ ಅನ್ನದಾತ ಎಂದು ಹೇಳತಕ್ಕಂಥಾ ರೈತನಿಗೆ ಇಷ್ಟರವರೆಗೆ ನಾವು ಏನು ಮಾಡಿದ್ದೇವೆ ಅನ್ನುವುದನ್ನು ಲೆಕ್ಕ ಹಾಕಿ ನೋಡಿದಾಗ ಅವನನ್ನು ನಾವು ಕೇವಲ ಒಂದು ವೋಟಿನ ಬ್ಯಾಂಕನ್ನಾಗಿ ಮಾಡಿಕೊಂಡಿದ್ದೇವೆ ಅಷ್ಟೆ. ಇಲ್ಲಿಯವರೆಗೆ ರೈತರಿಗೆ ಒಳ್ಳೊಳ್ಳೆಯ ಆಶ್ವಾಸನೆಗಳನ್ನು ಕೊಟ್ಟು, ಅವರ ಮುಂದೆ ನಾನಾ ರೀತಿಯ ಘೋಷಣೆಗಳನ್ನು ಕೂಗಿ ಅವರನ್ನೆಲ್ಲಾ ಮೌಢ್ಯರನ್ನಾಗಿ ಮಾಡಲಾಗಿತ್ತು. ಆದರೆ ಈಗ ನಮ್ಮ ಜನತಾ ಸರ್ಕಾರದವರು ವಿದ್ಯಾವಿಕಾಸ ಯೋಜನೆಯಂತಹ ಒಳ್ಳೊಳ್ಳೆಯ ಕೆಲಸಗಳನ್ನು ಈ ರೈತರ ಸಲುವಾಗಿ ಕೈಕೊಂಡಿರುವುದು ಶ್ಲಾಘನೀಯವಾದುದು. ಈ ವಿದ್ಯಾವಿಕಾಸ ಯೋಜನೆ ರೈತರ ಮನೆ ಬಾಗಿಲಿಗೆ ಹೋಗಿದೆ. ಇಂತಹ ಕೆಲಸ ಇಲ್ಲಿಯವರೆಗೆ ಆಗಿರಲಿಲ್ಲ. ರೈತ ಶತಮಾನಗಳ ಕಾಲದಿಂದ ತನ್ನ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಡತನದಲ್ಲಿಯೇ ಸಾಯುತ್ತಿದ್ದ. ಈ ರೈತರನ್ನು ಎತ್ತಿ ಹಿಡಿಯುವಂತಹ ಕಾರ್ಯ ಇಲ್ಲಿಯವರೆಗೆ ಆಗಿರಲಿಲ್ಲ. ಆದರೆ ನಮ್ಮ ಸರ್ಕಾರ ಇವರ ಸಲುವಾಗಿ ಒಳ್ಳೆಯ ಉತ್ತಮ ಕಾರ್ಯಗಳನ್ನು ಮಾಡುತ್ತಿದೆ. ಯಾವ ರೈತರು ೪ ಎಕರೆಗಳಿಂದ ಹತ್ತು ಎಕರೆಗಳವರೆಗೆ ಜಮೀನನ್ನು ಭೂ ನ್ಯಾಯ ಮಂಡಳಿಗಳಿಂದ ಪಡೆದುಕೊಂಡು ಸಾಗುವಳಿ ಮಾಡುತ್ತಿದ್ದಾರೋ, ಅಂತಹವರು ಭೂ ಒಡೆಯರಿಗೆ ಪರಿಹಾರಧನ ಕೊಡಬೇಕಾಗಿಲ್ಲ, ಭೂಮಿಯ ಪಟ್ಟಾವನ್ನು ಸರ್ಕಾರದಿಂದ ಪಡೆದುಕೊಂಡು ಆ ಭೂಮಿಯ ಒಡೆಯರಾಗಬಹುದು ಎಂದು ನಮ್ಮ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದೆ, ಈ ಒಂದು ಆಜ್ಞೆಯಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ಲಕ್ಷ ರೈತ ಕುಟುಂಬಗಳು ಸಮಾಧಾನದಿಂದ ಜೀವನ ಮಾಡುತ್ತಿವೆ. ನೆಮ್ಮದಿಯಿಂದ ಬದುಕುತ್ತಿವೆ. ಇಂತಹ ಒಂದು ಪರಿಸ್ಥಿತಿಯನ್ನು ನಮ್ಮ ಸರ್ಕಾರ ನಿರ್ಮಾಣ ಮಾಡಿದೆ. ಯಾರ ಎಡೆಯಲ್ಲಿ ಮಾನವೀಯತೆ

ಎಂಬುದು ಇರುವುದಿಲ್ಲವೋ, ಅಂತಹವರು ಇಂತಹ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡು ವುದಿಲ್ಲ. ಅಧಿಕಾರದಲ್ಲಿರುವವರು ಬಡವರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಸೃಷ್ಟಿಸ ಬೇಕಾಗುತ್ತದೆ. ಇದನ್ನು ಕೇವಲ ಮಾತಿನಲ್ಲಿ ಸೃಷ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಬಡ ಜನತೆಗಾಗಿ ಏನನ್ನಾದರೂ ನಿರ್ಮಿಸಿ ಕೊಡಬೇಕೆನ್ನುವವರು ಮೊದಲು ತಮ್ಮ ಎದೆಯಲ್ಲಿ ಮಾನವೀಯತೆಯ ಮೌಲ್ಯಗಳನ್ನು ತುಂಬಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಕೇವಲ ಸ್ವಾರ್ಥ ಮತ್ತು ಭ್ರಷ್ಟಾಚಾರಗಳೇ ಎದೆಯಲ್ಲಿ ತುಂಬಿಕೊಳ್ಳುತ್ತದೆ. ಆದ್ದರಿಂದ ಇದಕ್ಕೆ ಅವಕಾಶ ಕೊಡದೆ ನಮ್ಮ ಎದೆಯಲ್ಲಿ ಹಾಗೂ ಮನಸ್ಸಿನಲ್ಲಿ ಅನುಕಂಪ ಹಾಗೂ ಸಹಕಾರ ಮೌಲ್ಯಗಳನ್ನು ತುಂಬಿಕೊಂಡು ಕೆಲಸ ಮಾಡಿದರೆ ಬಡಜನರಿಗೆ ಒಳ್ಳೆಯದಾಗುತ್ತದೆ. ಇತ್ತೀಚೆಗೆ ನಮ್ಮ ಜನತಾ ಸರ್ಕಾರದಿಂದ ಬಡವರಿಗೆ ಅನುಕೂಲವಾಗುವಂತಹ ಅನೇಕ ಕೆಲಸಗಳು ನಡೆದಿದೆ. ಇವರಲ್ಲಿ ವಿದ್ಯಾವಿಕಾಸ ಯೋಜನೆಯೂ ಸಹ ಒಂದು. ಬಡಜನರ ಜ್ಞಾನ ಜ್ಯೋತಿಯನ್ನು ಬೆಳಗಿಸುವ ಈ ಯೋಜನೆ ಅವರ ಮನೆ ಬಾಗಿಲಿಗೇ ಹೋಗುತ್ತಿದೆ. ನಾನೂ ಸಹ ಹಳ್ಳಿಯ ಒಂದು ಗುಡಿಸಲಿನಲ್ಲಿ ಹುಟ್ಟಿ ಬೆಳೆದ ವ್ಯಕ್ತಿ ಆಗಿದ್ದೇನೆ. ನನ್ನ ತಂದೆಗೆ ಒಂದು ವರ್ಷಕ್ಕೆ ಒಂದು ಪುಸ್ತಕವನ್ನು ಸಹ ನನಗೆ ತಂದುಕೊಡುವ ಶಕ್ತಿ ಇರಲಿಲ್ಲ. ಆದರೂ ನಾನು ಕಷ್ಟಪಟ್ಟು ಓದಿ ಇಂದು ಪದವೀಧರನಾಗಿದ್ದೇನೆ. ಈ ದೇಶದಲ್ಲಿ ಬಡ ಕುಟುಂಬಗಳಲ್ಲಿ ಹುಟ್ಟಿ ಬೆಳೆಯುವಂತಹ ಅನೇಕ ಮಕ್ಕಳಿಗೆ ವಿದ್ಯೆಯನ್ನು ಕಲಿಯುವಂತಹ ಅವಕಾಶವಿಲ್ಲದಿರುವುದನ್ನು ನೋಡಿದಾಗ ನನ್ನ ಎದೆಯಲ್ಲಿ ತುಂಬಾ ನೋವಾಗುತ್ತದೆ. ಸರಿಯಾದ ವಿದ್ಯೆಯನ್ನು ಕಲಿತು ಮುಂದೆ ವಿಜ್ಞಾನಿಗಳಾಗುವಂತಹ, ಸಾಹಿತಿಗಳಾಗುವಂತಹ, ಕಲಾವಿದರಾಗು ವಂತಹ ಎಷ್ಟೋ ಮಕ್ಕಳಿಗೆ ಸರಿಯಾದ ಅವಕಾಶ ಸಿಕ್ಕದೆ ಹಾಳಾಗುತ್ತಿರುವುದನ್ನು ಮತ್ತು ತಮ್ಮ ವ್ಯಕ್ತಿತ್ವವನ್ನು ಬಲಿ ಕೊಡುತ್ತಿರುವುದನ್ನು ನೋಡಿದಾಗ ಮತ್ತು ಇದನ್ನು ನೆನಸಿಕೊಂಡಾಗ ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಇನ್ನು ಇಂತಹ ಒಂದು ಪರಿಸ್ಥಿತಿಯನ್ನು ತಪ್ಪಿಸಬೇಕು ಮತ್ತು ಬಡವರ ಮತ್ತು ಶ್ರೀಮಂತರ ಮಕ್ಕಳ ನಡುವೆ ಇರುವಂತಹ ಅಂತರ ಹೋಗಬೇಕು, ಕಲಿಯುವ ಮಕ್ಕಳ ದೃಷ್ಟಿಯಲ್ಲಿ ಯಾವ ಬೇಧಭಾವವೂ ಇರಬಾರದು ಎಂದುಕೊಂಡು ಮತ್ತು ಈ ಹಂತದಿಂದಲೇ ಸಮಾಜವಾದವನ್ನು ಜಾರಿಯಲ್ಲಿ ತರಬೇಕೆಂದುಕೊಂಡು ನಮ್ಮ ಸರ್ಕಾರ ಮಕ್ಕಳಿಗೆ ಸಮವಸ್ತ್ರಗಳು ಮತ್ತು ಪಠ್ಯಪುಸ್ತಕಗಳನ್ನು ಹಂಚುತ್ತಿರುವುದು ಸ್ತುತ್ಯವಾದ ಕೆಲಸವಾಗಿದೆ. ಈ ಕೆಲಸ ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗಿದೆ. ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಒಳ್ಳೆಯ ಅಭಿವೃದ್ಧಿ ಕೆಲಸಗಳು ಸಹ ಆಗುತ್ತಿವೆ. ಈ ಎಲ್ಲ ಕಾರಣಗಳಿಂದ ಮುಂದಿನ ದಿನಗಳಲ್ಲಿ ನಮ್ಮ ಕರ್ನಾಟಕ ರಾಜ್ಯದ ಎಲ್ಲ ಜನರ ಬದುಕಿನಲ್ಲಿ ಸೂಕ್ತ ಮಾರ್ಪಾಡಾಗುತ್ತದೆ, ಈ ಜನರ ಎದೆಯಲ್ಲಿ ನಗುವು ಮೂಡುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ನಮ್ಮ ಜನರ ಬದುಕು ನಂದನವನದಂತೆ ಚಿಗುರಲಿ ಮತ್ತು ಈ ನಮ್ಮ ಜನರ ಎದೆಯಲ್ಲಿ ನೂರು ಹೂಗಳು ಅರಳಲಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಸಭೆ ಮೇಲೆದ್ದು ನಾಳೆ ಪುನಃ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯು ಸಾಯಂಕಾಲ ೫–೨೫ ಕ್ಕೆ ಮುಕ್ತಾಯವಾಗಿ ಪುನಃ ೧೦–೨–೧೯೮೭ ರಂದು ಬೆಳಿಗ್ಗೆ ೧೨–೦೦ ಗಂಟೆಗೆ ಸಮಾವೇಶಗೊಳ್ಳಬೇಕೆಂದು ನಿಶ್ಚಯಿಸಿತು.)

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.